ಸೆಪ್ಟೆಂಬರ್ 14, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ॥ಎಂ. ಮಲ್ಲಿಕಾರ್ಜುನಯ್ಯ

# ಪೋಲೀಸ್ ನ್ಯೂಸ್

2002
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಕ್ಯಾಸಿನೋ-ಬೆಟ್ಟಿಂಗ್ ದಂಧೆ



# ಅಪ್ಪಿ ಅಪ್ಪಿ 2000 ಕೋಟಿ ಗೆಬರಿದನಂತೆ ಶಾಸಕ ಪಪ್ಪಿ!



## ದೊಡ್ಡಣ್ಣ ಇದೇನಣ್ಣಾ!



## ಡಿಕೆಶಿ ಮಾಡಿದ್ದು ಎಡವಟ್ಟಿಲ್ಲ ತಂತ್ರ!!

## ಬುರುಡೆ ಗ್ಯಾಂಗ್‌ನಲ್ಲಿ ಬರೀ ಬುರುಡೆ!



## ದರ್ಶನ್-ದಿಂಬು ಮತ್ತು ಕಾನೂನು!

## ಲವರ್ ಅಂತ ನಂಬ್ಕೊಂಡ್ ಹೋದ್ರೆ ಮರ್ಡರ್ ಮಾಡಿದ!



1975ರಲ್ಲಿ 'ಶಿಕ್ಷಣ ಸುಧಾರಕ' ಪಾಕ್ಷಿಕ
1985ರಲ್ಲಿ 'ಪೊಲೀಸ್ ನ್ಯೂಸ್' ವಾರಪತ್ರಿಕೆ
1987ರಲ್ಲಿ 'ಪೊಲೀಸ್ ನ್ಯೂಸ್' (ತಮಿಳು)
1989ರಲ್ಲಿ 'ಲೋಕವಾಣಿ' ದೈನಿಕ
1990ರಲ್ಲಿ 'ಮಂಗಳೂರು ಮಿತ್ರ' ಸಂಜೆ ದೈನಿಕ
1992ರಲ್ಲಿ 'ಕರ್ನಾಟಕ ಮಲ್ಲ' ದೈನಿಕ
1996ರಲ್ಲಿ 'ಆದರ್ಶ ಗಂಡ ಹೆಂಡತಿ' ಮಾಸಪತ್ರಿಕೆ
1997ರಲ್ಲಿ 'ಕ್ರೀಡಾ ಸಮಯ' ಮಾಸಿಕ
1999ರಲ್ಲಿ 'ಶುಭದಿನ' ವಾಣಿಜ್ಯ ದೈನಿಕ
1999 ರಲ್ಲಿ 'ಸಿಟಿ ಟುಡೆ' ಸಂಜೆ ದೈನಿಕ
ಆರೋಗ್ಯ ಸ್ಫೂರ್ತಿ, ಮಾಸಿಕ
ಸೌಂದರ್ಯ, ಮಾಸಿಕ
ಸ್ಟೂಡೆಂಟ್ ಗೈಡ್, ಮಾಸಿಕ



## ಪ್ರಶಸ್ತಿ-ಪುನಸ್ಕಾರಗಳು

ಪತ್ರಿಕೋದ್ಯಮದಲ್ಲಿ ಸತತ 25 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ್ದ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು ಕಾಯಾ, ವಾಚಾ, ಮನಸಾ ತ್ರಿವಿಧ ಶುದ್ಧಿಯಿಂದ ದುಡಿಮೆ ಮಾಡಿದ ಫಲವಾಗಿ ಯಶಸ್ಸು ಕಂಡರು. ರಾಜ್ಯ ಹಾಗೂ ಹೊರ ದೇಶಗಳಲ್ಲಿ ಅನೇಕ ಸೇವಾ ಸಂಸ್ಥೆಗಳ ಸದಸ್ಯರಾಗಿ, ಧರ್ಮದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಅಂತರರಾಷ್ಟ್ರೀಯ ಸೇವಾ ಸಂಸ್ಥೆಯಾದ 'ಲಯನ್ಸ್ ಕ್ಲಬ್ ಆಫ್ ಬೆಂಗಳೂರು' ಮೆಜೆಸ್ಟಿಕ್ ಶಾಖೆಯ ಅಧ್ಯಕ್ಷರಾಗಿದ್ದರು. 1989ರಲ್ಲಿ ಸಿಂಗಾಪುರ, ಹಾಂಗ್‌ಕಾಂಗ್ ಮತ್ತಿತರೆ ರಾಷ್ಟ್ರಗಳಿಗೆ ಭೇಟಿ ನೀಡಿ ಪ್ರವಚನ ಗೈದಿದ್ದರು. 1993ರಲ್ಲಿ ಗಲ್ಫ್ ರಾಷ್ಟ್ರಗಳಿಗೆ (ದುಬೈ, ಅಬುದಾಬಿ) ಭೇಟಿ ನೀಡಿ ಅಲ್ಲಿನ ಕನ್ನಡ ಸಂಸ್ಥೆಗಳಿಂದ ಗೌರವ ಸ್ವೀಕರಿಸಿದ್ದರು. 1993-94ರಲ್ಲಿ ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ಪತ್ರಕರ್ತರ ಸಮ್ಮೇಳನದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದಿಂದ 'ಗೌರವ' ಸ್ವೀಕರಿಸಿದ್ದರು. 1998ರಲ್ಲಿ ಮುದ್ರಣ ಕಲೆಯ ಹೆಚ್ಚಿನ ಅಧ್ಯಯನಕ್ಕಾಗಿ ಯುರೋಪ್ ರಾಷ್ಟ್ರಗಳ ಆಹ್ವಾನದ ಮೇರೆಗೆ ಅಲ್ಲಿಗೆ ತೆರಳಿ ಗೌರವ ಸಂಪಾದಿಸಿದ್ದರು. 1999ರಲ್ಲಿ ಕರ್ನಾಟಕ ಪತ್ರಿಕಾ ಅಕಾಡೆಮಿಯಿಂದ 'ಪತ್ರಿಕೋದ್ಯಮದಲ್ಲೇ ವಿಶಿಷ್ಟ ಸಾಹಸ' ಮೆರೆದ ಪ್ರಶಸ್ತಿ ಸ್ವೀಕರಿಸಿದ್ದರು.

# ಭಾರತದ ಮೊದಲ ಕೃತಕ ಬುದ್ಧಿಮತ್ತೆ ಚಾಲಿತ (AI) ನಗರವಾಗಲಿದೆ ಬಿಡದಿ!

✍ ಮಹದೇವ್ ಕೆಂಪಯ್ಯ

ಬಿಡದಿ ದೇಶದ ಮೊದಲ ಕೃತಕ ಬುದ್ಧಿಮತ್ತೆ ಆಧಾರಿತ (AI) ನಗರವಾಗಲಿದೆ ಎಂಬ ಘೋಷಣೆ ಕರ್ನಾಟಕದ ರಾಜಕೀಯ ಹಾಗೂ ಅಭಿವೃದ್ಧಿ ವಲಯದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇತ್ತೀಚೆಗೆ ಘೋಷಿಸಿರುವ ಗ್ರೇಟರ್ ಬೆಂಗಳೂರು ಇಂಟಿಗ್ರೇಟೆಡ್ ಟೌನ್‌ಶಿಪ್ ಯೋಜನೆ ಕೇವಲ ಉಪನಗರದ ಅಭಿವೃದ್ಧಿ ಯೋಜನೆಯಲ್ಲ, ಅದು ಭಾರತದ ನಗರಾಭಿವೃದ್ಧಿ ದೃಷ್ಟಿಕೋನವನ್ನು ಸಂಪೂರ್ಣವಾಗಿ ಬದಲಾಯಿಸುವ ಮಹತ್ವಾಕಾಂಕ್ಷೆಯ ಕನಸಾಗಿದೆ. ಸುಮಾರು 9,000 ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿರುವ ಈ ನಗರವನ್ನು ಕೆಲಸ, ವಾಸ ಹಾಗೂ ಮನರಂಜನೆ (Work-Live- Play) ಮಾದರಿಯಲ್ಲಿ ವಿನ್ಯಾಸಗೊಳಿಸಲಾಗುತ್ತಿದೆ. ಅರ್ಥಾತ್, ಇಲ್ಲಿ ಉದ್ಯೋಗ, ವಾಸಸ್ಥಳ ಮತ್ತು ಜೀವನ ಶೈಲಿಗೆ ಬೇಕಾದ ಎಲ್ಲ ಮೂಲಸೌಕರ್ಯಗಳನ್ನು ಸಮಗ್ರವಾಗಿ ಒಟ್ಟಿಗೆ ಒದಗಿಸಲಾಗುವುದು.

**ಜಾಗತಿಕ ಮಟ್ಟದಲ್ಲಿ ಸಿಂಗಪೂರ್, ಸಿಯೋಲ್, ಬೀಜಿಂಗ್, ದುಬೈ ಹಾಗೂ ಸಾನ್ ಫ್ರಾನ್ಸಿಸ್ಕೊ ಸೇರಿದಂತೆ ಮುಂತಾದ ನಗರಗಳು ಈಗಾಗಲೇ ಎಐ ಆಧಾರಿತ ಆರ್ಥಿಕತೆ ಮತ್ತು ಜೀವನಶೈಲಿಯನ್ನು ಅಭಿವೃದ್ಧಿಪಡಿಸುತ್ತಿವೆ. 2025ರ ಗ್ಲೋಬಲ್ ಎಐ ಸಿಟಿ ಇಂಡೆಕ್ಸ್ ಪ್ರಕಾರ ಸಿಂಗಪೂರ್ ವಿಶ್ವದ ಪ್ರಮುಖ ಎಐ ನಗರ. ಅಲ್ಲಿ ಕೇವಲ ತಂತ್ರಜ್ಞಾನ ಆಧಾರಿತ ಮೂಲಸೌಕರ್ಯವಷ್ಟೇ ಅಲ್ಲದೆ, ಎಐ ಸಂಶೋಧನೆ, ಉದ್ಯಮ, ಶಿಕ್ಷಣ ಹಾಗೂ ಸಾರ್ವಜನಿಕ ಸೇವೆಗಳನ್ನೂ ಡಿಜಿಟಲ್ ತಂತ್ರಜ್ಞಾನದೊಂದಿಗೆ ಸಮೀಕರಿಸಲಾಗಿದೆ!**




### ಭೂ ಸಂತ್ರಸ್ತ ರೈತರಿಗೆ ಪರಿಹಾರ, ಸಹಭಾಗಿತ್ವ

ಈ ಯೋಜನೆಯ ಪ್ರಮುಖ ಅಂಶವೆಂದರೆ ರೈತರಿಗೆ ನೀಡಲಾಗುತ್ತಿರುವ ಪರಿಹಾರ. ರೈತರಿಂದ ಭೂಮಿ ಸ್ವಾಧೀನ ಮಾಡುವ ಸಂದರ್ಭಗಳಲ್ಲಿ ಸಾಮಾನ್ಯವಾಗಿ ತೊಂದರೆಗಳು ಉಂಟಾಗುತ್ತವೆ. ಆದರೆ ಇಲ್ಲಿ ಸರ್ಕಾರ ಪ್ರತಿ ಎಕರೆಗೆ ರೂ. 1.5 ಕೋಟಿಯಿಂದ ರೂ. 2.5 ಕೋಟಿ ವರೆಗೆ ಪರಿಹಾರ ನೀಡುವುದರ ಜೊತೆಗೆ, ನಗದು ಬದಲಿಗೆ ಅಭಿವೃದ್ಧಿಪಡಿಸಿದ ಭೂಮಿಯನ್ನು 50:50 ಅನುಪಾತದಲ್ಲಿ ಹಂಚುವ ವ್ಯವಸ್ಥೆಯನ್ನು ಒದಗಿಸಿದೆ. ಇದು ದೇಶದ ಯಾವುದೇ ಅಭಿವೃದ್ಧಿ ಪ್ರಾಧಿಕಾರಗಳಲ್ಲಿ ಅಳವಡಿಸದ ಹೊಸ ಮಾದರಿಯಾಗಿದೆ. ರೈತರ ಜೀವನೋಪಾಯ ಕಳೆದುಹೋಗದಂತೆ ವಾರ್ಷಿಕ ಅನುದಾನ ನೀಡುವ ನಿರ್ಧಾರವು ಸಾಮಾಜಿಕ ಹೊಣೆಗಾರಿಕೆಯನ್ನು ತೋರಿಸುತ್ತದೆ. ಖುಷ್ಕಿ ಭೂಮಾಲೀಕರಿಗೆ ವರ್ಷಕ್ಕೆ ರೂ. 30,000, ತರಿ ಭೂಮಾಲೀಕರಿಗೆ ರೂ. 40,000 ಹಾಗೂ ಭಾಗಾಯ್ತು ಭೂಮಾಲೀಕರಿಗೆ ರೂ. 50,000 ಅನುದಾನ ನೀಡಲಾಗುವುದು. ಭೂರಹಿತ ಕಾರ್ಮಿಕರಿಗೂ ಪರಿಹಾರದ ರೂಪದಲ್ಲಿ ನಿವೇಶನ ಹಾಗೂ ವಾರ್ಷಿಕ ರೂ. 25,000 ಅನುದಾನ ನೀಡಲಾಗುವುದು. ಅಂತಿಮ ಅಧಿಸೂಚನೆಯ ದಿನಾಂಕದಿಂದ ಪರಿಹಾರ ನೀಡುವವರೆಗೆ ರೈತರ ಜೀವನೋಪಾಯಕ್ಕಾಗಿ ವಾರ್ಷಿಕ ಅನುದಾನವನ್ನೂ ನೀಡಲಾಗುವುದು. ಖುಷ್ಕಿ, ತರಿ ಮತ್ತು ಭಾಗಾಯ್ತು ಭೂಮಾಲೀಕರಿಗೆ ಅನುಗುಣವಾಗಿ ವಾರ್ಷಿಕ ಅನುದಾನ ನಿಗದಿಪಡಿಸಲಾಗಿದೆ. ಭೂ ರಹಿತ ಕಾರ್ಮಿಕರು ಮತ್ತು ಭೂಮಿಯ ದಾಖಲೆ ಇಲ್ಲದವರಿಗೆ ಒಂದು ನಿವೇಶನ ಹಾಗೂ ವಾರ್ಷಿಕ ಅನುದಾನ ನೀಡಲಾಗುವುದು. ಆದಾಯ ತೆರಿಗೆ ಮತ್ತು ಮುದ್ರಾಂಕ ಶುಲ್ಕ ವಿನಾಯಿತಿಯನ್ನೂ ನೀಡಲಾಗುವುದು

### ಸಿಂಗಾಪುರ ವಿಶ್ವದ ಮೊದಲ ಎ.ಐ. ನಗರ

ಬಿಡದಿಯನ್ನು ಎಐ ನಗರವನ್ನಾಗಿ ರೂಪಿಸುವ ಕನಸು ಕೇವಲ ಸ್ಥಳೀಯ ಮಟ್ಟಕ್ಕಷ್ಟೇ ಸೀಮಿತವಲ್ಲ, ಜಾಗತಿಕ ಮಟ್ಟದಲ್ಲಿ ಸಿಂಗಪೂರ್, ಸಿಯೋಲ್, ಬೀಜಿಂಗ್, ದುಬೈ ಹಾಗೂ ಸಾನ್ ಫ್ರಾನ್ಸಿಸ್ಕೊ ಮುಂತಾದ ನಗರಗಳು



ಈಗಾಗಲೇ ಎಐ ಆಧಾರಿತ ಆರ್ಥಿಕತೆ ಮತ್ತು ಜೀವನಶೈಲಿಯನ್ನು ಅಭಿವೃದ್ಧಿ ಪಡಿಸುತ್ತಿವೆ. 2025ರ ಗ್ಲೋಬಲ್ ಎಐ ಸಿಟಿ ಇಂಡೆಕ್ಸ್ ಪ್ರಕಾರ ಸಿಂಗಪೂರ್ ವಿಶ್ವದ ಪ್ರಮುಖ ಎಐ ನಗರ. ಅಲ್ಲಿ ಕೇವಲ ತಂತ್ರಜ್ಞಾನ ಆಧಾರಿತ ಮೂಲಸೌಕರ್ಯವಷ್ಟೇ ಅಲ್ಲದೆ, ಎಐ ಸಂಶೋಧನೆ, ಉದ್ಯಮ, ಶಿಕ್ಷಣ ಹಾಗೂ ಸಾರ್ವಜನಿಕ ಸೇವೆಗಳನ್ನೂ ಡಿಜಿಟಲ್ ತಂತ್ರಜ್ಞಾನದೊಂದಿಗೆ ಜೋಡಿಸಲಾಗಿದೆ. ಸಿಯೋಲ್ ನಗರದಲ್ಲಿ AI Seoul Strategy ಹೆಸರಿನಲ್ಲಿ ಸಾರ್ವಜನಿಕ ಸೇವೆಗಳ ಡಿಜಿಟಲೀಕರಣ, ಸ್ಮಾರ್ಟ್ ಗವರ್ನನ್ಸ್ ಹಾಗೂ ಸಾರಿಗೆ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಬಳಕೆಯ ಮೇಲೆ ಒತ್ತು ನೀಡಲಾಗಿದೆ. ಬೀಜಿಂಗ್ ಹಾಗೂ ಶಾಂಘೈ ಚೀನಾದ ಪ್ರಮುಖ ಎಐ ಕೇಂದ್ರಗಳಾಗಿದ್ದು, ಅಲ್ಲಿ ಸರ್ಕಾರದ ಮಹತ್ವಾಕಾಂಕ್ಷೆಯ ಹೂಡಿಕೆಗಳು ವಿಶ್ವದ ಪ್ರಮುಖ ಸ್ಟಾರ್ಟ್‌ಅಪ್ ಹಾಗೂ ತಂತ್ರಜ್ಞಾನ ಸಂಸ್ಥೆಗಳನ್ನು ಆಕರ್ಷಿಸುತ್ತಿವೆ. ದುಬೈ ತನ್ನ Smart Dubai 2021 ದೃಷ್ಟಿಕೋನದಡಿಯಲ್ಲಿ ಆರೋಗ್ಯ, ಶಿಕ್ಷಣ ಹಾಗೂ ನಗರ ನಿರ್ವಹಣೆಯಲ್ಲಿ ಎಐ ಆಧಾರಿತ ವ್ಯವಸ್ಥೆಗಳನ್ನು ಅಳವಡಿಸಿದೆ.




ಈ ಹಿನ್ನಲೆಯಲ್ಲಿ ಬಿಡದಿ ಯೋಜನೆಯು ವಿಶೇಷವಾಗಿ ಗಮನ ಸೆಳೆಯುತ್ತಿದೆ. ಏಕೆಂದರೆ ಇದನ್ನು ಶೂನ್ಯ ಸಂಚಾರ ದಟ್ಟಣೆ ನಗರವಾಗಿ ರೂಪಿಸಲು ಯೋಜಿಸಲಾಗಿದೆ. 300 ಮೀಟರ್ ಅಗಲದ ಬಿಸಿನೆಸ್ ಕಾರಿಡಾರ್ ಮೂಲಕ ಮುಖ್ಯ ರಸ್ತೆಗಳಿಗೆ ಸಂಪರ್ಕ ಕಲ್ಪಿಸಿ, 70 ಮೀಟರ್ ಅಗಲದ ವರ್ತುಲ ರಸ್ತೆ ಹಾಗೂ ಎಕ್ಸ್‌ಪ್ರೆಸ್‌ವೇ ಮೂಲಕ ನಗರದ ಎಲ್ಲ ಭಾಗಗಳನ್ನು ಸಂಪರ್ಕಿಸಲಾಗುವುದು. ಮುಂದಿನ ದಿನಗಳಲ್ಲಿ ಮೆಟ್ರೋ ಸಂಪರ್ಕವನ್ನು ವಿಸ್ತರಿಸುವ ಆಲೋಚನೆಯೂ ಇದೆ.

ಈ ಎಲ್ಲಾ ಮೂಲಸೌಕರ್ಯದಿಂದಾಗಿ ಬಿಡದಿ, ಕೇವಲ ಉಪನಗರವಲ್ಲದೆ, ಬೆಂಗಳೂರಿನ ಪರ್ಯಾಯ ಕೇಂದ್ರ ವ್ಯವಹಾರ ಜಿಲ್ಲೆ ಆಗಿ ಬೆಳೆಯುವ ಸಾಧ್ಯತೆಯಿದೆ.

### ಹೈದರಬಾದ್...ಪುಣೆ ಮುಂಚೂಣಿಯಲ್ಲಿ

ಭಾರತದಲ್ಲಿ ಇನ್ನೂ ಕೆಲವು ನಗರಗಳನ್ನು ಎಐ ನಗರಗಳಾಗಿ ರೂಪಿಸಲು ಚಿಂತನೆ ನಡೆದಿದೆ. ಹೈದರಾಬಾದ್ ಈಗಾಗಲೇ AI Research Cluster ಹಾಗೂ AI Policy ರೂಪಿಸಿರುವುದು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿದೆ. ತಲಂಗಾಣ ಸರ್ಕಾರ ಹೈದರಾಬಾದ್ ಅನ್ನು ಭಾರತದ ಎಐ ರಾಜಧಾನಿ ಮಾಡಲು ದೃಷ್ಟಿಕೋನ ಹೊಂದಿದೆ. ಮಹಾರಾಷ್ಟ್ರದ ಪುಣೆ ನಗರವು ಸಹ ಸ್ಮಾರ್ಟ್ ಸಿಟಿ ಯೋಜನೆಗಳೊಂದಿಗೆ ಎಐ ತಂತ್ರಜ್ಞಾನದ ಬಳಕೆಯನ್ನು ಅಳವಡಿಸಿಕೊಳ್ಳಲು ಆರಂಭಿಸಿದೆ. ಬೆಂಗಳೂರು ಭಾರತದ ಐಟಿ ರಾಜಧಾನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದರಿಂದ, ಬಿಡದಿಯಲ್ಲಿ ನಿರ್ಮಾಣವಾಗುವ ಎಐ ನಗರವು ತಂತ್ರಜ್ಞಾನದ ನೈಸರ್ಗಿಕ ವಿಸ್ತರಣೆ ಎಂಬಂತೆ ಕಾಣುತ್ತದೆ.

ಬಿಡದಿ ಯೋಜನೆಯ ಇನ್ನೊಂದು ವಿಶೇಷ ಅಂಶವೆಂದರೆ ಸ್ಥಳೀಯ ಪ್ರಥಮ ಉದ್ಯೋಗ ನೀತಿ. ಅಂದರೆ, ಈ ನಗರದಲ್ಲಿ ರೂಪುಗೊಳ್ಳುವ ಎಐ, ಐಟಿ,

☞ 3



ಸಂಪಾದಕ
**ಎಂ. ರಾಹುಲ್**

ನನ್ನ ಟೀಂ
ಹೆಚ್.ಕೆ. ಮಹದೇವ್
ಸಿದ್ದು ಮನ್ನಾಪೂರ
ಮೋಹನ್ ಬೋಳಂಗಡಿ
ಕೋ.ನಾ. ಪ್ರಭಾಕರ್
ವೀರಶೆಟ್ಟಿ ಕುಂಬಾರ
ಬಿ.ಎಂ. ಲವಕುಮಾರ್
ಶಾಂತರಾಜು ಬಿ. ಕಲ್ಲಹಳ್ಳಿ
ಬಿ.ವಿ. ಕುಲಕರ್ಣಿ
ಡಿ. ಸಿದ್ದರಾಜು
ರಾಜೀವ್ ಕೆ. ಬೈರಿ
ಸಂತೋಷ್‌ಕುಮಾರ್
ವೀರನಗೌಡ
ಮಂಜುನಾಥ ಕರೋಳಿ

ಅಕ್ಷರ ಜೋಡಣೆ :
**ಈ. ರಾಜೇಶ್**
ಪ್ರಸರಣಾಧಿಕಾರಿ :
**ಜಿ. ವೀರನಗೌಡ**

# ಇವಿಎಂ ಬದಲು ಬ್ಯಾಲೆಟ್ ಪೇಪರ್... ಯಾವುದು ಸರಿ?

ಡಿಯರ್ ರೀಡರ್ಸ್,

ಕಳೆದ 04-09-2025ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ, ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಇವಿಎಂ ಬದಲು ಬ್ಯಾಲೆಟ್ ಪೇಪರ್ ಬಳಸುವ ಬಗ್ಗೆ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಕಾಂಗ್ರೆಸ್ ಸರ್ಕಾರದ ಈ ನಿರ್ಣಯವನ್ನ ಪ್ರಬಲ ವಿರೋಧ ಪಕ್ಷವಾದ ಬಿಜೆಪಿ ತಿರಸ್ಕರಿಸಿ, ನಾವು ಮತ್ತೆ ಓಬಿ ರಾಯನ ಕಾಲಕ್ಕೆ ಹಿಂತಿರುಗುವುದು ಬೇಡ ಎನ್ನುತ್ತಿದ್ದಾರೆ. ಯಾವುದು ಬೇಕು ಯಾವುದು ಬೇಡ ಎಂದು ತೀರ್ಮಾನಿಸುವ ಮುನ್ನ ಒಂದೆರಡು ವಿಚಾರಗಳನ್ನು ಹಂಚಿಕೊಳ್ಳೋಣ.

ಸ್ವಾತಂತ್ರ್ಯ ನಂತರದ ದಿನಗಳಿಂದ ಹಿಡಿದು ಇವಿಎಂ ಪದ್ಧತಿ ಜಾರಿಗೆ ಬರುವ ತನಕ ಎಲ್ಲ ವಿಧದ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಪಕ್ಷವು ಮಾಡಬಾರದ್ದನ್ನು ಮಾಡಿ ಎಲ್ಲ ಸ್ಥಳೀಯ ಸಂಸ್ಥೆಗಳಲ್ಲಿ, ರಾಜ್ಯ ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಗಳಲ್ಲಿ ಅಧಿಕಾರವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಸಹಸ್ರಾರು ಕಾನೂನುಬಾಹಿರ ಕಾರ್ಯಗಳನ್ನು ನಡೆಸಿರುವುದು ನಮಗೆ ಇತಿಹಾಸದಿಂದ ತಿಳಿದುಬರುತ್ತದೆ!

ಬ್ಯಾಲೆಟ್ ಪೇಪರ್‌ಗಳ ಮೂಲಕ ಮತದಾನ ನಡೆಯುತ್ತಿದ್ದ ಸಂದರ್ಭಗಳಲ್ಲಿ ಮತಗಟ್ಟೆ ಅಧಿಕಾರಿಗಳನ್ನು ಬೆದರಿಸಿ ಅಥವಾ ಅಂತಹ ಅಧಿಕಾರಿಗಳನ್ನು ಆಮಿಷಗಳ ಮೂಲಕ ತಮ್ಮತ್ತ ಸೆಳೆದುಕೊಂಡು ವ್ಯಾಪಕ ಪ್ರಮಾಣದ ರಿಗ್ಗಿಂಗ್ ಮಾಡುವ ಮೂಲಕ ಅಧಿಕಾರವನ್ನು ತಮ್ಮದನ್ನಾಗಿಸಿಕೊಳ್ಳುವ ಕಾನೂನುಬಾಹಿರ ಕಾರ್ಯಗಳನ್ನು ಕಾಂಗ್ರೆಸ್(ಐ) ಪಕ್ಷವು ನಡೆಸಿರುವುದು ಹತ್ತಾರು ಸಂದರ್ಭಗಳಲ್ಲಿ ಬಹಿರಂಗಗೊಂಡಿದೆ ಕೂಡ.





ಸಮಾಜ ವಿರೋಧಿ ಶಕ್ತಿಗಳು, ರೌಡಿಶೀಟರ್‌ಗಳು ಮತ್ತು ಪ್ರಭಾವೀ ವ್ಯಕ್ತಿಗಳ ಮೂಲಕ ಆಯಾ ಮತಗಟ್ಟೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮತಗಟ್ಟೆ ಅಧಿಕಾರಿಗಳನ್ನು ಹೆದರಿಸಿ, ಬೆದರಿಸಿ ಅಥವಾ ಹಣಬಲದ ಮೂಲಕ ಅವರನ್ನು ತಮ್ಮೊಡೆಗೆ ಸೆಳೆದುಕೊಂಡು ಪ್ರತಿಯೊಂದು ಚುನಾವಣೆಗಳಲ್ಲಿ ಬೃಹತ್ ಮಟ್ಟದ ರಿಗ್ಗಿಂಗ್ ಕಾರ್ಯಗಳನ್ನು ಮಾಡುವ ನೈಪುಣ್ಯತೆಯನ್ನು ಪಡೆದಿದ್ದ ಕಾಂಗ್ರೆಸ್(ಐ) ಪಕ್ಷವು ಕೇವಲ ತನ್ನ ಇಂತಹ ಪ್ರಜಾಪ್ರಭುತ್ವ ವಿರೋಧಿ-ಸಮಾಜ ವಿರೋಧಿ ಕಾರ್ಯಗಳಿಂದಲೇ ಅಧಿಕಾರವನ್ನು ಪಡೆಯುತ್ತಿದ್ದುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

2001ರಲ್ಲಿ ತಮಿಳುನಾಡು, ಕೇರಳ, ಪುದುಚೇರಿ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಸಂಪೂರ್ಣವಾಗಿ ಇವಿಎಂ ಯಂತ್ರಗಳನ್ನು ಬಳಸಿ ಮತದಾನದ ಪ್ರಕ್ರಿಯೆಗಳನ್ನು ನಡೆಸಲಾಗಿತ್ತು.

ಭಾರತದ ಮೂಲ ನಿವಾಸಿಗಳು ಮತ್ತು ಬಹುಸಂಖ್ಯಾತರ ವಿರೋಧಿ ನಿಲುವುಗಳಿಂದಾಗಿಯೇ ಕಾಂಗ್ರೆಸ್(ಐ) ಪಕ್ಷವು ತನ್ನ ಅಸ್ತಿತ್ವವನ್ನು ದೇಶದಾದ್ಯಂತ ಕಳೆದುಕೊಳ್ಳುತ್ತಿರುವುದು ಸತ್ಯ! ಆದರೂ ಸಹ ತಮ್ಮ ತಪ್ಪು ಗಳನ್ನು ಮರೆಮಾಚಿ ವಿರೋಧ ಪಕ್ಷಗಳ ಮೇಲೆ ಗೂಬೆ ಕೂರಿಸುವ ಪ್ರಯತ್ನಕ್ಕೆ ಮುಂದಾಗಿರುವ ಕಾಂಗ್ರೆಸ್(ಐ) ಪಕ್ಷದ ನಾಯಕರು, ಇದೀಗ ಇವಿಎಂ ಗಳ ಮೂಲಕ ಮತ ಚಲಾವಣೆಗೆ ಅವಕಾಶವಿರುವುದರಿಂದ ಮುಂದೆಂದಿಗೂ ಅಧಿಕಾರದ ಮಾತು ಮರೀಚಿಕೆ ಎಂಬ ಸತ್ಯ ಈಗಾಗಲೇ ಅವರಿಗೆ ಮನವರಿಕೆಯಾಗಿರುವ ಹಿನ್ನೆಲೆಯಲ್ಲಿ, ಈಗ ತಮ್ಮ ಹಳೆಯ ಸಮಾಜ ವಿರೋಧಿ ಕಾರ್ಯಗಳ ಮೂಲಕ ಬ್ಯಾಲೆಟ್ ಪೇಪರ್‌ನಿಂದ ನಡೆಯುವ ಮತದಾನದ ಪ್ರಕ್ರಿಯೆಯಲ್ಲಿ ವ್ಯಾಪಕ ಪ್ರಮಾಣದ ರಿಗ್ಗಿಂಗ್ ಕಾರ್ಯಗಳನ್ನು ಮಾಡಿಸಿ ಪುನಃ ಅಧಿಕಾರಕ್ಕೆ ಬರುವ ಕನಸನ್ನು ಕಾಣುತ್ತಿರುವಂತೆ ಬಾಸವಾಗುತ್ತಿದೆ!

ಬ್ಯಾಲೆಟ್ ಪೇಪರ್‌ಗಳ ಮೂಲಕ ನಡೆಯುವ ಚುನಾವಣೆಗಳಲ್ಲಿ ಮತ ಎಣಿಕೆ ಕಾರ್ಯ ಪಾರದರ್ಶಕವಾಗಿರುತ್ತದೆ ಎಂದು ಹೇಳುತ್ತಿರುವ ಕಾಂಗ್ರೆಸ್(ಐ)ನಾಯಕರು, ಬ್ಯಾಲೆಟ್ ಪೇಪರ್‌ಗಳ ಮೂಲಕ ನಡೆಯುವ ಚುನಾವಣೆಗಳಲ್ಲಿ ತಮ್ಮ ಗೂಂಡಾಗಿರಿ ರಾಜಕಾರಣದ ಮೂಲಕ ದೊಡ್ಡ ಮಟ್ಟದ ರಿಗ್ಗಿಂಗ್ ನಡೆಸಿ ತಮಗೆ ಬೇಕಾದಂತಹ ಅನುಕೂಲಕರ ಚುನಾವಣೆ ನಡೆಸಬಹುದು ಎಂಬ ಸತ್ಯವನ್ನು ಮಾತ್ರ ತಮ್ಮಲ್ಲೇ ಮುಚ್ಚಿಟ್ಟುಕೊಳ್ಳುತ್ತಿದ್ದಾರೆ!

ಬ್ಯಾಲೆಟ್ ಪೇಪರ್‌ಗಳ ಪದ್ಧತಿಯಲ್ಲಿ ಕುಲಗೆಟ್ಟ ಮತಗಳ ಪ್ರಮಾಣ ಹೆಚ್ಚಿರುತ್ತದೆ ಎಂಬುದು ಇಡೀ ಜಗತ್ತಿಗೇ ಗೊತ್ತು. ಅದೇ ರೀತಿ ಆದರೆ ಇವಿಎಂ ಬಳಕೆಯ ಪದ್ಧತಿಯಲ್ಲಿ ಇಂತಹುದಕ್ಕೆ ಅವಕಾಶವಿರುವುದಿಲ್ಲ ಎಂಬುದೂ ಬಹಿರಂಗ ಸತ್ಯ.

ಈಗಾಗಲೇ ಇವಿಎಂ ಗಳ ಬಗ್ಗೆ ಅನುಮಾನ ವ್ಯಕ್ತಪಡಿಸಿ, ಮಾನ್ಯ ಸುಪ್ರೀಂ ಕೋರ್ಟ್ ಹಾಗೂ ವಿವಿಧ ರಾಜ್ಯಗಳ ಉಚ್ಚನ್ಯಾಯಾಲಯಗಳಲ್ಲಿ ದಾಖಲಾಗಿದ್ದ ಹಲವು ಪ್ರಕರಣಗಳಲ್ಲಿ ಇವಿಎಂ ಮೂಲಕ ನಡೆಸುವ ಮತದಾನವು ಅತ್ಯಂತ ಪಾರದರ್ಶಕವಾಗಿರುತ್ತದೆ ಹಾಗೂ ಯಾವುದೇ ರೀತಿಯ ಚುನಾವಣೋತ್ತರ ಅಕ್ರಮಗಳು ನಡೆಯಲು ಸಾಧ್ಯವೇ ಇಲ್ಲ ಎಂಬ ಪರಮಸತ್ಯ ಸಾಕ್ಷಿ ಸಹಿತ ರುಜುವಾತಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಅತ್ಯಂತ ಪಾರದರ್ಶಕವಾಗಿರುವ ಇವಿಎಂ ಮೂಲಕ ಮತದಾನ ಮಾಡುವ ಪದ್ಧತಿಯನ್ನೇ ಮುಂದುವರೆಸುವ ಸಂಬಂಧ ಹಾಗೂ ವ್ಯಾಪಕ ಪ್ರಮಾಣದ ರಿಗ್ಗಿಂಗ್ ಮಾಡಲು ಅವಕಾಶವಿರುವ ಬ್ಯಾಲೆಟ್ ಪೇಪರ್ ಮೂಲಕ ಮತದಾನಕ್ಕೆ ಅವಕಾಶ ಮಾಡಿಕೊಡದಿರುವ ಸಂಬಂಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿಗಳಿಗೆ ಮನವರಿಕೆ ಮಾಡಿಸುವ ಸಂದರ್ಭವಿದು. ನೀವೇ ಯೋಚಿಸಿನೋಡಿ,

ಇವಿಎಂ ಯಂತ್ರ ಸರಿಯಿಲ್ಲ ಎನ್ನುತ್ತಿರುವ ಕಾಂಗ್ರೆಸ್ ರಾಜ್ಯದಲ್ಲಿ ಎರಡೆರಡು ಭಾರಿ ಅಧಿಕಾರದ ಗದ್ದುಗೆ ಹಿಡಿದಿಲ್ಲವೇ? ಸಿದ್ದರಾಮಯ್ಯ ನವರು ಸಿಎಂ ಆಗಿಲ್ಲವೇ? ಅವರೇ ಹೇಳುತ್ತಿರುವಂತೆ ಇವಿಎಂ ಸರಿಯಿಲ್ಲದಿದ್ದರೆ ಅವರೇಗೆ ಅಧಿಕಾರದ ಗದ್ದುಗೆ ಏರುತ್ತಿದ್ದರು?! ಬಿಜೆಪಿ ಯವರೇ ರಾಜ್ಯ ಆಳಬಹುದಿತ್ತಲ್ಲವೇ... ಕಾಂಗ್ರೆಸ್ ಈ ತರ್ಕ ವಿಚಿತ್ರವಾಗಿದೆ! ಇನ್ನೊಂದು ಅಚ್ಚರಿಯ ವಿಚಾರವೇನು ಅಂದ್ರೆ, ನಮ್ಮ ವಾಟಾಳ್ ನಾಗರಾಜ್ ಅವರು ಕೂಡ ಇವಿಎಂ ಬಗ್ಗೆ ಅಪಪ್ರಚಾರ ಮಾಡುತ್ತಿರುವುದು! ನಾನು ಅದರಿಂದಲೇ ಸೋತಿದ್ದು ಕಣ್ರೀ, ಮತ್ತೆ ಬ್ಯಾಲೆಟ್ ಪೇಪರ್ ಬರ್ತಾ ಇರೋದು ಸರಿಯಾಗಿದೆ, ನಾನಿದನ್ನ ಸ್ವಾಗತಿಸುತ್ತೇನೆ ಎಂದಿದ್ದಾರೆ, ವಾಟಾಳ್ ಪಕ್ಷದ ನಾಯಕ ವಾಟಾಳ್ ನಾಗರಾಜ್!

ಕಡೆಯದಾಗಿ ಒಂದು ಮಾತು, ಇವಿಎಂ ರದ್ದುಮಾಡಿ ಬ್ಯಾಲೆಟ್ ಪೇಪರ್ ತರುವ ಪ್ರಯತ್ನವನ್ನ ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರು ಮಾಡಿಲ್ಲ ವಂತೆ! ಖುದ್ದು ಸಿಎಂ ಸಿದ್ದರಾಮಯ್ಯ ಕೂಡ ಈ ವಿಚಾರದಲ್ಲಿ ಒತ್ತಾಯ ಮಾಡಿಲ್ಲವಂತೆ! ಮಹಾನ್ ನಾಯಕರೊಬ್ಬರು ದೆಹಲಿ ಯವರ ಕಿವಿ ಕಚ್ಚಿ, ಅವರಿಂದ ಒತ್ತಡ ಹಾಕಿಸಿ, ಸಿದ್ದು ಅವರಿಂದ ಈ ಕೆಲಸ ಮಾಡಿಸುತ್ತಿದ್ದಾರೆ... ಎಂಬ ಗುಸುಗುಸು ವಿಧಾನ ಸೌಧದ ಮೊಗಸಾಲೆಯಿಂದ ತೇಲಿಬರುತ್ತಿದೆ! ಇದು ನಿಜವೇ?!!

**-ಸಂ.**

2 ☞

ಸ್ಟಾರ್ಟ್‌ಅಪ್ ಹಾಗೂ ಸೇವಾ ಕ್ಷೇತ್ರಗಳಲ್ಲಿ ಸ್ಥಳೀಯ ಯುವಕರಿಗೆ ಆದ್ಯತೆ ನೀಡಲಾಗುವುದು. ಇದಕ್ಕಾಗಿ ವಿಶೇಷ ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಸ್ಥಳೀಯ ಯುವಕರು ಜಾಗತಿಕ ಮಟ್ಟದ ತಂತ್ರಜ್ಞಾನಗಳಿಗೆ ಹೊಂದಿಕೊಳ್ಳಲು ತರಬೇತಿ ಪಡೆಯುವುದರಿಂದ, ಅವರ ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಇದರಿಂದ ವಲಸೆ ಕಡಿಮೆಯಾಗಿ, ಸ್ಥಳೀಯ ಆರ್ಥಿಕತೆ ಬಲಗೊಳ್ಳುತ್ತದೆ.

ಈ ನಗರವನ್ನು ಹಸಿರು ಹಾಗೂ ಸುಸ್ಥಿರ ನಗರವನ್ನಾಗಿ ಮಾಡಲು 1,100 ಎಕರೆ ಪ್ರದೇಶವನ್ನು ಉದ್ಯಾನಗಳು ಮತ್ತು ಮೈದಾನಗಳಿಗಾಗಿ ಮೀಸಲಿಡಲಾಗುತ್ತಿದೆ. ಜೊತೆಗೆ 26 ಹಳ್ಳಿಗಳನ್ನು ನಗರ ಮಾದರಿಯಲ್ಲಿ ಅಭಿವೃದ್ಧಿಪಡಿಸಿ, ಅವುಗಳಲ್ಲಿ ಶಾಲೆಗಳು, ಆಸ್ಪತ್ರೆಗಳು, ಆಟದ ಮೈದಾನಗಳು ಹಾಗೂ ಭೂಗತ ವಿದ್ಯುತ್ ವ್ಯವಸ್ಥೆಗಳನ್ನು ಕಲ್ಪಿಸಲಾಗುತ್ತಿದೆ. ಹಳ್ಳಿಗಳನ್ನು ಸಂಪೂರ್ಣವಾಗಿ ಅಳಿಸುವ ಬದಲು ಅವುಗಳನ್ನು ಸಮಗ್ರ ನಗರ ಯೋಜನೆಯೊಳಗೆ ಅಳವಡಿಸುವ ಕ್ರಮವು ಸ್ಥಳೀಯ ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಲು ಸಹಾಯ ಮಾಡುತ್ತದೆ.




**ಭೂಸ್ವಾಧೀನದಲ್ಲಿ ಹಲವು ಸವಾಲುಗಳು**

ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಐ ನಗರವೆಂದರೆ ಕೇವಲ ತಂತ್ರಜ್ಞಾನ ಕೇಂದ್ರವಲ್ಲ; ಅದು ಮಾನವನ ಜೀವನದ ಎಲ್ಲ ಆಯಾಮಗಳನ್ನು ಕೃತಕ ಬುದ್ಧಿಮತ್ತೆಯ ನೆರವಿನಿಂದ ಸುಧಾರಿಸುವ ಪ್ರಯತ್ನವಾಗಿದೆ. ಆರೋಗ್ಯ ಸೇವೆಯಲ್ಲಿ ರೋಗ ನಿರ್ಧಾರ, ಸಾರಿಗೆ ವ್ಯವಸ್ಥೆಯಲ್ಲಿ ಸಂಚಾರ ನಿರ್ವಹಣೆ, ಶಿಕ್ಷಣದಲ್ಲಿ ಆಧುನಿಕ ಕಲಿಕೆ, ನಗರ ನಿರ್ವಹಣೆಯಲ್ಲಿ ಸ್ಮಾರ್ಟ್ ನೀರಾವರಿ ಹಾಗೂ ತ್ಯಾಜ್ಯ ನಿರ್ವಹಣೆ ಇವುಗಳೆಲ್ಲ ಎಐ ನಗರದ ಅವಿಭಾಜ್ಯ ಅಂಶಗಳು. ಬಿಡದಿಯನ್ನು ಈ ದೃಷ್ಟಿಕೋನದಿಂದ ರೂಪಿಸಲಾಗುತ್ತಿದೆ ಎಂಬುದು ಗಮನಾರ್ಹ.

ಸಮಗ್ರವಾಗಿ ನೋಡಿದರೆ, ಬಿಡದಿ ಯೋಜನೆ ಕೇವಲ ಉಪನಗರದ ಅಭಿವೃದ್ಧಿಯಲ್ಲ, ಇದು ಭಾರತದ ಭವಿಷ್ಯದ ನಗರಾಭಿವೃದ್ಧಿಯ ಮಾದರಿಯಾಗಿ ಪರಿಣಮಿಸಬಹುದಾದ ಐತಿಹಾಸಿಕ ಯೋಜನೆ. ಸಿಂಗಪೂರ್, ಸಿಯೋಲ್, ದುಬೈ, ಬೀಜಿಂಗ್ ಮುಂತಾದ ಜಾಗತಿಕ ಎಐ ನಗರಗಳಿಗೆ ಸಮಾನವಾಗಿ ನಿಲ್ಲಬಲ್ಲ ಕೇಂದ್ರವಾಗಿ ಬಿಡದಿ ರೂಪುಗೊಳ್ಳುವ ಸಾಧ್ಯತೆ ಇದೆ. ಹೈದರಾಬಾದ್ ಹಾಗೂ ಪುಣೆ ಮುಂತಾದ ಭಾರತೀಯ ನಗರಗಳೂ ಇದೇ ಹಾದಿಯಲ್ಲಿದ್ದರೂ, ಬಿಡದಿಯ ಮಾದರಿ ಸಮಗ್ರತೆ, ರೈತ ಸ್ನೇಹಿ ಪರಿಹಾರ ಹಾಗೂ ಹಸಿರು-ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ವಿಶಿಷ್ಟವಾಗಿದೆ.

ಇದೀಗ ಯೋಜನೆ ಆರಂಭಿಕ ಹಂತದಲ್ಲಿರುವುದರಿಂದ ಅನೇಕ ಸವಾಲುಗಳು ಎದುರಾಗಲಿವೆ. ಭೂಸ್ವಾಧೀನದಲ್ಲಿ ರೈತರ ಅಸಮಾಧಾನ, ಪರಿಸರ ಸಂಬಂಧಿ ಅಂಶಗಳು ಹಾಗೂ ಆರ್ಥಿಕ ಸಂಪನ್ಮೂಲ ಸಂಗ್ರಹಣೆ ಪ್ರಮುಖ ಅಡೆತಡೆಗಳಾಗಬಹುದು. ಆದರೆ ಸರ್ಕಾರ ಘೋಷಿಸಿರುವ ಭರವಸೆಗಳನ್ನು ಪ್ರಾಮಾಣಿಕತೆಯಿಂದ ಜಾರಿಗೆ ತಂದರೆ, ಬಿಡದಿ ನಿಜವಾಗಿಯೂ ದೇಶದ ಮೊದಲ ಸಮಗ್ರ ಎಐ ನಗರವಾಗಿ ಪರಿಣಮಿಸುವ ಸಾಧ್ಯತೆಯಿದೆ. ಒಂದು ಕಾಲದಲ್ಲಿ ಬೆಂಗಳೂರು ಐಟಿ ರಾಜಧಾನಿಯಾಗಿದ್ದಂತೆ, ಮುಂದಿನ ಪೀಳಿಗೆಯಲ್ಲಿ ಬಿಡದಿ ಎಐ ರಾಜಧಾನಿಯಾಗಿ ಬೆಳೆಯಬಹುದಾದ ಭವಿಷ್ಯವನ್ನು ಈ ಯೋಜನೆ ಮುನ್ಸೂಚಿಸುತ್ತಿದೆ.

ಒಟ್ಟಾರೆ, ಗ್ರೇಟರ್ ಬೆಂಗಳೂರು ಭವಿಷ್ಯದಲ್ಲಿ ಮತ್ತೊಂದು ಮಜಲಿಗೆ ಮಗ್ಗುಲು ಬದಲಿಸುತ್ತಿದೆ. ಇದು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಆಗುತ್ತಿದೆ ಎಂಬುದೇ ವಿಶೇಷ.

# ಡಿಕೆಶಿ ಮಾಡಿದ್ದು ಎಡವಟ್ಟಲ್ಲ ತಂತ್ರ?



**ರಾಜ್ಯ ರಾಜಕಾರಣದಲ್ಲೀಗ ಕನಕಪುರದ ಬಂಡೆ ಎಂದು ಕರೆಯಿಸಿಕೊಳ್ಳುವ ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾರೀ ಸುದ್ದಿಯಲ್ಲಿದ್ದಾರೆ. ಅವರ ನಡೆ ಮತ್ತು ಹೇಳಿಕೆಗಳು ಪಕ್ಷದೊಳಗೆ ಮತ್ತು ಹೊರಗೆ ಶತ್ರುಗಳನ್ನು ಹುಟ್ಟುಹಾಕಿದ್ದು, ಬೆಳಗಾಯಿತೆಂದರೆ, ಟೀಕೆ, ಆರೋಪಗಳನ್ನು ಎದುರಿಸುತ್ತಾ ದಿನಗಳನ್ನು ಕಳೆಯುವಂತಾಗಿದೆ. ಆದರೆ ಇದೆಲ್ಲ ಎಡವಟ್ಟಾ ಅಥವಾ ತಂತ್ರನಾ...? ಎಂಬ ಚರ್ಚೆಗಳು ರಾಜ್ಯರಾಜಕೀಯದಲ್ಲಿ ಜೋರಾಗಿದೆ.**

✍ಬಿ.ಎಂ. ಲವಕುಮಾರ್

ರಾಜಕಾರಣದಲ್ಲಿ ತೊಡಗಿಸಿಕೊಂಡಿರುವ ಪ್ರತಿಯೊಬ್ಬ ನಾಯಕನಿಗೂ ತಾನು ಉನ್ನತ ಹುದ್ದೆಗೇರಬೇಕೆಂಬ ಕನಸುಇದ್ದೇ ಇರುತ್ತದೆ. ಕೆಲವರು ತಮಗೆ ಸಿಕ್ಕಿದ ಸ್ಥಾನಗಳಲ್ಲಿ ತೃಪ್ತಿಪಟ್ಟುಕೊಂಡರೆ ಮತ್ತೆ ಕೆಲವರು ಹೇಗಾದರೂ ಮಾಡಿ



ಸಿಎಂ ಕುರ್ಚಿಯಲ್ಲಿ ಆಸೀನರಾಗಬೇಕೆಂದು ಕನಸು ಕಾಣುತ್ತಾರೆ. ಅದಕ್ಕಾಗಿ ಹಗಲಿರುಳು ಶ್ರಮಪಡುವುದಲ್ಲದೆ, ಮೇಲಿಂದ ಮೇಲೆ ರಾಜಕೀಯ ತಂತ್ರಗಳನ್ನು ಮಾಡುತ್ತಲೇ ಇರುತ್ತಾರೆ. ಇದು ರಾಜಕೀಯದಲ್ಲಿ ಸ್ವಾಭಾವಿಕವೇ..

ರಾಜ್ಯ ರಾಜಕೀಯದಲ್ಲಿ ಮುಖ್ಯಮಂತ್ರಿಯಾಗುವ ಕನಸು ಕಂಡವರಲ್ಲಿ ಬೇರೆ, ಬೇರೆ ರಾಜಕೀಯ ಪಕ್ಷದ ನಾಯಕರಿದ್ದಾರೆ. ಕೆಲವರಿಗೆ ಊಹೆ ಮಾಡದೆ ಮುಖ್ಯಮಂತ್ರಿ ಸ್ಥಾನ ಒದಗಿ ಬಂದಿದೆ. ಆದರೆ ಇಂತಹವರ ನಡುವೆ ಸಿಎಂ ಸ್ಥಾನಕ್ಕಾಗಿ ರಾಜಕೀಯ ಜೀವನದಲ್ಲಿ ಕಸರತ್ತುಗಳನ್ನು ಮಾಡುತ್ತಲೇ ಬಂದ ಬಿ.ಎಸ್.ಯಡಿಯೂರಪ್ಪಮುಖ್ಯಮಂತ್ರಿಯಾದರೂ ಪೂರ್ಣಾವಧಿ ಪೂರೈಸುವುದು ಅವರ ರಾಜಕೀಯ ಬದುಕಿನಲ್ಲಿ ಸಾಧ್ಯವಾಗಲೇ ಇಲ್ಲ, ಇದೀಗ ಮುಖ್ಯಮಂತ್ರಿಯಾಗುವ ಕನಸು ಕಾಣುತ್ತಿರುವ ನಾಯಕರಲ್ಲಿ ಡಿ.ಕೆ.ಶಿವಕುಮಾರ್ ಮೊದಲಿಗರಾಗಿ ಕಾಣಿಸುತ್ತಿದ್ದಾರೆ.

ತಾನು ಮುಖ್ಯ ಮಂತ್ರಿಯಾಗಬೇಕೆಂಬ ಬಯಕೆ ಡಿ.ಕೆ.ಶಿವಕುಮಾರ್ ಅವರಲ್ಲಿ ಈ ಹಿಂದಿನಿಂದಲೂ ಇದೆ. ಅದನ್ನು ಹಲವು ಸಂದರ್ಭಗಳಲ್ಲಿ ಹೊರಹಾಕಿದ್ದಾರೆ. ಅಷ್ಟೇ ಅಲ್ಲದೆ 2023ರ ವಿಧಾನಸಭಾ ಚುನಾವಣೆ ನಂತರ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ ಸಿಎಂ ಸ್ಥಾನ ಬದಲಾವಣೆ ವಿಚಾರ ರಾಜ್ಯದಲ್ಲಿ ಆಗಾಗ್ಗೆ ಸದ್ದು ಮಾಡುತ್ತಾ ಬಂದಿದೆ. ಈಗ ಆ ವಿಚಾರ ದೊಡ್ಡ ಮಟ್ಟದಲ್ಲಿ ಸುದ್ದಿಯಾಗುತ್ತಿದ್ದರೆ, ಪಕ್ಷದೊಳಗೆ ಅದಕ್ಕೆ ಭಾರೀ ವಿರೋಧಗಳು ವ್ಯಕ್ತವಾಗುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಆದರೆ ಡಿಕೆಶಿ ಬೆಂಬಲಿಗರು ಮಾತ್ರ, ಸಿಕ್ಕಸಿಕ್ಕಲ್ಲಿ ಆ ವಿಚಾರದಲ್ಲಿ ಭಜನೆ ಮಾಡುತ್ತಲೇ ಇದ್ದಾರೆ.



ಹಾಗೆನೋಡಿದರೆ ಪವರ್ ಶೇರಿಂಗ್ ವಿಚಾರ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಸಿದ್ದರಾಮಯ್ಯ ಅವರು ಸಿಎಂ ಆಗಿ ಅಧಿಕಾರ ವಹಿಸಿಕೊಂಡಲ್ಲಿಂದ ಇಲ್ಲಿ ತನಕ ಆಗಾಗ್ಗೆ ಮುನ್ನಲೆಗೆ ಬರುತ್ತಲೇ ಇದೆ. ಈ ಬಗ್ಗೆ ಅಧಿಕೃತ ಮಾಹಿತಿ ಇಲ್ಲದೆ ಹೋದರೂ ಚರ್ಚೆಗೆ ಗ್ರಾಸವಾಗುತ್ತಲೇ ಹೋಗುತ್ತಿದೆ. ಕೆಲವು ಸಮಯಗಳ ಹಿಂದೆ ಈ ವಿಚಾರವನ್ನು ರಾಷ್ಟ್ರೀಯ ಮಾಧ್ಯಮಗಳ ಮುಂದೆ ಡಿ.ಕೆ.ಶಿವಕುಮಾರ್ ಸೂಚ್ಯವಾಗಿ ಹಂಚಿಕೊಂಡಿದ್ದರು. ಆದರೆ ಸಿಎಂ ಸಿದ್ದರಾಮಯ್ಯ ಮಾತ್ರ ಐದು ವರ್ಷವೂ ನಾನೇ ಮುಖ್ಯಮಂತ್ರಿ ಎಂದು ಹೇಳಿಕೊಂಡೇ ಬರುತ್ತಿದ್ದಾರೆ.

ಒಂದು ವೇಳೆ ಹೈಕಮಾಂಡ್ ಈ ಹಿಂದೆಯೇ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ನಡುವೆ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಒಪ್ಪಂದ ಮಾಡಿದೆ ಎನ್ನುವುದು ಸತ್ಯವಾದರೆ ಇನ್ನೆರಡು ತಿಂಗಳಲ್ಲಿ ಅದು ಗೊತ್ತಾಗಲಿದೆ. ಅದಕ್ಕೂ ಮುನ್ನ ಈಗ ಕಾಂಗ್ರೆಸ್ ಪಕ್ಷದೊಳಗೆ ಎದ್ದಿರುವ ಅಸಮಾಧಾನಗಳು ಡಿ.ಕೆ.ಶಿವಕುಮಾರ್‌ಗೆ ಅಧಿಕಾರ ಹಂಚಿಕೆ ಆಗದಂತೆ ನೋಡಿಕೊಳ್ಳುವಲ್ಲಿ ತೆರೆಮರೆಯ ಯತ್ನಗಳನ್ನು ಮಾಡುತ್ತಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ ಅದಾಗಲೇ ಸಿದ್ದರಾಮಯ್ಯ ಬಣದ ನಾಯಕರು ಡಿ.ಕೆ.ಶಿವಕುಮಾರ್ ಅವರ ನೈತಿಕ ಸ್ಥೈರ್ಯವನ್ನು ಕುಗ್ಗಿಸಲಿಕ್ಕೆ ಏನೆಲ್ಲ ಬೇಕೋ ಅದೆಲ್ಲವನ್ನು ಮಾಡುತ್ತಲೇ ಬರುತ್ತಿದ್ದಾರೆ. ಆದರೆ ಹೈಕಮಾಂಡ್ ಕೃಪಾಕಟಾಕ್ಷ ಡಿಕೆಶಿಯನ್ನು ಕಾಪಾಡುತ್ತಾ ಬರುತ್ತಿದೆ.


ಈ ಹಿಂದೆಯೇ ಡಿ.ಕೆ.ಶಿವಕುಮಾರ್ ಅವರಿಂದ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಕಿತ್ತುಕೊಳ್ಳಬೇಕೆಂದು ಹಲವು ನಾಯಕರು ಬಯಸಿದ್ದರು. ಅದರಲ್ಲಿ ಕೆ.ಎನ್. ರಾಜಣ್ಣ ಅವರು ಒಬ್ಬರಾಗಿದ್ದರು. ಸಮಯ ಸಿಕ್ಕಾಗಲೆಲ್ಲ ಡಿ.ಕೆ.ಶಿವಕುಮಾರ್ ಅವರಿಗೆ ಟಾಂಗ್ ಕೊಡುತ್ತಲೇ ಮುನ್ನಡೆಯುತ್ತಿದ್ದರು. ಇನ್ನು ಡಿಕೆಶಿಯ ಪ್ರಾಬಲ್ಯ ಕುಗ್ಗಿಸಲೆಂದೇ ಮೂರು ಸಿಎಂಗಳ ವಿಚಾರವನ್ನು ಎಳೆದು ತರಲಾಗಿತ್ತು. ಆದರೆ ಅದು ಸಾಧ್ಯವಾಗಿಲ್ಲ, ಮೇಲಿಂದ ಮೇಲೆ ಡಿಕೆಶಿ ಮತ್ತು ಅವರ ಬೆಂಬಲಿಗರನ್ನು ಕಟ್ಟಿಹಾಕುವ ಪ್ರಯತ್ನವನ್ನು ಕೆಲವರು ಮಾಡುತ್ತಾ ಬಂದಿದ್ದರೂ ಅದೆಲ್ಲವನ್ನೂ ಮೀರಿ ಅವರು ಮುನ್ನಡೆಯುತ್ತಿದ್ದಾರೆ.

ಇನ್ನು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅತಿಯಾದ ಅಲ್ಪಸಂಖ್ಯಾತರ ಓಲೈಕೆಯಲ್ಲಿ ತೊಡಗಿದ್ದು, ಹಿಂದೂ ವಿರೋಧಿ ಧೋರಣೆ ತಾಳುತ್ತಿದೆ ಎಂಬ ಆರೋಪಗಳನ್ನು ಬಿಜೆಪಿ ಮಾಡುತ್ತಿದ್ದ ಸಂದರ್ಭದಲ್ಲಿ ಅದನ್ನು ಬ್ಯಾಲೆನ್ಸ್ ಮಾಡುವಲ್ಲಿ ಡಿ.ಕೆ. ಶಿವಕುಮಾರ್ ತಂತ್ರ ರೂಪಿಸುವುದು ಹೊಸದೇನಲ್ಲ ಹೈಕಮಾಂಡ್ ಕುಂಭ ಮೇಳದ ಬಗ್ಗೆ ಅಪಸ್ವರ ಎತ್ತಿದಾಗಲೂ ಕುಟುಂಬ ಸಹಿತರಾಗಿ ಪ್ರಯಾಗ್ ರಾಜ್ ಗೆ ಹೋಗಿ ಬಂದಿದ್ದರು. ಅದಾದ ನಂತರವೂ ಹಿಂದೂ ಧರ್ಮ. ನಂಬಿಕೆ, ದೇವರು ಹೀಗೆ ಎಲ್ಲದರ ಬಗ್ಗೆಯೂ ಮಾತನಾಡಿದ್ದರು.

ಇದೆಲ್ಲವೂ ಡಿ.ಕೆ.ಶಿವಕುಮಾರ್ ಅವರ ರಾಜಕೀಯ ತಂತ್ರದ ಭಾಗವಾಗಿದ್ದು, ಅವರಿಗೆ ಯಾವಾಗ ಯಾವ ರೀತಿಯ ದಾಳಗಳನ್ನು ಉರುಳಿಸಬೇಕು ಎಂಬುದು ಗೊತ್ತಿಲ್ಲದ ವಿಚಾರವೇನಲ್ಲ, ಜತೆಗೆ ಸೋನಿಯಾಗಾಂಧಿ ಮತ್ತು ರಾಹುಲ್ ಗಾಂಧಿ ಒಡನಾಟದಲ್ಲಿರುವ ಕಾರಣ ದಿಂದಾಗಿ ರಾಜ್ಯದಲ್ಲಿ ಅವರ ವಿರೋಧಿಗಳು ಯಾವುದೇ ಮಸಲತ್ತು ಮಾಡಿದರೂ ಅದನ್ನು ಎಲ್ಲಿ? ಯಾವಾಗ? ಹೇಗೆ ಚಿವುಟಿ ಹಾಕಬೇಕು ಎಂಬುದು ಗೊತ್ತೇ ಇದೆ. ಇದಕ್ಕೆ ಕೆ.ಎನ್.ರಾಜಣ್ಣ ಉದಾಹರಣೆಯಾಗಿದ್ದಾರೆ. ಡಿಕೆಶಿಗೆ ಅತಿ ಹೆಚ್ಚು ಟಾಂಗ್ ನೀಡುತ್ತಿದ್ದದ್ದೇ ರಾಜಣ್ಣ.. ಇವತ್ತು ರಾಜಣ್ಣನವರ ಪರಿಸ್ಥಿತಿ ಏನಾಗಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ.

ರಾಜಕೀಯ ಚಾಣಾಕ್ಷತೆ ಮೆರೆಯುತ್ತಿರುವ ಡಿ.ಕೆ.ಶಿವಕುಮಾರ್ ಯಾವುದನ್ನು ಹೇಗೆ? ಯಾರಿಗೆ ತಲುಪಿಸಬೇಕು? ಎಂಬುದನ್ನು ಚೆನ್ನಾಗಿ ಅರಿತಿದ್ದಾರೆ. ಯಾವುದಾದರೂ ವಿಚಾರವನ್ನು ರಾಷ್ಟ್ರಮಟ್ಟದಲ್ಲಿ ತಲುಪಿಸಬೇಕು, ಹೈಕಮಾಂಡ್ ಗೂ ಮುಟ್ಟಬೇಕು ಎನ್ನುವುದಾದರೆ ಅಂಥ ವಿಚಾರವನ್ನು ಅವರು ಇಂಗ್ಲೀಷ್ ನಲ್ಲಿ ರಾಷ್ಟ್ರೀಯ ಮಾಧ್ಯಮಗಳ ಮುಂದೆ ಮಾತಾಡುತ್ತಾರೆ. ಕೆಲವು ಪಕ್ಷದ ಆಂತರಿಕ ವಿಚಾರ ಬಂದಾಗ ಎದುರಾಳಿಗಳ ಟಾಂಗ್ ಗೆ ಉತ್ತರಿಸದೇ ಮೌನವಾಗಿದ್ದುಕೊಂಡೇ ಯಾರಿಂದ ಟಕ್ಕರ್ ಕೊಡಿಸಬೇಕೋ ಅದನ್ನು ಕೊಡಿಸುತ್ತಾರೆ.

ಇನ್ನು ವಿರೋಧ ಪಕ್ಷಗಳಿಗೆ ಟಾಂಗ್ ಕೊಡುವ ಸಲುವಾಗಿಯೇ ಅವರು ಒಂದಿಷ್ಟು ಶ್ಲೋಕ, ಗಾದೆ ಮಾತುಗಳು, ಹಿತನುಡಿಗಳನ್ನು ಕಂಠಪಾಠ ಮಾಡಿದ್ದಾರೆ. ಅದನ್ನು ಯಾವಾಗ ಬೇಕೋ ಆಗ ಹೇಳಿ ಎದುರಾಳಿಗಳ



ಬಾಯಿ ಮುಚ್ಚಿಸುತ್ತಿದ್ದಾರೆ. ಆದರೆ ಸದನದಲ್ಲಿ ಆರ್ ಎಸ್ ಎಸ್ ಗೀತೆ ಹಾಡಿ ಅದಾದ ನಂತರ ಕ್ಷಮೆಯಾಚಿಸಿರುವುದು ಈಗ ದೊಡ್ಡ ಸುದ್ದಿಯಾಗಿದೆ. ಈ ಎಡವಟ್ಟು ಅತ್ತ ತಮ್ಮದೇ ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಸಿಟ್ಟಿಗೆ ಕಾರಣವಾಗಿದ್ದರೆ, ಎದುರಾಳಿ ಪಕ್ಷಗಳ ಆಕ್ರೋಶಕ್ಕೂ ದಾರಿ ಮಾಡಿಕೊಟ್ಟಿದೆ.

ಸದನದಲ್ಲಿ ನಿಂತು ಆರ್ ಎಸ್ ಎಸ್ ಗೀತೆ ಹಾಡಿದ ಡಿ.ಕೆ.ಶಿವಕುಮಾರ್ ಅದರ ಅರ್ಥ ಅರಿತು ಕೊಂಡಿದ್ದರೆ ಬಹುಶಃ ಕ್ಷಮೆ ಯಾಚಿಸುವ ಪ್ರಮೇಯವೇ ಬರುತ್ತಿರಲಿಲ್ಲ ವೇನೋ? ಏಕೆಂದರೆ ಇಷ್ಟಕ್ಕೂ ಆ ಶ್ಲೋಕದಲ್ಲಿ ಕ್ಷಮೆ ಕೇಳುವಂತಹದ್ದೇನು ಇರಲಿಲ್ಲ, ಅದು ಭಾರತಾಂಬೆ ಸಂಬಂಧಿಸಿದ್ದಾಗಿತ್ತು. ಹೀಗಾಗಿ ಆ ಶ್ಲೋಕದ ತಾತ್ಪರ್ಯ ಹೇಳಿಬಿಟ್ಟಿದ್ದರೆ ಸಾಕಿತ್ತು. ಅದು ಈ ದೇಶದಲ್ಲಿರುವ ಎಲ್ಲರಿಗೂ ಅರ್ಥವಾಗುವಂತದ್ದಾಗಿತ್ತು. ಆದರೆ ಇಲ್ಲಿ ಎಡವಟ್ಟು ಮಾಡಿಕೊಂಡಿದ್ದರು. ಕಾಂಗ್ರೆಸ್ ಆರ್ ಎಸ್ ಎಸ್ ನ್ನು ದ್ವೇಷಿಸುತ್ತಾ ಬಂದಿರುವುದರಿಂದ ಅವರು ಹಾಡುವ ಗೀತೆ ಎನ್ನುವ ಕಾರಣಕ್ಕೆ ಇದನ್ನೇ ಮುಂದಿಟ್ಟು ಕೊಂಡು ಅವರ ವಿರೋಧಿಗಳು ಎತ್ತಿಕಟ್ಟಿ ಮಜಾ ನೋಡಿದ್ದರು. ಹಾಲುಕುಡಿದಷ್ಟು ಸಂತಸ ಪಟ್ಟಿದ್ದರು. ಆದರೆ ಗೀತೆ ಹಾಡಿದಕ್ಕೆ ಕ್ಷಮೆ ಯಾಚಿಸಿರುವುದು ಜನ ಅವರನ್ನು ಅಚ್ಚರಿಯಿಂದ ನೋಡುವಂತೆ ಮಾಡಿದೆ.

ಬಿಜೆಪಿ ಅವರ ವಿರುದ್ದವೇ ಅಸಮಾಧಾನ ವ್ಯಕ್ತಪಡಿಸಿದೆ. ಈ ನಡುವೆ ತಮ್ಮದೇ ಪಕ್ಷದಲ್ಲಿ ಅದರಲ್ಲೂ ಅಲ್ಪಸಂಖ್ಯಾತರ ದೃಷ್ಟಿಯಲ್ಲಿ ಆರ್ ಎಸ್ ಎಸ್ ಗೀತೆ ಹಾಡಿದ ಬಳಿಕ ತಾನು ವಿಲನ್ ಆಗಿ ಬಿಡುತ್ತೇನೋ ಎಂಬ ಭಯ, ಅದರಾಚೆಗೆ ಮುಂದೆ ಸಿಎಂ ಸ್ಥಾನ ಹಸ್ತಾಂತರ ವಿಚಾರ ಬಂದಾಗ ಅಲ್ಪಸಂಖ್ಯಾತರು ತನ್ನ ಬೆಂಬಲಕ್ಕೆ ಬರಲಾರರೇನೋ ಎಂಬ ಆತಂಕದಲ್ಲಿರುವ ಡಿ.ಕೆ.ಶಿವಕುಮಾರ್ ಭಾನುಮುಷ್ತಾಕ್ ಅವರಿಂದ ದಸರಾ ಉದ್ಘಾಟನೆಗೆ ವಿರೋಧಗಳು ವ್ಯಕ್ತವಾದಾಗ ಅದಕ್ಕೆ ಪ್ರತಿಕ್ರಿಯೆ ನೀಡುವ ಸಂದರ್ಭ ಚಾಮುಂಡಿಬೆಟ್ಟ ಹಿಂದೂಗಳಿಗೆ ಸೇರಿದ ಆಸ್ತಿ ಅಲ್ಲ ಎಲ್ಲರಿಗೂ ಸೇರಿದ್ದು ಎಂಬ ಹೇಳಿಕೆ ನೀಡಿದ್ದಾರೆ.

ಈ ಹೇಳಿಕೆ ಹಿಂದಿನ ಡ್ಯಾಮೇಜ್ ಕಂಟ್ರೋಲ್ ಗೆ ಇರಬಹುದಾದರೂ ಇದರ ಪರಿಣಾಮಗಳು ಮತ್ತೆ ಡಿ.ಕೆ. ಶಿವಕುಮಾರ್ ಅವರಿಗೆ ಲಾಭಕ್ಕಿಂತ ನಷ್ಟವನ್ನೇ ಮಾಡುವ ಸಾಧ್ಯತೆಯಿದೆ. ಇತ್ತೀಚೆಗೆ ಅವರ ನಡೆಗಳನ್ನು ಹತ್ತಿರದಿಂದ ನೋಡಿದರೆ ಅದರ ಹಿಂದೆ ರಾಜಕೀಯ ಅಡಗಿರುವುದು ಎದ್ದು ಕಾಣಿಸುತ್ತಿದೆ. ದೇವೇಗೌಡರ ನಂತರ ಒಕ್ಕಲಿಗ ನಾಯಕನಾಗಿ ಬಿಂಬಿತರಾಗಲು ಬಯಸುತ್ತಿರುವ ಅವರನ್ನು ಒಕ್ಕಲಿಗರು ಕೈಹಿಡಿದು ಇಲ್ಲಿತನಕ ತಂದಿದ್ದಾರೆ. ಅದು ಏನೇ ಇರಲಿ ಪಕ್ಷದ ಒಳಗೆ ಮತ್ತು ಹೊರಗೆ ಇರುವ ವಿರೋಧಿಗಳನ್ನು ಎದುರಿಸಿ ಸಿಎಂ ಸ್ಥಾನದ ಕನಸನ್ನು ಉಳಿಸಿಕೊಳ್ಳಬೇಕಾದರೆ ಅವರು ಎಚ್ಚರವಾಗಿರುವುದು ಅನಿವಾರ್ಯವಾಗಿದೆ.



# ಇಂಜಿನಿಯರ್ ಎಂದು ಸುಳ್ಳು ಹೇಳಿ ಮದುವೆಯಾದ ಪಾನಿಪುರಿ! ಇನ್ಫೋಸಿಸ್ ಟೆಕ್ಕಿ ಶಿಲ್ಪಾ ಸುಸೈಡ್!!



ಈ ಆಲ್ಬಮ್ ಫೋಟೋಸ್ ನೋಡ್ತಿದ್ರೆ, ಗೊತ್ತಾಗುತ್ತೆ, ಇದು ಅದ್ದೂರಿಯಾದ ಮದುವೆ ಅಂತಾ. ಕಳೆದ ಮೂರು ವರ್ಷದ ಹಿಂದೆ ನಡೆದ ಮದುವೆ ಇದು. ಆದ್ರೆ ಇದೆ ಮದುವೆ ಈಗ ಸಾವಿಗೆ ಸಾಕ್ಷಿಯಾಗಿದೆ. ಅಂದಹಾಗೆ, ಇವರಿಬ್ಬರ ಹೆಸರು ಶಿಲ್ಪಾ ಮತ್ತು ಪ್ರವೀಣ್ ಅಂತಾ. ಪ್ರಸ್ತುತ ಶಿಲ್ಪಾಗೆ 27 ವರ್ಷವಾದ್ರೆ, ಪ್ರವೀಣ್‌ಗೆ 38 ವರ್ಷ. ಇವರಿಬ್ಬರಿಗೆ ಮೂರು ವರ್ಷದ ಹಿಂದೆ ಕುಟುಂಬಸ್ಥರು ಮದುವೆ ಮಾಡಿದ್ರು. ಅರೇಂಜ್ ಮ್ಯಾರೇಜ್.

ಮದುವೆಗೆಂದು ಶಿಲ್ಪಾ ಕುಟುಂಬಸ್ಥರು ಹುಬ್ಬಳ್ಳಿಯಲ್ಲಿದ್ದ ಮನೆ ಮಾರಿ 40 ಲಕ್ಷ ಹಣ ಖರ್ಚು ಮಾಡಿದ್ರಂತೆ. ಈಗ ಶಿಲ್ಪಾಳ ಅನುಮಾನಾಸ್ಪದ ಸಾವಾಗಿದ್ದು ನೇಣು ಬಿಗಿದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. ಪ್ರವೀಣ್ ಮೇಲೆ ವರದಕ್ಷಿಣೆ ಕಿರುಕುಳ ಆರೋಪ ಕೇಳಿಬಂದಿದೆ.

ಶಿಲ್ಪಾ ಕಳೆದ ಐದು ವರ್ಷದಿಂದ ಇನ್ಫೋಸಿಸ್ ನಲ್ಲಿ ಕೆಲಸ ಮಾಡ್ತಿದ್ದ ಹುಡುಗಿ. ಸಂಬಂಧಿಕರು ಹೇಳಿದ್ರು, ಅಂತಾ ಗಂಗಾವತಿ ಮೂಲದ ಪ್ರವೀಣ್ ಎಂಬಾತನಿಗೆ ಶಿಲ್ಪಾ ಕುಟುಂಬಸ್ಥರು ಮದುವೆ ಮಾಡಿಕೊಟ್ಟಿದ್ದರು.

ಮದುವೆ ಸಂದರ್ಭದಲ್ಲಿ ಈ ಪ್ರವೀಣ್ ಬಿಇ ಎಂಟೆಕ್ ಓದಿದ್ದು, ಒರಾಕೋ ಸಂಸ್ಥೆಯಲ್ಲಿ ಇಂಜಿನಿಯರ್ ಎಂದು ಹೇಳಿಕೊಂಡಿದ್ದನಂತೆ! ಆದ್ರೆ, ಕಳೆದ ಎರಡು ವರ್ಷದಿಂದ ಪಾನಿಪುರಿ ಮಾರ್ತಿದ್ದ ಎಂದು ಶಿಲ್ಪಾ ಕುಟುಂಬಸ್ಥರು ಆರೋಪಿಸ್ತಿದ್ದಾರೆ!!

ಸದ್ಯ ಇಬ್ಬರಿಗೂ ಒಂದೂವರೆ ವರ್ಷದ ಮಗು ಇದ್ದು, ಶಿಲ್ಪಾ ಒಂದೂವರೆ ತಿಂಗಳ ಗರ್ಭಿಣಿ ಆಗಿದ್ದು, ಈ ಮಧ್ಯೆ ದಿನ ಕಳೆದಂತೆ ಪದೇಪದೇ ಚಿಕ್ಕಪುಟ್ಟ ವಿಚಾರಕ್ಕೂ ಪ್ರವೀಣ್ ಶಿಲ್ಪಾ ಬಳಿ ಜಗಳ ತೆಗೆಯುತ್ತಿದ್ದನಂತೆ. ವರದಕ್ಷಿಣೆಗಾಗಿ ಕಿರುಕುಳ ಕೊಡ್ತಿದ್ದನಂತೆ. ಮದುವೆ ಸಂದರ್ಭದಲ್ಲಿ 160ಗ್ರಾಂ ಚಿನ್ನ ಕೊಟ್ಟು 40 ಲಕ್ಷ ಖರ್ಚು ಮಾಡಿ ಮದುವೆ ಮಾಡಿದ್ದ ಕುಟುಂಬಸ್ಥರು ಇತ್ತೀಚೆಗೆ ಮತ್ತೆ 10 ಲಕ್ಷ ನೀಡಿದ್ದರಂತೆ.

ಪದೇ ಪದೇ ಜಗಳದ ಕಾರಣದಿಂದ ಹಲವು ಬಾರಿ ರಾಜಿ ಪಂಚಾಯ್ತಿ ಕೂಡ ನಡೆದಿದ್ದು, ಕಳೆದ ಮೂರು ತಿಂಗಳ ಹಿಂದೆ ಶಿಲ್ಪಾ ದಾಸರಹಳ್ಳಿಯಲ್ಲಿದ್ದ ತವರು ಮನೆಗೆ ಬಂದಿದ್ದಳಂತೆ. ಇನ್ನು ಕೆಲ ದಿನಗಳ ಹಿಂದೆ ಪ್ರವೀಣ್ ಮತ್ತೆ ರಾಜಿ ಪಂಚಾಯ್ತಿ ಮಾಡಿ ಶಿಲ್ಪಾಳನ್ನ ಕರೆದೊಯ್ದಿದ್ದನಂತೆ. ಆದರೆ ಈಗ ಶಿಲ್ಪಾ ಮೃತದೇಹ ಅನುಮಾನಾಸ್ಪದವಾಗಿ ಕಂಡುಬಂದಿದ್ದು, ಡೋರ್ ಒಡೆದಿರಲಿಲ್ಲ, ಫ್ಯಾನ್ ಕೆಳಗೆ ಚೇರ್ ಇರಲಿಲ್ಲ, ಕೊಲೆ ಮಾಡಿ ಆತ್ಮಹತ್ಯೆ ಅಂತಿದ್ದಾರೆ. ನಮಗೆ ದೂರು ಕೊಡಬೇಡಿ ಅಂತ ಕೇಳಿಕೊಳ್ತಿದ್ದಾರೆ ಎಂದು ಶಿಲ್ಪಾ ತಾಯಿ ಶಾರದಾ ಕಣ್ಣೀರು ಹಾಕ್ತಿದ್ದರೆ.

ಸುದ್ದಗುಂಟೆಪಾಳ್ಯದ ನಿವಾಸದಲ್ಲಿ ಶಿಲ್ಪಾ ಸಾವಾಗಿದ್ದು, ಅಲ್ಲಿನ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಶಿಲ್ಪಾ ಪತಿ ಪ್ರವೀಣ್‌ನನ್ನು ವಶಕ್ಕೆ ಪಡೆದು ವಿಚಾರಣೆ ಮಾಡುತ್ತಿದ್ದಾರೆ. ಇನ್ನು ಶಿಲ್ಪಾ ಕುಟುಂಬಸ್ಥರು ನ್ಯಾಯಕ್ಕಾಗಿ ಬೇಡಿಕೆ ಇಟ್ಟಿದ್ದು ಪೊಲೀಸರ ತನಿಖೆ ಬಳಿಕ ಸತ್ಯಾಸತ್ಯತೆ ಹೊರಬರಬೇಕಿದೆ.....



# ಗಂಡನ ಅಕ್ರಮ ಸಂಬಂಧ - ನೇಣು ಜೀರಿಕೊಂಡ ಬ್ಯಾಂಕ್ ಕ್ಯಾಷಿಯರ್!



ಇನ್ನೊಂದು ಕಡೆ, ಗಂಡನ ಅಕ್ರಮ ಸಂಬಂಧ ಹಾಗೂ ವರದಕ್ಷಿಣೆ ಕಿರುಕುಳದಿಂದ ಮನ ನೊಂದು ಗೃಹಿಣಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ಸಿಡೇದಹಳ್ಳಿಯಲ್ಲಿ ನಡೆದಿದೆ.

ಪೂಜಶ್ರೀ (28) ಆತ್ಮಹತ್ಯೆಗೆ ಶರಣಾದ ನತದೃಷ್ಟೆ. ಇವರು ಹುಬ್ಬಳ್ಳಿ ಮೂಲದವರು. ಗಂಡ ನಂದೀಶ ಗಂಗಾವತಿಯವನು. ಸದ್ಯ, ಬೆಂಗಳೂರು ಹೊರವಲಯದ ಸಿಡೇದಹಳ್ಳಿಯಲ್ಲಿ ನೆಲೆಸಿದ್ದರು. ಎರಡೂ ಮನೆಯವರ ನಿಶ್ಚಯದಂತೆ ಪೂಜಶ್ರೀ ಅವರ ವಿವಾಹ ಮೂರು ವರ್ಷದ ಹಿಂದೆ ನಂದೀಶ್ ಜೊತೆ ಆಗಿದ್ದು, ಇವರಿಗೆ ಒಂದು ಮುದ್ದಾದ ಎರಡು ವರ್ಷದ ಹೆಣ್ಣು ಮಗುವಿದೆ.

ನಂದಿಶ್ ಖಾಸಗಿ ಕಂಪನಿಯಲ್ಲಿ ಟೆಕ್ಕಿಯಾಗಿ ಕೆಲಸ ಮಾಡುತ್ತಿದ್ದರೆ, ಪೂಜಶ್ರೀ ಕೋಟಕ್ ಮಹಿಂದ್ರಾ ಬ್ಯಾಂಕ್ ನಲ್ಲಿ ಕ್ಯಾಷಿಯರ್ ಆಗಿದ್ದರು. ಈ ನಡುವೆ ಪತಿಗೆ ಬೇರೆ ಮಹಿಳೆಯೊಂದಿಗೆ ಅಕ್ರಮ ಸಂಬಂಧ ಇರುವ ವಿಚಾರ ಗೊತ್ತಾಗಿ ಇಬ್ಬರ ನಡುವೆ ಮನಸ್ತಾಪ ಉಂಟಾಗಿತ್ತು! ಆಮೇಲೆ, ಗಂಡ ಹಣಕ್ಕಾಗಿ ಪೀಡಿಸುತ್ತಿದ್ದ ಎನ್ನಲಾಗಿದೆ.

**ರಾಜೀ ಪಂಚಾಯಿತಿ!**

ಇತ್ತೀಚೆಗೆ ನಂದೀಶ್ ಪೂಜಶ್ರೀ ಅವರಿಗೆ ಸದಾ ಹೊಡೆದು ಬಡಿದು ತವರು ಮನೆಯಿಂದ ಹಣ ತರುವಂತೆ ಹಿಂಸೆ ಮಾಡುತ್ತಿದ್ದನಂತೆ. ಇದರಿಂದ, ಪೂಜಾ ಮುನಿದು ತವರಿಗೆ ಹೋಗಿದ್ದು ಎರಡು ಮೂರು ಬಾರಿ ಹಿರಿಯರ ಸಮ್ಮುಖದಲ್ಲಿ ರಾಜೀ ಪಂಚಾಯಿತಿ ನಡೆದಿತ್ತು ಎನ್ನಲಾಗಿದೆ. ಈ ಎಲ್ಲಾ ವೇಳೆ ನಾನು ಪತ್ನಿಗೆ ಇನ್ಮುಂದೆ ಹೊಡೆಯುವುದಿಲ್ಲ, ಮಾನಸಿಕ ಕಿರುಕುಳ ನೀಡುವುದಿಲ್ಲ ಎಂದು ನಂದೀಶ್ ಭರವಸೆ ನೀಡಿ ಪತ್ನಿಯನ್ನು ತನ್ನ ಮನೆಗೆ ಕರೆದೊಯುತ್ತಿದ್ದನಂತೆ!

**ಮೂರು ದಿನದ ಹಿಂದೆ**

ಮೂರು ದಿನಗಳ ಹಿಂದೆ ಪತ್ನಿ ಜೊತೆ ಮತ್ತೆ ಜಗಳ ಮಾಡಿದ್ದ ನಂದೀಶ್ ಆಕೆಗೆ ಹಲ್ಲೆ ಮಾಡಿ ಹಿಂಸಿಸಿದ್ದ. ಪತಿಯ ಕಿರುಕುಳ ತಾಳಲಾರದೇ ಪೂಜಶ್ರೀ ತವರು ಮನೆಗೆ ತೆರಳಿದ್ದರು. ಈ ವಿಚಾರ ತಿಳಿದು ನಂದೀಶ್ ಅತ್ತೆ ಮನೆಗೆ ಬಂದು ಇನ್ನೊಂದು ಹೊಸ ಕಥೆ ಕಟ್ಟಿ ಮತ್ತೆ ಪತ್ನಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಿದ್ದನಂತೆ! ಆದರೆ ಕಳೆದ ಶನಿವಾರ ರಾತ್ರಿ ಪೂಜಶ್ರೀ ನೇಣು ಬಿಗಿದ ಸ್ಥಿತಿಯಲ್ಲಿ ಶವವಾಗಿ ಪತ್ತೆಯಾಗಿದ್ದಾರೆ! ಬಾಗಲಗುಂಟೆ ಪೊಲೀಸ್ ಇನ್ಸ್‌ಪೆಕ್ಟರ್ ಹನುಮಂತರಾಜು ಅವರು ಸ್ಥಳಕ್ಕೆ ಭೇಟಿ ನೀಡಿ ಮಹಜರ್ ನಡೆಸಿದ್ದಾರೆ. ಈ ಸಂಬಂಧ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳ ಆರೋಪಡಡಿ ಕೇಸ್ ದಾಖಲಾಗಿದೆ. ಟೆಕ್ಕಿ ನಂದೀಶ್ ನನ್ನು ಬಂಧಿಸಲಾಗಿದ್ದು ವಿಚಾರಣೆ ನಡೆಯುತ್ತಿದೆ ದುರಂತವೇನೆಂದರೆ, ಪೂಜಶ್ರೀ ದುರ್ಮರಣ ಹೊಂದಿದ ವಾರ್ತೆ ತಿಳಿದು ಆಕೆಯ ಸೋದರ ಮಾವ ಹೃದಯಘಾತಕ್ಕೀಡಾಗಿ ತೀರಿಕೊಂಡಿದ್ದಾರೆನ್ನಲಾಗಿದೆ! ಅವಳನ್ನು ಸಾಲ ಸೋಲ ಮಾಡಿದ್ದೆ ಆ ಸೋದರ ಮಾವ ಅಂತೇ!! ಈಗ ಇಬ್ಬರ ಮಣ್ಣಿನ ಕಾರ್ಯ ಮತ್ತು ಭೂಶಾಂತಿ ಕಾರ್ಯ ಒಟ್ಟೊಟ್ಟಿಗೆ ನಡೆಯುತ್ತಿದೆ!!! ಎಂಥಾ ದುರ್ವಿಧಿ...



# ಇನ್ನೂ ಇದೆಯಾ ಡೌರಿ ಪೀಡನೆ?!

ಭಾರತದಲ್ಲಿ, ಪ್ರತಿಯೊಬ್ಬರೂ ಮಹಿಳಾ ಹಕ್ಕುಗಳಿಗಾಗಿ ಹೋರಾಡುತ್ತಾರೆ. ನಮ್ಮ ಹೆಮ್ಮೆಯ ಪ್ರಧಾನಿ ಯವರೇ ಹೇಳಿದ್ದಾರೆ, ಬೇಟಿ ಬಚಾವೋ ಬೇಟಿ ಪಡಾವೋ ಎಂದು... ಆದರೆ ಹೆಣ್ಣಾದವಳು ತನ್ನ ಜೀವನದಲ್ಲಿ ಎಲ್ಲವನ್ನೂ ಸಾಧಿಸಿದ ನಂತರವೂ ಇನ್ನೂ ಅವಳು ತನ್ನ 'ಮದುವೆ' ಗಾಗಿ ವರದಕ್ಷಿಣೆಯನ್ನು ನೀಡಬೇಕಾಗಿದೆ! ಕೆಲವು ಬಾರಿ ವರದಕ್ಷಿಣೆಯ ಕಾರಣದಿಂದ ಕೆಲ ಬಡವರು ತಮ್ಮ ಹೆಣ್ಣುಮಕ್ಕಳನ್ನು ಹುಟ್ಟಿದ ನಂತರ ಅಥವಾ ಹುಟ್ಟುವ ಮೊದಲೇ ಹೇಗೋ ಕೊಲ್ಲುತ್ತಾರೆ! ಹೆಣ್ಣು ಮಕ್ಕಳು ಬೆಳೆದ ನಂತರ ಅವರಿಗೆ ಉತ್ತಮ ಶಿಕ್ಷಣವನ್ನುಕೊಡಿಸಲಾಗದೆ, ಮದುವೆಗೆ ವರದಕ್ಷಿಣೆಯನ್ನು ಹೊಂದಿಸಲಾಗದೆ ಅವರು ಈ ಪಾಪದ ಕೆಲಸ ಮಾಡುತ್ತಾರೆ! ಈ ಆಧುನಿಕ ಯುಗದಲ್ಲಿ ಜನರು ಎಲ್ಲೆಡೆ ತಲುಪುತ್ತಿದ್ದಾರೆ ಮತ್ತು ಅನೇಕ ವಿಷಯಗಳನ್ನು ಸಾಧಿಸುತ್ತಿದ್ದಾರೆ. ಆದರೆ ಇನ್ನೂ ಅನೇಕರಲ್ಲಿ ವರದಕ್ಷಿಣೆ ವಿರುದ್ಧ ನಮ್ಮ ಆಲೋಚನೆ ಒಂದೇ ಆಗಿದೆ ಅನ್ನೋದು ವಿಪರ್ಯಾಸ. ವರದಕ್ಷಿಣೆ ವ್ಯವಸ್ಥೆಯು ರಾಜ್ಯದಿಂದ ರಾಜ್ಯಕ್ಕೆ ಮತ್ತು ವರನ ಕೆಲಸದ ಪ್ರೊಫೈಲ್‌ನಲ್ಲಿ ಬದಲಾಗುತ್ತದೆ.

ದೇಶದ ಉತ್ತರ ಭಾಗದಲ್ಲಿ ವರದಕ್ಷಿಣೆಗಿಂತ ಸರ್ಕಾರಿ ಉದ್ಯೋಗ, ವೈದ್ಯ ಅಥವಾ ಇಂಜಿನಿಯರ್ ಹೊಂದಿರುವ ವರನನ್ನು ನೋಡಿದರೆ ಹಣದ ವಿಷಯದಲ್ಲಿ ದೊಡ್ಡದಾಗಿ ವರದಕ್ಷಿಣೆ ಕೇಳುತ್ತಾರೆ ಮತ್ತು ದೇಶದ ದಕ್ಷಿಣ ಭಾಗದಂತೆ, ವಧುವಿಗೆ ಭೂಮಿ, ಆಭರಣದ ವಿಷಯದಲ್ಲಿ ವರದಕ್ಷಿಣೆ ನೀಡುವಂತೆ ಒತ್ತಾಯಿಸಲಾಗುತ್ತದೆ. ಪ್ರಾಚೀನ ಕಾಲದಲ್ಲಿ ವರದಕ್ಷಿಣೆಯನ್ನು ಮೇಲ್ಜಾತಿ ಕುಟುಂಬಗಳಿಂದ ಮಾತ್ರ ತೆಗೆದುಕೊಳ್ಳಲಾಗುತ್ತಿತ್ತು, ಆದರೆ ಈಗ ಎಲ್ಲರಿಗೂ ಸಾರ್ವತ್ರಿಕವಾಗುತ್ತಿದೆ. ಈಗಲೂ ಭಾರತದಲ್ಲಿ ಮದುವೆಯನ್ನು ಎರಡು ಕಡೆಯಿಂದಲೂ ಒಂದು ದೊಡ್ಡ ಅದ್ದೂರಿಯಾಗಿ ಆಚರಿಸಲಾಗುತ್ತದೆ, ಎಲ್ಲಾ ಸಂಬಂಧಿಕರನ್ನು ಕರೆದು ಮದುವೆ ಆಗುವವರೆಗೂ ಅವರ ಸಂಪೂರ್ಣ ಕಾಳಜಿ ವಹಿಸಿ, ವಧು ಉತ್ತಮ ಉದ್ಯೋಗದಲ್ಲಿದ್ದರೂ ಅಥವಾ ಉನ್ನತ ಶಿಕ್ಷಣ ಪಡೆದರೂ ವಧು ವರದಕ್ಷಿಣೆ ನೀಡಬೇಕು.

ಭಾರತದಲ್ಲಿ ಇತ್ತೀಚಿನ ದಿನಗಳಲ್ಲಿ ವರದಕ್ಷಿಣೆ ಅಪರಾಧದಂತೆ ಬೆಳೆಯುತ್ತಿದೆ, ಕೆಲವು ಕುಟುಂಬಗಳಲ್ಲಿ ವರದಕ್ಷಿಣೆಯನ್ನು ಬೆದರಿಕೆಯಾಗಿ ಬಳಸಲಾಗುತ್ತದೆ ಅಥವಾ ವಧುವಿನ ಕುಟುಂಬದಿಂದ ಅವರ ಆರ್ಥಿಕ ಸ್ಥಿತಿಯನ್ನು ತಿಳಿದ ನಂತರ ವರನ ಕಡೆಯವರು ಹೆಚ್ಚಿನ ಹಣವನ್ನು ಹೊರತೆಗೆಯಲು ಬಯಸುತ್ತಿದ್ದಾರೆ. ಭಾರತದ ಉತ್ತರ ಮತ್ತು ಪೂರ್ವ ಭಾಗದಲ್ಲಿ ವರದಕ್ಷಿಣೆ-ಸಂಬಂಧಿತ ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ, ಇತ್ತೀಚಿನ ದಿನಗಳಲ್ಲಿ ವರನ ಪೋಷಕರು ಅದನ್ನು ವಧು ಕುಟುಂಬದಿಂದ ವ್ಯವಹಾರದಂತೆ ತೆಗೆದುಕೊಳ್ಳುತ್ತಾರೆ ಎಂದು ನಾವು ಹೇಳಬಹುದು.

ವರದಕ್ಷಿಣೆ ವ್ಯವಸ್ಥೆಯು ಬಡ ಕುಟುಂಬಕ್ಕೆ ವರದಕ್ಷಿಣೆ ನೀಡದೆ ತಮ್ಮ ಮಗಳನ್ನು ಮದುವೆಯಾಗುವ ಯಾವುದೇ ವರನು ಮುಂದೆ ಬರುವುದಿಲ್ಲ ಇದು ವರದಕ್ಷಿಣೆ ವ್ಯವಸ್ಥೆಯು ಹೆಚ್ಚು ಹಿಂಸಾತ್ಮಕವಾಗುತ್ತಿರುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ ಮತ್ತು ವರನ ಪೋಷಕರು ಅದನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ವರದಕ್ಷಿಣೆ ಪದ್ಧತಿಯು ಸಂಪೂರ್ಣವಾಗಿ ನಾಶವಾದರೆ ಯಾವುದೇ ವಧುವಿನ ತಂದೆಗೆ ಯಾವುದೇ ಹೊರೆಯಾಗುವುದಿಲ್ಲ ಮತ್ತು ಹುಟ್ಟಿದ ನಂತರ ಅಥವಾ ಮೊದಲು ಹೆಣ್ಣುಮಕ್ಕಳನ್ನು ಕೊಲ್ಲಲು ಮುಂದಾಗುವುದಿಲ್ಲ, ವರದಕ್ಷಿಣೆಯು ವಧುವಿನ ಕುಟುಂಬದ ಹಿತಾಸಕ್ತಿಯಂತೆ ಇರಬೇಕು, ವರನ ಕುಟುಂಬದ ಬೇಡಿಕೆಯಲ್ಲ, ಆದಾಗ್ಯೂ, ಈ ಸಮಸ್ಯೆಯ ಸಾಮಾಜಿಕ ಸ್ವರೂಪದಿಂದಾಗಿ, ನಮ್ಮ ಸಮಾಜದಲ್ಲಿ ಅಪೇಕ್ಷಿತ ಫಲಿತಾಂಶಗಳನ್ನು ಉತ್ಪಾದಿಸಲು ಶಾಸನವು ವಿಫಲವಾಗಿದೆ. ಈ ಸಮಸ್ಯೆಯನ್ನು ಹೋಗಲಾಡಿಸಲು, ಜನರ ಸಾಮಾಜಿಕ ಮತ್ತು ನೈತಿಕ ಪ್ರಜ್ಞೆಗೆ ಮನವಿ ಮಾಡುವುದು, ಮಹಿಳೆಯರಿಗೆ ಶಿಕ್ಷಣ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಒದಗಿಸುವುದು ಮತ್ತು ವರದಕ್ಷಿಣೆ ವ್ಯವಸ್ಥೆಯ ವಿರುದ್ಧ ಶಾಸನವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು ಮುಖ್ಯ ವಾಗಿದೆ.

# ಬುರುಡೆ ಗ್ಯಾಂಗ್‌ನಲ್ಲಿ ಬರೀ ಬುರುಡೆ!!

ಕೋಟ್ಯಾಂತರ ಭಕ್ತರ ಶ್ರದ್ಧಾ ಕೇಂದ್ರ ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ನಡೆಯುತ್ತಿದ್ದಂತಹ ವ್ಯವಸ್ಥಿತ ರೀತಿಯ ಷಡ್ಯಂತ್ರದ ಒಂದೊಂದೇ ಮಜಲುಗಳು



ಬಹಿರಂಗಗೊಳ್ಳುತ್ತಿದೆ. 5 ತಿಂಗಳ ಹಿಂದೆ ಈ ಷಡ್ಯಂತ್ರ ರೂಪುಗೊಂಡಿತ್ತು. ಇದು ರೂಪುಗೊಂಡಿದ್ದು ಬೆಂಗಳೂರಿನ ವಿದ್ಯಾರಣ್ಯಪುರದ ಎಸ್.ಬಿ. ಮೆನ್ಷನ್ ಎಂಬ ಸರ್ವಿಸ್ ಅಪಾರ್ಟ್‌ಮೆಂಟ್‌ನಲ್ಲಿ. ಈ ಅಪಾರ್ಟ್‌ಮೆಂಟ್ ಷಡ್ಯಂತ್ರದ ರೂವಾರಿ ಗಿರೀಶ್ ಮಟ್ಟಣ್ಣನವರ ಮನೆಯ ಪಕ್ಕದಲ್ಲಿದೆ. ಅಲ್ಲಿಂದ ರೂಪುಗೊಂಡಂತಹ ಷಡ್ಯಂತ್ರ ಸುಮಾರು 4 ತಿಂಗಳ ಕಾಲ ಮುಂದುವರಿದು ಕೊನೆಗೊಮ್ಮೆ ಸ್ಫೋಟಗೊಂಡಿತು. ಪರಿಣಾಮ ರಾಜ್ಯ ಸರಕಾರ ಇದರ ತನಿಖೆಗೆ ಎಡಿಜಿಪಿ ಪ್ರಣವ್ ಮೊಹಂತಿ ಅವರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಿತ್ತು. ಈ ತಂಡ ಸುಮಾರು 45 ದಿನಗಳ ಕಾಲ ತನಿಖೆ ನಡೆಸಿತು. ದೂರುದಾರ ಚೆನ್ನಯ್ಯ ತೋರಿಸಿದಂತಹ 17 ಸ್ಥಳಗಳಲ್ಲಿ ಉತ್ಖನನ ನಡೆಸಿತು. ನಿರೀಕ್ಷಿತ ಫಲ ಸಿಗದೇ ಇದ್ದಾಗ ದೂರುದಾರನೇ ಈ ಷಡ್ಯಂತ್ರದಲ್ಲಿ ಭಾಗಿಯಾಗಿದ್ದಾನೆ ಎನ್ನುವ ಕಾರಣಕ್ಕಾಗಿ ಆತನನ್ನು ಬಂಧಿಸಿ ಎಸ್‌ಐಟಿ ವಶಕ್ಕೆ ಪಡೆದುಕೊಂಡು ತನಿಖೆ ನಡೆಸುತ್ತಿದೆ. ಈ ತನಿಖೆಯ ಸಂದರ್ಭದಲ್ಲಿ ಕಂಡು ಬಂದಂತಹ ಅಂಶಗಳ ಆಧಾರದಲ್ಲಿ ಹಲವು ಮಂದಿ ಈ ಷಡ್ಯಂತ್ರದಲ್ಲಿ ಭಾಗಿಗಳಾಗಿರುವುದು ದೃಢಪಟ್ಟಿದೆ. ಬಂಧಿರುವಂತಹ ಒಂದು ಬುರುಡೆಯ ಒಟ್ಟಿಗೆ ಕನಿಷ್ಠ 6 ಬುರುಡೆಗಳು ಈ ಷಡ್ಯಂತ್ರದಲ್ಲಿ ನೇರವಾಗಿ ಭಾಗಿಯಾಗಿದ್ದರೆ ಇತರ 12 ಬುರುಡೆಗಳು ಪರೋಕ್ಷವಾಗಿ ಒಂದಲ್ಲ ಒಂದು ರೀತಿಯಲ್ಲಿ ಭಾಗಿಗಳಾಗಿದೆ. ದಿನದಿಂದ ದಿನಕ್ಕೆ ಈ ಷಡ್ಯಂತ್ರದ ತನಿಖೆ ಸಂಕೀರ್ಣತೆಯತ್ತ ಸಾಗುತ್ತಿದೆ. ತನಿಖೆಯು ಸಂಪೂರ್ಣಗೊಂಡು ನ್ಯಾಯಾಲಯಕ್ಕೆ ವರದಿ ಒಪ್ಪಿಸುವ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಕಳೆದ 13 ವರ್ಷಗಳಿಂದ ವ್ಯವಸ್ಥಿತ ರೀತಿಯಲ್ಲಿ ಅಂಟಿಸಿಕೊಂಡು ಬಂದಂತಹ ಕಳಂಕ ನೇತ್ರಾವತಿ ನದಿಯಲ್ಲಿ ಕೊಚ್ಚಿ ಹೋಗಲಿದೆ ಎನ್ನುವುದಂತೂ ಸ್ಪಷ್ಟವಾಗುತ್ತದೆ.

### ಷಡ್ಯಂತ್ರದ ರೂವಾರಿಗಳು

2012 ಅಕ್ಟೋಬರ್ 9ರಂದು ಉಜಿರೆ ಕಾಲೇಜಿನ ವಿದ್ಯಾರ್ಥಿನಿ ಸೌಜನ್ಯ ನಾಪತ್ತೆಯಾಗುತ್ತಾಳೆ. ಅದೇ ದಿನ ಆಕೆಯ ತಂದೆ ಚಂದಪ್ಪ ಗೌಡರು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರಿಗೆ ಮಾಹಿತಿ ನೀಡುತ್ತಾರೆ. ಅವರ ಸೂಚನೆಯಂತೆ ಬೆಳ್ತಂಗಡಿ ಠಾಣೆಗೆ ದೂರು ನೀಡುತ್ತಾರೆ. ಅದೇ ದಿನ ರಾತ್ರಿ ಠಾಣಾ ಪ್ರಭಾರಿಯಲ್ಲಿದ್ದ ಹೆಡ್‌ಕಾನ್ಸ್‌ಟೇಬಲ್ ಐತು ನಾಯ್ಕ ಅವರು ನಾಪತ್ತೆ ಪ್ರಕರಣ ದಾಖಲಿಸುತ್ತಾರೆ. ಸೌಜನ್ಯ ನಾಪತ್ತೆಯಾದಂತಹ ಮಣ್ಣಸಂಕ ಪರಿಸರದಲ್ಲಿ ಹುಡುಕಾಟ ನಡೆಸಲಾಗುತ್ತದೆ. ಮರುದಿನ ಅಂದರೆ ಅಕ್ಟೋಬರ್ 10ರಂದು ಮಧ್ಯಾಹ್ನ 12 ಗಂಟೆಯ ವೇಳೆಗೆ ರಸ್ತೆ ಬದಿಯಿಂದ ಸುಮಾರು 15 ಮೀಟರ್ ದೂರದಲ್ಲಿ ನೀರು ಹರಿಯುವ ತೋಡಿನ ಪಕ್ಕದಲ್ಲಿ ಅತ್ಯಾಚಾರಕ್ಕೀಡಾಗಿ ಕೊಲೆಯಾದ ಸ್ಥಿತಿಯಲ್ಲಿ ಆಕೆಯ ಮೃತದೇಹ ಪತ್ತೆಯಾಗುತ್ತದೆ. ಅದೇ ದಿನ ಬೆಳ್ತಂಗಡಿ ಸರಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆದು ಮೃತದೇಹದ ಅಂತಿಮ ಸಂಸ್ಕಾರವೂ ನಡೆಯುತ್ತದೆ. ಈ ಘಟನೆ ನಡೆದು ಒಂದು ವರ್ಷದ ನಂತರ ತಿರುವೊಂದು ಸೃಷ್ಟಿಯಾಗುತ್ತದೆ. ಅದನ್ನು ಬಹಿರಂಗಗೊಳಿಸಿರುವುದು ಉಜಿರೆಯ ಪ್ರಜಾಪ್ರಭುತ್ವ ವೇದಿಕೆಯ ಮಹೇಶ್ ಶೆಟ್ಟಿ ತಿಮರೋಡಿ. ಈ ಪ್ರಕರಣದ ತನಿಖೆಯನ್ನು ಆರಂಭದಲ್ಲಿ ಬೆಳ್ತಂಗಡಿ ವೃತ್ತ ನಿರೀಕ್ಷಕ ಭಾಸ್ಕರ ರೈ ನಡೆಸಿದ್ದರೆ ತದನಂತರ ಸಿಒಡಿ ಡಿವೈಎಸ್ಪಿ ರುದ್ರಮುನಿಯವರು ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಆರೋಪಿ ಕಾರ್ಕಳ ಕುಕ್ಕುಂದೂರಿನ ಸಂತೋಷ್ ರಾವ್‌ನನ್ನು ಘಟನೆ ನಡೆದ 2ನೇ ದಿನಕ್ಕೆ ಬಂಧಿಸಲಾಗಿತ್ತು. ಎಲ್ಲಾ ರೀತಿಯ ತನಿಖೆಯ ನಂತರ ಆತನ ವಿರುದ್ದವೇ ಆರೋಪ ಪಟ್ಟಿ ಸಲ್ಲಿಸಲಾಗಿತ್ತು. ಯಾವಾಗ ಮಹೇಶ್ ಶೆಟ್ಟಿ ತಿಮರೋಡಿ ಹೋರಾಟಕ್ಕೆ ಇಳಿದರೋ ಆ ಸಂದರ್ಭದಲ್ಲಿ ಸೌಜನ್ಯನ ಮನೆಯವರು ಅವರೊಂದಿಗೆ ಸೇರಿಕೊಂಡರು. ಅಲ್ಲಿಂದಲೇ ಈ ಪ್ರಕರಣವನ್ನು ಧರ್ಮಸ್ಥಳಕ್ಕೆ ಸಂಬಂಧಪಟ್ಟವರ ತಲೆಗೆ ಕಟ್ಟುವಂತಹ ಷಡ್ಯಂತ್ರ ರೂಪುಗೊಂಡಿತು. ಅದಕ್ಕೆ ವಿವಿಧ ರೀತಿಯ ಧರ್ಮಸ್ಥಳದ ವಿರುದ್ಧ ಇದ್ದಂತಹ ಅಸಮಾಧಾನಿತರು ಸೇರಿಕೊಂಡರು. ಹೋರಾಟ ತೀವ್ರವಾದಾಗ ಪ್ರತಿರೋಧವು ಸೃಷ್ಟಿಯಾಯಿತು. ಹೋರಾಟ ಕಸುವು ಕಳೆದುಕೊಂಡಿತು. ತದನಂತರ ಈ ತಂಡ ಸೌಜನ್ಯ ಪ್ರಕರಣದ ಆರೋಪಿ ಸಂತೋಷ್‌ರಾವ್‌ಗೆ ಜಾಮೀನು ಕೊಡಿಸುವ ಮತ್ತು ಆತನನ್ನು ಕೇಸಿನಿಂದ ದೋಷಮುಕ್ತಗೊಳಿಸುವಂತಹ ಷಡ್ಯಂತ್ರವನ್ನು ರೂಪಿಸಿತು ಮತ್ತು ಅದರಲ್ಲಿ ಯಶಸ್ವಿಯಾಯಿತು. ಸಂತೋಷ್‌ರಾವ್ ದೋಷಮುಕ್ತಗೊಂಡ ಬಳಿಕ ವಿವಿಧ ಯೂಟ್ಯೂಬ್ ಚಾನೆಲ್‌ಗಳ ಮೂಲಕ ವ್ಯವಸ್ಥಿತ ರೀತಿಯಲ್ಲಿ ಅಪಪ್ರಚಾರ ನಡೆಸಿ ಧರ್ಮಸ್ಥಳದ ವಿರುದ್ಧ ಜನಾಭಿಪ್ರಾಯ ರೂಪಿಸುವ ಪ್ರಯತ್ನ ನಡೆಯಿತು. ಇದರ ಮುಂದುವರಿದ ಭಾಗವೇ ಬುರುಡೆ ಪುರಾಣ.

ದಕ್ಷಿಣ ಕನ್ನಡ
✍ ಮೋಹನ್ ಬೋಳಂಗಡಿ





### ಏನದು?

ಮಹೇಶ್ ಶೆಟ್ಟಿ ತಿಮರೋಡಿಯೊಂದಿಗೆ 2022ರ ಸುಮಾರಿಗೆ ಸೇರಿಕೊಂಡವರೇ ಪೊಲೀಸ್ ಇಲಾಖೆಯಿಂದ ವಜಾಗೊಂಡಂತಹ ಎಸ್‌ಐ ಗಿರೀಶ್ ಮಟ್ಟಣ್ಣನವರ್. ಅವರು ಸೇರಿಕೊಂಡ ಸಂದರ್ಭದಲ್ಲಿ ಕೆಲವರು ಈ ಹೋರಾಟಕ್ಕೆ ಧುಮುಕಿದರು. ಅವರಲ್ಲಿ ಪ್ರಮುಖರಾದವರು ನೀತಿ ತಂಡದ ಟಿ. ಜಯಂತ್, ತಮ್ಮಣ್ಣ ಶೆಟ್ಟಿ, ಪ್ರಸನ್ನ ರವಿ, ಸಂಧ್ಯಾ ಪವಿತ್ರ ನಾಗರಾಜ್, ರಾಧಿಕಾ ಕಾಸರಗೋಡು, ಅಂಬಿಕಾ ಪ್ರಭು ಮತ್ತಿತರರು. ಇವರೆಲ್ಲರೂ ಒಂದು ಗುಂಪಾಗಿ ವಿಷಯವನ್ನು ತಿರುಚಿ ವ್ಯವಸ್ಥಿತ ರೀತಿಯಲ್ಲಿ ಸಾಮಾಜಿಕ ಜಾಲತಾಣಗಳನ್ನು ಬಳಸಿ ಪ್ರಚಾರ ಪಡಿಸತೊಡಗಿದ್ದರು. ಅಲ್ಲಲ್ಲಿ ಸಭೆಗಳನ್ನು ನಡೆಸಿ ಧರ್ಮಸ್ಥಳದ ವಿರುದ್ಧ ವಾಚಾಮಗೋಚರ ನಿಂದಾತ್ಮಕ ವಿಷಯಗಳನ್ನು ಜನರ ಮನಸ್ಸಿಗೆ ತುಂಬುತ್ತಿದ್ದರು. ಇವರ ಈ ಹೋರಾಟ ಏಕಮುಖವಾಗಿ ನಡೆಯಿತು. ಅದಕ್ಕೆ ಶ್ರೀ ಕ್ಷೇತ್ರದ ಕಡೆಯಿಂದ ಪ್ರತಿರೋಧ ಬರಲೇ ಇಲ್ಲ. ಪರಿಣಾಮವಾಗಿ ಇವರ ಹೋರಾಟ ವೈಯಕ್ತಿಕ ನಿಂದನೆವರೆಗೆ ನಡೆಯಿತು. ಅವರು ನ್ಯಾಯಾಲಯದ ಮೊರೆ ಹೋಗಿ ತಡೆಯಾಜ್ಞೆಗಳನ್ನು ತಂದರು. ವಿವಿಧ ಕಡೆಗಳಲ್ಲಿ ಕೇಸು ದಾಖಲಿಸಿದರು.





ಆದರೂ ಅರ್ಭಟ ಮುಂದುವರಿದಿತ್ತು. ಕೊನೆಗೆ ನ್ಯಾಯಾಲಯ ಕಟ್ಟುನಿಟ್ಟಿನ ಆದೇಶ ಹೊರಡಿಸಿದ ಬಳಿಕ ಯೂಟ್ಯೂಬ್‌ಗಳ ಬಾಯಿಗೆ ಬೀಗ ಬಿತ್ತು. ಇಂತಹ ಸಂದರ್ಭದಲ್ಲೇ ಉಜಿರೆಯಲ್ಲಿ ಪ್ರತ್ಯಕ್ಷನಾದವನು ಮೂಲತಃ ಮಂಡ್ಯದವನಾಗಿದ್ದು, ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ 1995ರಿಂದ 2014 ತನಕ ಸ್ವಚ್ಛತಾ ಕಾರ್ಮಿಕನಾಗಿದ್ದ ಚೆನ್ನಯಾನೆ ಚೆನ್ನಯ್ಯ ಎಂಬಾತ.

ಈತ 2022ರಲ್ಲಿ ಉಜಿರೆಗೆ ಬಂದಿದ್ದ. ಅಲ್ಲಿನ ಶೌಚಾಲಯದಲ್ಲಿ ಕೆಲಸ ಮಾಡುತ್ತಿದ್ದ. ಈತನನ್ನು ಗುರುತು ಹಿಡಿದು ಮಾತನಾಡಿಸಿದ್ದು ಕೊಲೆಗೀಡಾಗಿದ್ದ ಸೌಜನ್ಯಳ ಮಾವ ವಿಠಲಗೌಡ. ಈತನನ್ನು ಆತ ಕರೆದೊಯ್ದದ್ದು ತಿಮರೋಡಿಯ ಮನೆಗೆ. ಅಲ್ಲಿದ್ದದ್ದು ಗಿರೀಶ್ ಮಟ್ಟಣ್ಣನವರ್, ಟಿ. ಜಯಂತ್, ತಮ್ಮಣ್ಣ ಶೆಟ್ಟಿ ಮತ್ತಿತರರು. ಚೆನ್ನಯ್ಯ ಧರ್ಮಸ್ಥಳದ ಸುತ್ತಮುತ್ತಲಿನ ಕಾಡುಗಳಲ್ಲಿ ನೂರಾರು ಅನಾಥ ಶವಗಳನ್ನು ಹೂತು ಹಾಕಿರುವುದನ್ನು ಹೇಳಿದ್ದ. ಇದನ್ನೇ ಬಂಡವಾಳವನ್ನಾಗಿಸಿಕೊಂಡು ಕ್ಷೇತ್ರದ ವಿರುದ್ಧ ಅಪಪ್ರಚಾರ ಮಾಡಬಹುದು ಎಂದು ಆಲೋಚಿಸಿದ ಗಿರೀಶ್ ಮಟ್ಟಣ್ಣನವರ್ ಅದಕ್ಕೊಂದು ನೀಲಿ ನಕಾಶೆ ತಯಾರಿಸಿದರು. ಹೆಣ್ಣೊಬ್ಬಳನ್ನು ಅತ್ಯಾಚಾರಗೈದು ಕೊಲೆ ಮಾಡಿ ಹೂತುಹಾಕಲಾಗಿದೆ ಎಂದು ಕಥೆ ಸೃಷ್ಟಿ ಮಾಡಿ ಚೆನ್ನಯ್ಯನ ಮೂಲಕ ಅದನ್ನು ಹೊರತೆಗೆಯುವ ಷಡ್ಯಂತ್ರವನ್ನು ರೂಪಿಸಿದರೆ ಅದಕ್ಕೊಂದು ಬಲ ಬರುತ್ತದೆ ಎಂದು ಆಲೋಚಿಸಿ ಚೆನ್ನಯ್ಯನ ವಿಳಾಸ, ದೂರವಾಣಿ ಸಂಖ್ಯೆ ಪಡೆದುಕೊಂಡು ಸ್ವಲ್ಪಹಣ ನೀಡಿ ತಮಿಳುನಾಡಿನ ಸತ್ಯಮಂಗಲಕ್ಕೆ ಕಳುಹಿಸಿಕೊಟ್ಟರು. ತದನಂತರ ಆತನೊಂದಿಗೆ ನಿರಂತರ ಸಂಪರ್ಕದಲ್ಲಿದ್ದರು. ಇವರ ಈ ವಿನಾಶಕಾರಿ ಯೋಜನೆಗೆ ಸರಿಯಾದ ಬಲ ಬರಬೇಕು ಎಂದಿದ್ದರೆ ಮತ್ತು ಈ ಷಡ್ಯಂತ್ರವನ್ನು ನ್ಯಾಯಾಲಯ ನಂಬಬೇಕು ಹಾಗೂ ಧರ್ಮಸ್ಥಳಕ್ಕೆ ಒಂದು ಸಂಪರ್ಕ ಇರಬೇಕು ಎಂದು ಆಲೋಚಿಸಿ ಯೋಜನೆ ರೂಪಿಸುತ್ತಿರುವಾಗಲೇ ಇವರ ಸಂಪರ್ಕಕ್ಕೆ ಬಂದ ಮಹಿಳೆಯೇ ಸುಜಾತಾ ಉಪಾಧ್ಯಾಯ.

### ಯಾರೀಕೆ?

ಉಡುಪಿ ಸಮೀಪದ ಪರೀಕದ ಸುಜಾತಾ ಉಪಾಧ್ಯಾಯ ತನ್ನ 17ನೇ ವಯಸ್ಸಿನಲ್ಲಿಯೇ ಮಾಡಬಾರದ ಕಾರುಬಾರುಗಳನ್ನೆಲ್ಲ ಮಾಡಿ ಮನೆಯಿಂದ ಪರಿತ್ಯಕ್ತಳಾದವಳು. ಉಡುಪಿ ಸಿಟಿ ಬಸ್‌ನಿಲ್ದಾಣದಲ್ಲಿ ಮೈ ಮಾರುವ ದಂಧೆ ನಡೆಸುತ್ತಿದ್ದ ಈಕೆಯನ್ನು 1999ರಲ್ಲಿ ಉಡುಪಿ ಪೊಲೀಸರು ಬಂಧಿಸಿ ನಿಟ್ಟೂರಿನ ಸ್ತ್ರೀ ನಿಕೇತನದಲ್ಲಿ ಇರಿಸಿದ್ದರು. ಅಲ್ಲಿಂದ ಆಕೆ ಪರಾರಿಯಾಗಿದ್ದರು. ಈ ಬಗ್ಗೆ ಉಡುಪಿ ನಗರ ಠಾಣೆಯಲ್ಲಿ ಮಿಸ್ಸಿಂಗ್ ಪ್ರಕರಣ ದಾಖಲಾಗಿತ್ತು. ರಿಮಾಂಡ್‌ಹೋಂನಿಂದ ಬಂದ ಸುಜಾತ ಉಪಾಧ್ಯಾಯ ಸಿಟಿ ಬಸ್‌ನಿಲ್ದಾಣದಲ್ಲಿ ಬಸ್ ಏಜೆಂಟ್ ಆಗಿದ್ದ ಶಿವಮೊಗ್ಗ ಜಿಲ್ಲೆಯ ರಿಪ್ಪನ್ ಪೇಟೆಯ ಪ್ರಭಾಕರ

☞ 7

ದೂರುದಾರ ಚೆನ್ನಯ್ಯ ವಾಸ್ತವ್ಯ ಹೂಡಿದ್ದು ತಿಮರೋಡಿಯ ಮನೆಯಲ್ಲಿ. ಸುಮಾರು ಒಂದು ತಿಂಗಳ ಕಾಲ ಆತ ಆ ಮನೆಯಲ್ಲಿದ್ದೇ ಎಸ್‌ಐಟಿಯ ತನಿಖೆಗೆ ಹಾಜರಾಗಿದ್ದ. ಬೆಳಿಗ್ಗೆ ತನಿಖೆಗೆ ಬಂದು ಸಂಜೆಯ ವೇಳೆಗೆ ವಾಪಾಸು ಹೋಗುತ್ತಿದ್ದ ಆತನಿಗೆ ಬಾಡಿಗಾರ್ಡ್ ಆಗಿ ಇಬ್ಬರು ವಕೀಲರು ಬರ್ತಾ ಇದ್ದರು. ತಿಮರೋಡಿ ಮನೆಗೆ ಹೋದ ಬಳಿಕ ಆತನನ್ನು ಕೂರಿಸಿಕೊಂಡು ಹಲವು ಯೂಟ್ಯೂಬರ್‌ಗಳು ಸುಮಾರು 27 ವೀಡಿಯೋಗಳನ್ನು ಚಿತ್ರೀಕರಿಸಿಕೊಂಡಿದ್ದರು. ಚೆನ್ನಯ್ಯನಿಗೆ ಸಾಕ್ಷಿ ಸಂರಕ್ಷಣಾ ಕಾಯ್ದೆಯಡಿಯಲ್ಲಿ ರಕ್ಷಣೆ ಇದ್ದುದರಿಂದ ಆ

## ಹತ್ತು ಹಲವು ವೀಡಿಯೋಗಳು

ವೀಡಿಯೋಗಳನ್ನು ಟೆಲಿಕಾಸ್ಟ್ ಮಾಡಿರಲಿಲ್ಲ. ಆ ವೀಡಿಯೋಗಳಲ್ಲಿ ಮಹೇಶ್ ಶೆಟ್ಟಿ ತಿಮರೋಡಿ ಮತ್ತವರ ಸಹಚರರು ಈ ಹಿಂದೆ ಧರ್ಮಸ್ಥಳದ ವಿರುದ್ಧ ಯಾವೆಲ್ಲ ಆರೋಪಗಳನ್ನು ಮಾಡುತ್ತಿದ್ದರೋ ಅದಕ್ಕೆ ಪೂರಕವಾಗಿ ಆತನಿಂದ ಹೇಳಿಕೆಗಳನ್ನು ಪಡೆಯಲಾಗಿತ್ತು. ಆ ವೀಡಿಯೋಗಳ ಪೈಕಿ ಮೂರು ವೀಡಿಯೋಗಳನ್ನು ಟೆಲಿಕಾಸ್ಟ್ ಮಾಡಲಾಗಿತ್ತು. ಅದು ಯಾವಾಗ ಟೆಲಿಕಾಸ್ಟ್ ಮಾಡಲಾಯಿತೆಂದರೆ ಚೆನ್ನಯ್ಯ ದೂರುದಾರನ ಬದಲಾಗಿ ಆರೋಪಿಯಾಗಿ ಎಸ್‌ಐಟಿ ದಾಖಲಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಕಸ್ಟಡಿಗೆ ಪಡೆದುಕೊಂಡ ನಂತರ ಮೂರು ವೀಡಿಯೋಗಳನ್ನು ಹರಿಯಬಿಡಲಾಯಿತು. ಆ ಮೂರು ವೀಡಿಯೋಗಳಲ್ಲಿ ಈ ಹಿಂದೆ ಸೌಜನ್ಯಪರ ಹೋರಾಟ ಎಂದು ಹೇಳಿಕೊಂಡು ಧರ್ಮಸ್ಥಳದ ವಿರುದ್ಧ ಪ್ರತಿಭಟನಾ ಸಭೆಗಳಲ್ಲಿ ಯಾವೆಲ್ಲ ಸುಳ್ಳುಗಳನ್ನು ಹೇಳಲಾಗುತ್ತಿತ್ತೋ ಅದನ್ನು ನೈಜವೆಂದು ತೋರ್ಪಡಿಸುವ ಪ್ರಯತ್ನವನ್ನು ಚೆನ್ನನ ಮೂಲಕ ಹೇಳಿಸಲಾಗಿತ್ತು. ತಿಮರೋಡಿಯ ಮನೆಗೆ ಎಸ್‌ಐಟಿ ದಾಳಿ ನಡೆಸಿದ ಸಂದರ್ಭದಲ್ಲಿ ಚಿತ್ರೀಕರಿಸಿ ಇಡಲಾಗಿದ್ದ 24 ವೀಡಿಯೋಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು ಎಲ್ಲಾ ವೀಡಿಯೋಗಳ ಮೂಲ ಪ್ರತಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಯಾರೆಲ್ಲ ಈ ಶೂಟಿಂಗ್ ಮಾಡಿದ್ದಾರೋ ಅವರಿಗೆಲ್ಲ ಎಸ್‌ಐಟಿ ನೋಟೀಸು ನೀಡಲಿದೆ. ತನ್ಮೂಲಕ ಈ ಷಡ್ಯಂತ್ರದಲ್ಲಿ ಕನಿಷ್ಠ 18 ಮಂದಿ ಜೈಲಿಗೆ ಹೋಗುವ ಸಾಧ್ಯತೆಗಳಿದ್ದರೆ ಸುಮಾರು 30 ಮಂದಿ ವಿಚಾರಣೆ ಎದುರಿಸಲಿದ್ದಾರೆ.

6 ☞

ಬಾಳಿಗ ಅವರೊಂದಿಗೆ ಅವರ ಮನೆಗೆ ಸೇರಿಕೊಂಡರು. ಮನೆಯಲ್ಲಿದ್ದ ವೃದ್ಧ ತಾಯಿಯನ್ನು ನೋಡಿಕೊಳ್ಳಲು ಬಾಳಿಗ ಅವರು ಆಕೆಯನ್ನು ಕರೆದೊಯ್ದಿದ್ದರಾದರೂ ಆಕೆ ಅಲ್ಲಿ ಅವರ ಉಪ ಪತ್ನಿಯಂತೆಯೇ ಇದ್ದಳು. ಅಲ್ಲಿಂದ 2005ರಲ್ಲಿ ಬೆಂಗಳೂರಿಗೆ ಹೋಗಿ ಅಲ್ಲಿನ ನರ್ಸಿಂಗ್ ಹೋಂ ಒಂದರಲ್ಲಿ ಆಯಾ ಕೆಲಸ ಮಾಡುತ್ತಿದ್ದಾಗ ರಂಗ ಪ್ರಸಾದ್ ಎಂಬವರ ಸಂಪರ್ಕಕ್ಕೆ ಬಂದು ಅವರೊಂದಿಗೆ ಇದ್ದಳು. ಅವರ ಮಗ ಮತ್ತು ಸೊಸೆಯನ್ನು ಅವರಿಂದ ದೂರ ಮಾಡಿ ಮನೆಯನ್ನು ಮಾರಾಟ ಮಾಡಿಸಿ ಬಾಡಿಗೆ ಮನೆಯಲ್ಲಿ ಇರಿಸಿದ್ದಳು. ಇಂತಹ ಹಿನ್ನೆಲೆ ಇರುವಂತಹ ಸುಜಾತಾ ಉಪಾಧ್ಯಾಯ ಅವರ ಪೂರ್ವಿಕರ ಜಾಗವನ್ನು ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಅವರ ಚಿಕ್ಕಪ್ಪ ಪರೀಕ ನಾರಾಯಣ ರಾವ್ ದಾನ ನೀಡಿದ್ದರು. ಈಕೆಯ ಸಹೋದರರು ಮತ್ತು ಸಹೋದರಿಯರಿಗೆ ಹಣವನ್ನು ನಾರಾಯಣ ಉಪಾಧ್ಯಾಯರು ನೀಡಿದ್ದರು. ಆ ಸಂದರ್ಭದಲ್ಲಿ ಸುಜಾತಾ ಆ ಕುಟುಂಬದ ಸಂಪರ್ಕದಲ್ಲಿ ಇರಲಿಲ್ಲ. ಇದನ್ನೇ ನೆನಪಿಸಿಕೊಂಡಂತಹ ಸುಜಾತ ತನ್ನೊಂದಿಗಿದ್ದ ರಂಗಪ್ರಸಾದ್ 2020 ರಲ್ಲಿ ತೀರಿಕೊಂಡ ನಂತರ ಧರ್ಮಸ್ಥಳಕ್ಕೆ ತನ್ನ ಹಿರಿಯರ ಜಾಗದ ಪಾಲು ಕೇಳಲು ಬಂದಿದ್ದವಳು ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಹೋರಾಟ ನಡೆಸುತ್ತಿದ್ದ ಮಹೇಶ್ ಶೆಟ್ಟಿ ತಿಮರೋಡಿ ಬಳಗಕ್ಕೆ ಸೇರ್ಪಡೆಗೊಂಡಿದ್ದಳು. ಅಲ್ಲಿಗೆ ಈ ತಂಡ ಮತ್ತೊಂದು ಯೋಜನೆ ರೂಪಿಸಿತು.



### ಇಲ್ಲದ ಮಗಳ ಸೃಷ್ಟಿ

ಈ ತಂಡದ ಪ್ರಮುಖ ಮೆದುಳು ವಜಾಗೊಂಡ ಪೊಲೀಸ್ ಅಧಿಕಾರಿ ಗಿರೀಶ್ ಮಟ್ಟಣ್ಣನವರ್. ಧರ್ಮಸ್ಥಳ ಗ್ರಾಮದಲ್ಲಿ ನೂರಾರು ಶವಗಳನ್ನು ಹೂಳಿದ್ದ ಚೆನ್ನಯ್ಯ ಅವರ ಸಂಪರ್ಕದಲ್ಲಿದ್ದ. ಯಾವುದಾದರೂ ಮೃತದೇಹವನ್ನು ಮೇಲೆತ್ತಬೇಕಾದರೆ ಅದಕ್ಕೊಂದು ಕಾರಣ ಬೇಕು. ಯಾರಾದರೂ ತಮ್ಮ ಪೈಕಿಯ ವ್ಯಕ್ತಿಯನ್ನು ಹೂತಿಡಲಾಗಿದೆ ಅದನ್ನು ಮೇಲೆತ್ತಬೇಕು ಎಂದು ಕೋರಿಕೆ ಸಲ್ಲಿಸಬೇಕು. ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಬೇಕು. ಪೊಲೀಸರು ತನಿಖೆ ನಡೆಸಿ ಸಹಾಯಕ ಆಯುಕ್ತರಿಗೆ ವರದಿ ಒಪ್ಪಿಸಬೇಕು, ಅವರು ಆದೇಶ ಮಾಡಿದರೆ ಮಾತ್ರ ಹೂತಿಟ್ಟ ಶವವನ್ನು ಮೇಲೆತ್ತಲು ಸಾಧ್ಯ. ಈ ವಿಚಾರ ಗೊತ್ತಿದ್ದ ಮಟ್ಟಣ್ಣ ಸುಜಾತ ಭಟ್‌ಳನ್ನು ಉಪಯೋಗಿಸಿಕೊಂಡು ಮೃತದೇಹಗಳನ್ನು ಮೇಲೆತ್ತಿಸಬಹುದು ನೂರಾರು ಅಸ್ಥಿಪಂಜರಗಳು ಸಿಗುವ ಸಂಭವ ಇರುವುದರಿಂದ ದೊಡ್ಡ ಮಟ್ಟದಲ್ಲಿ ಶ್ರೀ ಕ್ಷೇತ್ರದ ವಿರುದ್ಧ ಜನ ರೊಚ್ಚಿಗೇಳುವಂತೆ ಮಾಡಬಹುದು ಎಂದು ಆಲೋಚಿಸಿ ಅದಕ್ಕೊಂದು ಸರಿಯಾದ ಕಾನೂನು ತಂಡ ಬೇಕು ಎಂದು ಆಲೋಚಿಸಿದ್ದರು. ಈ ಎಲ್ಲಾ ಷಡ್ಯಂತ್ರ ನಡೆಯುತ್ತಿರುವಾಗಲೇ ಸುಜಾತ ಭಟ್‌ಳನ್ನು ಬಳಸಿಕೊಂಡು ಧರ್ಮಸ್ಥಳ ಪೊಲೀಸ್‌ಠಾಣೆಗೆ ದೂರು ಕೊಡಿಸಲಾಯಿತು. ಅಲ್ಲಿ ಪ್ರಕರಣ ದಾಖಲಾಯಿತು. ಪೊಲೀಸರು ತನಿಖೆ ನಡೆಸ ತೊಡಗಿದಂತೆಯೇ ದೂತ ಎಂಬ ಹೆಸರಿನ ಯೂಟ್ಯೂಬ್ ಚಾನೆಲ್‌ನಲ್ಲಿ ಅನನ್ಯಭಟ್ ನಾಪತ್ತೆಯ ರೋಚಕ ಕಥೆ ಪ್ರಸಾರಗೊಂಡಿತು. ಈ ಘಟನೆ ನಡೆಯುವ 5 ತಿಂಗಳ ಹಿಂದೆಯೇ ಯುನೈಟೆಡ್ ಮೀಡಿಯಾ ಎಂಬ ಯೂಟ್ಯೂಬ್ ಚಾನೆಲ್‌ನಲ್ಲಿ ಸುಜಾತಾ ಭಟ್‌ಳ ಇಂಟರ್‌ವ್ಯೂ ಪ್ರಸಾರವಾಗಿತ್ತು. ಇದು ಷಡ್ಯಂತ್ರದ ಒಂದು ಭಾಗವಾಗಿತ್ತು. ಈ ಎಲ್ಲಾ ಷಡ್ಯಂತ್ರವನ್ನು ಯೋಜಿತ ರೀತಿಯಲ್ಲೇ ಕಾರ್ಯರೂಪಕ್ಕೆ ತರಲು ಈ ತಂಡ ಬೆಂಗಳೂರಿನ ವಿದ್ಯಾರಣ್ಯಪುರದಲ್ಲಿರುವ ಎಂಎಸ್ ಮಾನ್ಸನ್ ಎಂಬ ಸರ್ವಿಸ್ ಅಪಾರ್ಟ್‌ಮೆಂಟ್‌ನಲ್ಲಿ ಕೊಠಡಿ ಪಡೆದು ಗೂಢಾಲೋಚನೆ ನಡೆಸಿತು. ಇದು ನಡೆದದ್ದು, ಕಳೆದ ಫೆಬ್ರವರಿ ತಿಂಗಳಲ್ಲಿ. ಈ ಸಂದರ್ಭದಲ್ಲಿ ಉಪಸ್ಥಿತರಿದ್ದಂತಹ ಸುಜಾತ ಭಟ್‌ಗೆ ಮಗಳ ಕಥೆಯನ್ನು ಹೇಳಿಕೊಡಲಾಯಿತು. ಸುಜಾತಭಟ್‌ಗೆ ಬರಬೇಕಾಗಿದ್ದಂತಹ ಆಸ್ತಿಯ ಪಾಲನ್ನು ತೆಗೆಸಿಕೊಡುವುದಾಗಿಯೂ ಅದನ್ನು ಮಾರಾಟ ಮಾಡಿದ ನಂತರ ಶೇಕಡಾ 50 ರಷ್ಟು ಹಣವನ್ನು ನೀಡಬೇಕೆಂದು ಹೇಳಲಾಯಿತು. ಇದಕ್ಕೆ ಸುಜಾತಭಟ್ ಒಪ್ಪಿಕೊಂಡಿದ್ದರು. ಈ ಎಲ್ಲಾ ಯೋಜನೆ ರೂಪುಗೊಂಡ ನಂತರ ಸತ್ಯಮಂಗಲದ ತನ್ನ ಎರಡನೇ ಹೆಂಡತಿಯ ಮನೆಯಲ್ಲಿದ್ದ ಚೆನ್ನನನ್ನು ಸಂಪರ್ಕಿಸಿ ಬೆಂಗಳೂರಿಗೆ ಬರುವಂತೆಯೂ ಆ ಸಂದರ್ಭದಲ್ಲಿ ಯಾವುದಾದರೂ ಸ್ಮಶಾನದಿಂದ ತಲೆಬುರುಡೆಯೊಂದನ್ನು ತರುವಂತೆಯೂ ಸೂಚಿಸಲಾಯಿತು. ಅದರಂತೆ ಚೆನ್ನ ತಲೆಬುರುಡೆ ಸಹಿತ ಬೆಂಗಳೂರಿನ ಸೆಟಲೈಟ್ ಬಸ್ ನಿಲ್ದಾಣಕ್ಕೆ ಬಂದ. ಆ ಸಂದರ್ಭದಲ್ಲಿ ಬೆಂಗಳೂರಿನ ಪೀಣ್ಯಾ ಬಳಿಯ ಬಾಗಲೂರಿನಲ್ಲಿ ಬಾಡಿಗೆ ಮನೆಯಲ್ಲಿ ಪತ್ನಿ ಇಬ್ಬರು ಮಕ್ಕಳೊಂದಿಗೆ ಜೀವನ ನಡೆಸುತ್ತಿದ್ದ ಮೂಲತಃ ಕಡಬ ಸಮೀಪದ ಇಚ್ಲಂಪಾಡಿಯ ಟಿ. ಜಯಂತ್‌ಗೆ ಮಾಹಿತಿ ನೀಡಿ ಚೆನ್ನನನ್ನು ಕರೆದುಕೊಂಡು ಬಂದು ಎಲ್ಲಾದರೂ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡುವಂತೆ ಸೂಚಿಸಲಾಯಿತು. ಆದರೆ ಜಯಂತ್ ಬೇರೆ ಕಡೆ ವ್ಯವಸ್ಥೆ ಮಾಡದೆ ತನ್ನ ಮನೆಯಲ್ಲಿಯೇ ಚಿನ್ನಯ್ಯ ಯಾನೆ ಚಿನ್ನನನ್ನು ಉಳಿಸಿಕೊಂಡ ಎರಡು ದಿನಗಳ ಬಳಿಕ ಜಯಂತ್ ಚಿನ್ನನೊಂದಿಗೆ ವಿದ್ಯಾರಣ್ಯಪುರದಲ್ಲಿದ್ದ ಸರ್ವಿಸ್ ಅಪಾರ್ಟ್‌ಮೆಂಟ್‌ಗೆ ಹೋದ. ಅಲ್ಲಿ ಮತ್ತೊಂದು ಸುತ್ತಿನ ಮಾತುಕತೆ ನಡೆದು ಷಡ್ಯಂತ್ರವನ್ನು ಅಂತಿಮಗೊಳಿಸಲಾಯಿತು.

### ಸ್ವಾಮೀಜಿ ಭೇಟಿ

ಧರ್ಮಸ್ಥಳದ ವಿರುದ್ಧ ಜನ ದಂಗೆಯೇಳುವಂತಹ ಯೋಜನೆ ರೂಪಿಸಿದ ಈ ತಂಡಕ್ಕೆ ಎಲ್ಲಾದರೂ ಎಡವಟ್ಟಾದರೆ ಬೆಂಬಲ ಇರಲಿ ಎನ್ನುವ ಕಾರಣಕ್ಕಾಗಿ ರಾಜ್ಯದ ಬಹುದೊಡ್ಡ ಸಮುದಾಯ ಸ್ವಾಮೀಜಿಯೊಬ್ಬರನ್ನು ಭೇಟಿ ಮಾಡಲು ನಿರ್ಧರಿಸಿತು. ಅದರಂತೆ ಸ್ವಾಮೀಜಿ ಭೇಟಿಗೆ ಅವಕಾಶ ಕೋರಲಾಯಿತು. ಅವರೂ ಸಹ ಇವರ ಷಡ್ಯಂತ್ರದ ಅರಿವಿಲ್ಲದೆ ಭೇಟಿಗೆ ಅವಕಾಶ ನೀಡಿದರು. ಗಿರೀಶ್ ಮಟ್ಟಣ್ಣನವರ್, ಜಯಂತ್, ಚೆನ್ನ, ಸುಜಾತ ಭಟ್, ಮಹೇಶ್ ತಿಮರೋಡಿ ಅವರು ಸ್ವಾಮೀಜಿ ಭೇಟಿಗೆ ಹೊರಟು ನಿಂತರು. ತಿಮರೋಡಿಯನ್ನು ಹೊರತುಪಡಿಸಿ ಬೇರೆ ಯಾರ ಪರಿಚಯವೂ ಸ್ವಾಮೀಜಿಯವರಿಗೆ ಇರಲಿಲ್ಲ. ಸುಮಾರು 10 ವರ್ಷಗಳ ಹಿಂದೆ ಸೌಜನ್ಯ ಹೋರಾಟಕ್ಕೆ ಬೆಂಬಲ ಕೇಳಿ ತಿಮರೋಡಿ ಸೌಜನ್ಯ ತಾಯಿ ಕುಸುಮಾವತಿ ಮಾವ ವಿಠಲಗೌಡನೊಂದಿಗೆ ಸ್ವಾಮೀಜಿಯವರನ್ನು ಭೇಟಿ ಮಾಡಿದ್ದರು. ಆ ಸಂದರ್ಭದಲ್ಲಿ ಸ್ಥಳೀಯ ಗೌಡ ಸಮುದಾಯದ ಮುಖಂಡರ ವಿರೋಧ ಇದ್ದರೂ ಆ ಹೋರಾಟಕ್ಕೆ ಶಾಖಾ ಮಠದ ಸ್ವಾಮೀಜಿ ಬಂದಿದ್ದರು. ಇದೇ ಪರಿಚಯವನ್ನು ಮುಂದಿಟ್ಟುಕೊಂಡು ಸ್ವಾಮೀಜಿಯನ್ನು ಭೇಟಿ ಮಾಡಿದ ತಂಡ ತನ್ನ ಯೋಜನೆಯನ್ನು ವಿವರಿಸಿತ್ತು. ತಂಡದ ಈ ಷಡ್ಯಂತ್ರವನ್ನು ಅರಿಯದ ಸ್ವಾಮೀಜಿ ಕಾನೂನು ರೀತಿಯಲ್ಲಿ ಮುಂದುವರಿಯುವಂತೆ ಸೂಚಿಸಿದ್ದರು.

### ದೆಹಲಿಗೆ ಹೊರಟ ತಂಡ

ಈ ವೇಳೆಗಾಗಲೇ ಈ ತಂಡವು ವಕೀಲರ ತಂಡವೊಂದನ್ನು ಸಂಪರ್ಕಿಸಿ ಕಾನೂನು ನೆರವು ಕೇಳಿತ್ತು. ಬೆಂಗಳೂರಿನ ಕಾಮಾಕ್ಷಿಪಾಳ್ಯದ ಲಾ ಚೇಂಬರ್‌ನ ಹಿರಿಯ ನ್ಯಾಯವಾದಿ ಕೆ.ವಿ. ಧನಂಜಯ ಅವರ ಸಂಪರ್ಕ ಈ ತಂಡಕ್ಕೆ ಸಿಕ್ಕಿತ್ತು. ಇದೇ ಸಂದರ್ಭದಲ್ಲಿ ತಮ್ಮ ಯೋಜನೆಗೆ ಸಾರ್ವಜನಿಕರ ಬೆಂಬಲ ಕ್ರೋಢೀಕರಿಸುವ ನಿಟ್ಟಿನಲ್ಲಿ ಯೂಟ್ಯೂಬರ್ ಸಮೀರ್ ಎಂ.ಡಿ. ಎಂಬಾತನನ್ನು ಸಂಪರ್ಕಿಸಿ ಅವನ ಮೂಲಕ ಧರ್ಮಸ್ಥಳದ ವಿರುದ್ಧ ಸ್ಟೋರಿಯೊಂದನ್ನು ಸೃಷ್ಟಿಸಿ ಯೂಟ್ಯೂಬ್‌ನಲ್ಲಿ ಹರಿಯಬಿಟ್ಟು ಗೊಂದಲ ಸೃಷ್ಟಿಸುವ ಕೆಲಸವನ್ನು ಮಾಡಲಾಯಿತು. ಧರ್ಮಸ್ಥಳದ ವಕೀಲರು ಈ ಬಗ್ಗೆ ನ್ಯಾಯಾಲಯದಲ್ಲಿ ಕೇಸು ದಾಖಲಿಸಿದಾಗ ಯೂ ಟ್ಯೂಬರ್ ಸಮೀರ್‌ಗೆ ನ್ಯಾಯವಾದಿ ಕೆ.ವಿ. ಧನಂಜಯರವರ ಮೂಲಕ ಕಾನೂನಿನ ನೆರವು ನೀಡಲಾಯಿತು. ತದನಂತರ ಈ ತಂಡಕ್ಕೆ ಸಮೀರ್ ಅಧಿಕೃತವಾಗಿ ಸೇರ್ಪಡೆಗೊಂಡ. ಈ ತಂಡವು ದೆಹಲಿಗೆ ಕಾರಿನಲ್ಲಿ ಬುರುಡೆ ಸಹಿತ ಹೋಯಿತು. ಅಲ್ಲಿ ಸುಪ್ರೀಂ ಕೋರ್ಟ್ ನ್ಯಾಯವಾದಿಯೊಬ್ಬರನ್ನು ಭೇಟಿ ಮಾಡಿ ಕಾನೂನು ನೆರವು ಕೋರಿದರು. ಆ ಸಂದರ್ಭದಲ್ಲಿ ಈ ಪ್ರಕರಣವನ್ನು ಸುಪ್ರೀಂಕೋರ್ಟ್‌ನಲ್ಲಿ ರಿಟ್ ದಾಖಲು ಮಾಡಲು ಸಾಧ್ಯವಾಗುವುದಿಲ್ಲ. ಸ್ಥಳೀಯ ನ್ಯಾಯಾಲಯದಲ್ಲಿ ಅಥವಾ ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡುವಂತೆ ಸೂಚನೆ ನೀಡಿದ್ದರು. ಅವರ ಸೂಚನೆಯಂತೆಯೇ ಈ ತಂಡ ಬೆಂಗಳೂರಿಗೆ ಬಂದು ನ್ಯಾಯವಾದಿ ಕೆ.ವಿ. ಧನಂಜಯ ಅವರನ್ನು ಸಂಪರ್ಕ ಮಾಡಿತು. ಅವರ ಇಬ್ಬರು ಜ್ಯೂನಿಯರ್ ವಕೀಲರಾದ ಓಜಸ್ವಿ ಗೌಡ ಮತ್ತು ಸಚಿನ್ ದೇಶಪಾಂಡೆ ಇವರು ಹೇಳಿದ ಕಥೆಯನ್ನು ಆಧರಿಸಿ ಚೆನ್ನನನ್ನು ಉಲ್ಲೇಖಿಸಿ ಫೇಸ್‌ಬುಕ್‌ನಲ್ಲಿ ಪತ್ರವೊಂದನ್ನು ಹರಿಯಬಿಟ್ಟಿದ್ದರು. ಈ ಪತ್ರದ ಆಧಾರದಲ್ಲಿ ದಕ್ಷಿಣಕನ್ನಡ ಜಿಲ್ಲಾ ಎಸ್ಪಿ ಅರುಣ್ ಅವರು ವಕೀಲರಿಬ್ಬರನ್ನು ಸಂಪರ್ಕಿಸಿ ಮಾಹಿತಿ ಕೇಳಿದ್ದರು. ತದನಂತರ ಎಸ್ಪಿ ಕಚೇರಿ ಮತ್ತು ಧರ್ಮಸ್ಥಳ ಪೊಲೀಸ್ ಠಾಣೆಗೆ ಬಂದ ವಕೀಲರಿಬ್ಬರು ದೂರು ದಾಖಲಿಸಿದ್ದರು. ಪೊಲೀಸರು ನ್ಯಾಯಾಲಯದ ಅನುಮತಿ ಪಡೆದು ಕೇಸು ದಾಖಲಿಸಿಕೊಂಡು ತನಿಖೆ ನಡೆಸತೊಡಗಿದಂತೆಯೇ ನಡುಕ ಉಂಟಾದ ಬುರುಡೆ ಗ್ಯಾಂಗ್ ಕೆಲವರನ್ನು ಸಂಪರ್ಕಿಸಿ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹೇರಿ ಎಸ್‌ಐಟಿ ರಚನೆ ಆಗುವಂತೆ ನೋಡಿಕೊಂಡಿತು. ಎಸ್‌ಐಟಿಯವರು ಸ್ವತಂತ್ರ ತನಿಖೆ ನಡೆಸಿ 17 ಸ್ಥಳಗಳಲ್ಲಿ ಉತ್ಖನನ ನಡೆಸಿ ಅಸ್ಥಿಪಂಜರಕ್ಕಾಗಿ ಶೋಧ ನಡೆಸಿದರು. ಷಡ್ಯಂತ್ರ ರೂಪುಗೊಂಡಂತಹ ಸ್ಥಳಗಳ ಮಹಜರು ನಡೆಸಿದ್ದಾರೆ. ಹಲವು ಬುರುಡೆಗಳು ಈ ಷಡ್ಯಂತ್ರದಲ್ಲಿ ಶಾಮೀಲಾಗಿದ್ದಾವೆ ಎಂದು ಖಚಿತಪಡಿಸಿಕೊಂಡಿದೆ. ಸದ್ಯಕ್ಕೆ ಚೆನ್ನ ಬಂಧನಕ್ಕೊಳಗಾದರೆ ಉಳಿದವರು ಸದ್ಯದಲ್ಲೇ ಜೈಲಿಗೆ ನಡೆಯಲಿದ್ದಾರೆ. ಒಟ್ಟಾರೆ ಬೆಳವಣಿಗೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಮೇಲೆ ಕಳೆದ 13 ವರ್ಷಗಳಿಂದ ನಡೆಯುತ್ತಿರುವಂತಹ ಛಾಯಾ ಸಮರಕ್ಕೆ ಅಂತಿಮ ಮುದ್ರೆ ಬೀಳುವ ಸಮಯ ಸನ್ನಿಹಿತವಾಗಿದೆ. ☯




## ಸೌಜನ್ಯ ಪ್ರಕರಣಕ್ಕೆ ಪ್ರತ್ಯಕ್ಷ ಸಾಕ್ಷಿ



ಎಸ್‌ಐಟಿ ತನಿಖೆ ನಡೆಸುತ್ತಿರುವುದು ಕೇವಲ ಬುರುಡೆ ಪ್ರಕರಣ ಮಾತ್ರ. ರಾಜ್ಯ ಸರಕಾರ ಎಸ್‌ಐಟಿ ರಚನೆ ಮಾಡಿ ಹೊರಡಿಸಿದಂತಹ ಆದೇಶದಲ್ಲಿಯೇ ಈ ಹಿಂದೆ ತನಿಖೆಯಾಗಿ ನ್ಯಾಯಾಲಯದ ಮೆಟ್ಟಿಲು ಹತ್ತಿದಂತಹ ಸೌಜನ್ಯ, ಪದ್ಮಲತಾ, ವೇದವಲ್ಲಿ ಪ್ರಕರಣಗಳ ತನಿಖೆಯನ್ನು ಹೊರತುಪಡಿಸಿ ಇತರ ಪ್ರಕರಣಗಳ ತನಿಖೆಯನ್ನು ನಡೆಸುವಂತೆ ಸೂಚಿಸಿತ್ತು. ಯಾಕೆಂದರೆ ಸೌಜನ್ಯ ಪ್ರಕರಣ ತನಿಖೆ ನಡೆದು ನ್ಯಾಯಾಲಯದಲ್ಲಿ ವಿಚಾರಣೆಯಾಗಿ ಆರೋಪಿ ದೋಷಮುಕ್ತಗೊಂಡಿದ್ದರೆ, ಪದ್ಮಲತಾ ಪ್ರಕರಣದಲ್ಲಿ ಆರೋಪಿಯನ್ನು ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ ಎಂದು ಅಂತಿಮ ವರದಿ ಸಲ್ಲಿಸಲಾಗಿದೆ. ವೇದವಲ್ಲಿ ಪ್ರಕರಣದಲ್ಲಿ ಆಕೆಯ ಗಂಡನೇ ಆರೋಪಿಯಾಗಿದ್ದು, ನ್ಯಾಯಾಲಯದಲ್ಲಿ ವಿಚಾರಣೆ ನಡೆದು ದೋಷಮುಕ್ತಗೊಂಡಿದ್ದ. ನಾರಾಯಣ ಮತ್ತು ಯಮುನಾ ಹತ್ಯಾ ಪ್ರಕರಣದಲ್ಲಿ ಸಿ ವರದಿ ಸಲ್ಲಿಸಲಾಗಿದೆ. ಈ ಪ್ರಕರಣಗಳು ಎಸ್‌ಐಟಿಯ ವ್ಯಾಪ್ತಿಗೆ ಬರುವುದಿಲ್ಲ ಎಂದು ಸರಕಾರದ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ. ಈ ಪ್ರಕರಣಗಳಲ್ಲಿ ಮುಂದಿನ ತನಿಖೆಯ ನಿರ್ಧಾರನ್ನು ನ್ಯಾಯಾಲಯವೇ ಕೈಗೊಳ್ಳಬೇಕೆ ಹೊರತು ಸರಕಾರ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಇದೀಗ ಬುರುಡೆ ಪ್ರಕರಣ ಇದನ್ನು ಯೋಜಿಸಿದವರ ಕುತ್ತಿಗೆಗೆ ಸುತ್ತಿಕೊಳ್ಳುತ್ತಿರುವುದರಿಂದ ಇದರಿಂದ ಪಾರಾಗಲು ಸೌಜನ್ಯ ಪ್ರಕರಣವನ್ನು ಮುಂದೆ ತರಲಾಗುತ್ತಿದೆ. ಅದಕ್ಕಾಗಿ ಮಂಡ್ಯದ ಮಹಿಳೆಯೊಬ್ಬರು ಆ ಘಟನೆಯನ್ನು ಅಂದರೆ 9-10-2012ರಂದು ಸಂಜೆಯ ವೇಳೆಗೆ ಕಾಲೇಜು ಬಿಟ್ಟು ಬರುತ್ತಿದ್ದ ತರುಣಿಯನ್ನು ಅಪಹರಿಸಿದ್ದನ್ನು ಕಣ್ಣಾರೆ ಕಂಡಿದ್ದೇನೆ ಎಂದು ಎಸ್‌ಐಟಿ ಅಧಿಕಾರಿಗಳಿಗೆ ಪತ್ರ ಮೂಲಕ ತಿಳಿಸಿದ್ದಾರೆ. ಅಲ್ಲದೇ ಮಾಧ್ಯಮಗಳಲ್ಲೂ ಹೇಳಿಕೆ ನೀಡಿದ್ದಾರೆ. ಆ ಹೇಳಿಕೆಯ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಹೊರಟಾಗ ಈ ಕಥೆಯು ಮೈಸೂರಿನ ಸ್ವಯಂ ಸೇವಾ ಸಂಸ್ಥೆ ಒಡನಾಡಿಯಲ್ಲಿ ಸೃಷ್ಟಿಸಲ್ಪಟ್ಟದ್ದು ಎನ್ನುವುದು ಬಹುತೇಕವಾಗಿ ಖಚಿತವಾಗುತ್ತದೆ. 8-10-2012ರಂದು ಮಂಡ್ಯದಿಂದ ರೈಲಿನ ಮೂಲಕ ಸುಬ್ರಹ್ಮಣ್ಯಕ್ಕೆ ಬಂದಿದ್ದ ಮಹಿಳೆ ತನ್ನ ಚರ್ಮರೋಗದ ಚಿಕಿತ್ಸೆಗಾಗಿ ಮರುದಿನ ಸಂಜೆ ಶಾಂತಿವನದ ಬಳಿಗೆ ಬಂದಿದ್ದು, ಅಲ್ಲಿ ಈ ಕಾಲೇಜು ವಿದ್ಯಾರ್ಥಿಯನ್ನು ಕಾರಿನಲ್ಲಿ ಅಪಹರಿಸಿದ ಘಟನೆಯನ್ನು ನೋಡಿರುವುದಾಗಿಯೂ ಅವರನ್ನು ಈಗಲೂ ನೋಡಿದರೆ ಗುರುತು ಹಿಡಿಯಬಲ್ಲೆ ಎನ್ನುವ ವಿಶ್ವಾಸದ ಮಾತುಗಳನ್ನು ಆಡುತ್ತಿದ್ದಾರೆ. ಆಕೆಯ ಟ್ರಾವೆಲ್ ಹಿಸ್ಟರಿಯನ್ನು ಗಮನಿಸಿದಾಗ ಆ ಸಂದರ್ಭದಲ್ಲಿ ಮಂಗಳೂರು-ಬೆಂಗಳೂರು ರೈಲ್ವೆ ಸಂಪರ್ಕ ಕಡಿತಗೊಂಡಿತ್ತು. ಮಳೆಗಾಲದ ಸಂದರ್ಭದಲ್ಲಿ ಸಕಲೇಶ್‌ಪುರ, ಎಡಕುಮೇರಿ ಮಧ್ಯೆ ಗುಡ್ಡಗಳು ರೈಲ್ವೆಹಳಿಗೆ ಜರಿಯುತ್ತಿದ್ದ ಪರಿಣಾಮ ಜೂನ್‌ನಿಂದ ಡಿಸೆಂಬರ್‌ತನಕ ಮಂಗಳೂರು-ಬೆಂಗಳೂರು ಪ್ಯಾಸೆಂಜರ್ ರೈಲನ್ನು ತಡೆಹಿಡಿಯಲಾಗಿತ್ತು. ಈ ವಿಚಾರ ರೈಲ್ವೆ ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಇದೆ. ಇದು ಗೊತ್ತಿಲ್ಲದೆ ಮಂಡ್ಯದ ಮಹಿಳೆಯೊಬ್ಬರನ್ನು ಬಳಸಿಕೊಂಡು ಹೊಸ ಕಥೆ ಸೃಷ್ಟಿ ಮಾಡಲಾಗಿದೆ. ಎಸ್‌ಐಟಿಯು ಈ ಕಥೆಯನ್ನು ತನಿಖೆ ಮಾಡಲು ಹೊರಟರೆ ಮತ್ತಷ್ಟು ಬುರುಡೆಗಳಿಗೆ ಸಂಕಷ್ಟ ಎದುರಾಗಲಿದೆ. ☯



**ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಅವರಿಗೆ ಲಕ್ಷ್ಮಿ ಹೇಗೆ ಅಪ್ಪಿಕೊಂಡಿದ್ದಾಳೋ ಹಾಗೆಯೇ ಗ್ರಹಚಾರವು ಬೆನ್ನಟ್ಟಿ ಕೇಕೆ ಹಾಕುತ್ತದೆ! ಕುಖ್ಯಾತ ಗ್ಯಾಂಬ್ಲರ್ ಆದ ಪಪ್ಪಿ ಬೆಂಗಳೂರು ಮಂಗಳೂರು ಗೋವಾದಲ್ಲಿ ರೊಕ್ಕವನ್ನು ಗುಡಿಸಿ ಗುಡ್ಡೆ ಹಾಕಿದ್ದು ಸಾಲದು ಎಂಬಂತೆ...ಸಿಕ್ಕಿಂ, ಡಾರ್ಜಿಲಿಂಗ್, ಗ್ಯಾಂಗ್ಟಕ್....ನಲ್ಲೂ ಗೆಬರಲು ಸ್ಕೀಮ್ ಹಾಕಿ ಇದೀಗ ಇ.ಡಿ. ಇಕ್ಕಳಕ್ಕೆ ಸಿಕ್ಕಿಬಿದ್ದು ವಿಲ ವಿಲ ಒದ್ದಾಡುತ್ತಿದ್ದಾರೆ! ಮೊದಲ ಸುತ್ತಿನ ರೇಡ್‌ನಲ್ಲಿ ಅಪ್ಪಿ ಕ್ಯಾಸಿನೋ ಕಚೇರಿಗಳಿಂದ 12 ಕೋಟಿ ಕ್ಯಾಶ್ 6 ಕೋಟಿ ಮೌಲ್ಯದ ಚಿನ್ನಾಭರಣ ಜಪ್ತಿ ಹೊಡೆದಿದ್ದ ಪೊಲೀಸರು ಎರಡನೇ ಸುತ್ತಿನಲ್ಲಿ 55 ಕೋಟಿ ನಗದು ಪ್ಲಸ್ ಆಸ್ತಿಪತ್ರ ಹಾಗೂ ಮೂರನೇ ಸುತ್ತಿನಲ್ಲಿ ಸಹಸ್ರಾರು ಕೋಟಿ ರೂ. ಮೌಲ್ಯದ ಆಸ್ತಿಗಳನ್ನು ಜಪ್ತಿ ಮಾಡಲಾಗಿದೆಯಂತೆ! ಚಿತ್ರನಟ ದೊಡ್ಡಣ್ಣನ ಸಣ್ಣ ಅಳಿಯನಾದ ಅಪ್ಪಿ ಅಕ್ರಮ ಬೆಟ್ಟಿಂಗ್ ದಂಧೆ ನಡೆಸುತ್ತ ಇಷ್ಟು ಚಿಕ್ಕ ವಯಸ್ಸಿನಲ್ಲೇ, ಇಷ್ಟು ಕಡಿಮೆ ಅವಧಿಯಲ್ಲೇ ಸುಮಾರು 2000 ಕೋಟಿ ಕೊಳ್ಳೆ ಹೊಡೆದಿದ್ದಾನೆ ಎಂದು ಇ.ಡಿ. ಅಧಿಕಾರಿಗಳೇ ಹೇಳಿದ್ದಾರೆ! ಇದೀಗ ಪಪ್ಪಿ ಸಂಪತ್ತು 7450 ಕೋಟಿ ರೂ. ಮೌಲ್ಯದ್ದು ಎಂಬ ಸುದ್ದಿ ಹಬ್ಬಿದೆ!!**

# ದುರ್ಗದ ಶಾಸಕ ಪಪ್ಪಿ ಬೆಟ್ಟಿಂಗ್ ದಂಧೆ ಅಪ್ಪಿ... ಗೆಬರಿದ ನೋಡಿ ಬರೋಬ್ಬರಿ 2000 ಕೋಟಿ ರುಪ್ಪಿ?!

✍ ಹೆಚ್.ಕೆ. ಮಹದೇವ್


ಚಳ್ಳಕೆರೆ-ಚಿತ್ರದುರ್ಗ ಭಾಗದ ಪರಮ ಕುಖ್ಯಾತ 'ಗ್ಯಾಂಬ್ಲರ್' ಪಪ್ಪಿ(ವೀರೇಂದ್ರ) ಶಾಸಕನಾದ ಮೇಲಾದರೂ ಈ ಅನಿಷ್ಟ ದಂಧೆಯನ್ನ ನಿಲ್ಲಿಸುತ್ತಾನೆ ಅಂದುಕೊಂಡಿದ್ದರು ಜನ. ಆದರೆ, ದುಡ್ಡಿನ ಮೂಲ ನೋಡಿದ ವ್ಯಕ್ತಿ ಎಂದಾದರೂ ಬಸಿದುಕೊಳ್ಳದೆ ಬಿಡ್ತಾನಾ?! ಪಪ್ಪಿ ಅಪ್ಪಿ ತಪ್ಪಿಯೂ ಬೆಟ್ಟಿಂಗ್ ದಂಧೆಯಿಂದ ವಿಶ್ರಮಿಸಲಿಲ್ಲ..



ದೋ ನಂಬರ್ ದಂಧೆಗಳಿಂದಲೇ ಕೋಟ್ಯಾನು ಕೋಟಿ ರೊಕ್ಕ ಮಾಡಿದ ವೀರೇಂದ್ರ ಪಪ್ಪಿ ಅದನ್ನು ರಕ್ಷಿಸಿಕೊಳ್ಳಲೆಂದೇ ವೈಟ್ ಅಂಡ್ ವೈಟ್ ಧಿರಿಸು ಧರಿಸಿ ಶಾಸಕರಾದವರು! ಶಾಸಕರಾದ ಬಳಿಕ ಬೆಟ್ಟಿಂಗ್ ದಂಧೆ ಬಲು ಜೋರಾಗಿಯೇ ನಡೆಯಿತು. ಮೊದಲು ಜೆಡಿಎಸ್, ಆಮೇಲೆ ಕಾಂಗ್ರೆಸ್ ಅಪ್ಪಿಕೊಂಡು ಶಾಸಕರಾಗಿ ಕೊಳ್ಳೆ ಹೊಡೆಯುತ್ತಿದ್ದ ಪಪ್ಪಿಯನ್ನು ಕೇಂದ್ರ ಸರ್ಕಾರದ (ಬಿಜೆಪಿ) ಅಧೀನದಲ್ಲಿ ಕರ್ತವ್ಯ ನಿಭಾಯಿಸುತ್ತಿರುವ ಇ.ಡಿ. ಅಧಿಕಾರಿಗಳು ಗಮನಿಸುತ್ತಲೇ ಬಂದರು! ಇದೀಗ ಅಟಕಾಯಿಸಿಕೊಂಡು ಗುಮ್ಮುತ್ತಿದ್ದಾರೆ!

ಅಂದಹಾಗೆ, ಈಗ ಪಪ್ಪಿಯವರು ಸಿಕ್ಕಿಬಿದ್ದದ್ದು ಹೇಗೆಂದರೆ, ಕ್ಯಾಸಿನೊವೊಂದನ್ನು ಸ್ಥಾಪಿಸಲು ತುಂಡು ಭೂಮಿಯನ್ನು ಗುತ್ತಿಗೆಗೆ ಪಡೆಯಲು ಗ್ಯಾಂಗ್ಟಕ್‌ಗೆ ತೆರಳಿದ್ದ ಆರೋಪದ ಮೇಲೆ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಸಿಕ್ಕಿಂ ಸ್ಟೇಟ್‌ನ ಗ್ಯಾಂಗ್ಟಕ್‌ನಲ್ಲಿ ಬಂಧಿಸಿದೆ! ಇದೇ ವೇಳೆ ಇ.ಡಿ.








ಯು ವೀರೇಂದ್ರ ಪಪ್ಪಿ ಅವರಿಗೆ ಸಂಬಂಧಿಸಿದ ಸುಮಾರು 30 ಆಸ್ತಿಗಳ ಮೇಲೆ ದಾಳಿ ನಡೆಸಿದ್ದು, ವಿದೇಶಿ ಕರೆನ್ಸಿ ಸೇರಿದಂತೆ 6 ಕೋಟಿ ಮೌಲ್ಯದ ಚಿನ್ನಾಭರಣ, 10 ಕೆಜಿ ಬೆಳ್ಳಿ ಹಾಗೂ 12 ಕೋಟಿ ನಗದು ಹಣವನ್ನ ಜಪ್ತಿ ಮಾಡಿದೆ! ಅಲ್ಲದೆ ಪಪ್ಪಿಗೆ ಸೇರಿದ 17 ಬ್ಯಾಂಕ್ ಖಾತೆಗಳನ್ನು ಇ.ಡಿ. ಸ್ಥಗಿತಗೊಳಿಸಿ ಲೆಕ್ಕವಿಲ್ಲದಷ್ಟು ಆಸ್ತಿ ದಾಖಲೆಗಳನ್ನು ವಶಪಡಿಸಿಕೊಂಡಿದೆ! ಈ ಪ್ರಕರಣವೀಗ ಭಾರೀ ಸಂಚಲನ ಮೂಡಿಸಿದ್ದು, ಇಡೀ ದೇಶ ಕರ್ನಾಟಕ ರಾಜ್ಯದತ್ತ ದೃಷ್ಟಿ ನೆಟ್ಟು ಕುಂತಿದೆ!



ಕಳೆದ ಶನಿವಾರ ಶಾಸಕ ವೀರೇಂದ್ರ ಪಪ್ಪಿ ತನ್ನ ಸಹಚರರೊಂದಿಗೆ ರಹಸ್ಯವಾಗಿ ಸಿಕ್ಕಿಂನ ಗ್ಯಾಂಗ್ಟಕ್‌ಗೆ ಪ್ರಯಾಣಿಸಿದ್ದರು. ಅಲ್ಲಿ ಅವರು ಕ್ಯಾಸಿನೊಗಾಗಿ ಒಂದು ತುಂಡು ಭೂಮಿಯನ್ನು ಗುತ್ತಿಗೆಗೆ ಪಡೆಯುತ್ತಿದ್ದು, ಆ ಕೆಲಸಕ್ಕಾಗಿ ಗುಟ್ಟಾಗಿ ಸಿಕ್ಕಿಂಗೆ ಹೋಗಿದ್ದರು.ಈ ವಾಸನೆ ಇ.ಡಿ. ಮೂಗಿಗೆ ಬಡಿದು ಇವರೂ ಗುಟ್ಟಾಗಿ ಅಲ್ಲಿಗೆ ತೆರಳಿ ಲಭಕ್ ಅಂತ ಹಿಡಿದು ಹಾಕಿದ್ದಾರೆ!




ಅಕ್ರಮ ಹಣ ವರ್ಗಾವಣೆ ತಡೆ ಸಂಸ್ಥೆ (ಇ.ಡಿ) ಶಾಸಕ ವೀರೇಂದ್ರ ಪಪ್ಪಿ ಅವರಿಗೆ ಸೇರಿದ್ದು ಎನ್ನಲಾದ 30 ಕಚೇರಿಗಳ ಮೇಲೆ ದಾಳಿ ನಡೆಸಿ ಒಂದು ಕೋಟಿ ವಿದೇಶಿ ಕರೆನ್ಸಿ, 6 ಕೋಟಿ ಮೌಲ್ಯದ ಚಿನ್ನದ ಆಭರಣಗಳು ಮತ್ತು ಸುಮಾರು 10 ಕೆಜಿ ತೂಕದ ಬೆಳ್ಳಿ ವಸ್ತುಗಳು ಮತ್ತು ನಾಲ್ಕು ವಾಹನಗಳು ಸೇರಿದಂತೆ 12 ಕೋಟಿ ನಗದು ಹಣವನ್ನ ವಶಪಡಿಸಿಕೊಂಡಿದೆ. ವೀರೇಂದ್ರ ಅವರ ಸೋದರ ಕೆ.ಸಿ. ನಾಗರಾಜ್ ಮತ್ತು ಅವರ ಮಗ ಪೃಥ್ವಿ ಎನ್. ರಾಜ್ ಹಾಗೂ ಅವರ ಬಂಧುಗಳ ಮನೆಗಳಿಂದ ಆಸ್ತಿಗೆ ಸಂಬಂಧಿಸಿದ ಅನೇಕ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಪಪ್ಪಿ ಸೋದರ ಕೆ.ಸಿ. ತಿಪ್ಪೇಸ್ವಾಮಿ ಮತ್ತು ಪೃಥ್ವಿ ಎನ್. ರಾಜ್ ಅವರು ದುಬೈಯಿಂದ ಆನ್‌ಲೈನ್ ಗೇಮಿಂಗ್ ಕಾರ್ಯಾಚರಣೆಗಳನ್ನು ನಿರ್ವಹಿಸುತ್ತಿದ್ದರು ಎಂದು ಆರೋಪಿಸಲಾಗಿದೆ!



ದಾಳಿಯ ವೇಳೆ ಭಾರೀ ಪ್ರಮಾಣದ ಹಣ ಹಾಗೂ ಚಿನ್ನಾಭರಣಗಳು ಪತ್ತೆಯಾಗಿರುವುದು ಪ್ರಕರಣದ ತೀವ್ರತೆಯನ್ನು ಸೂಚಿಸುತ್ತಿದೆ. ಬೆಟ್ಟಿಂಗ್ ದಂಧೆಯಿಂದ ಸಂಪಾದಿಸಿದ ಆದಾಯವನ್ನು ಮತ್ತಷ್ಟು ಗುರುತಿಸಲು ವೀರೇಂದ್ರನನ್ನು ಬಂಧಿಸಿ ಗ್ಯಾಂಗ್ಟಾಕ್ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಗಿದ್ದು, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ. ಎರಡನೇ ಸುತ್ತಿನ ದಾಳಿಯಲ್ಲಿ ಪಪ್ಪಿ ವಿವಿಧ ಬ್ಯಾಂಕ್‌ಗಳಲ್ಲಿ ಬೇನಾಮಿ ಹೆಸರುಗಳಲ್ಲಿ ಬಚ್ಚಿಟ್ಟಿದ್ದ ಸುಮಾರು 55 ಕೋಟಿ ರೂ.ಗಳನ್ನು ಜಪ್ತಿ ಮಾಡಲಾಗಿದೆಯಂತೆ! ಕಸ್ಟಡಿ ಅವಧಿ ಮುಗಿದು, ಎರಡನೇ ಬಾರಿ ಮತ್ತೆ ಕಸ್ಟಡಿಗೆ ತೆಗೆದುಕೊಂಡು ತನಿಖೆ ಮುಂದುವರೆಸಲಾಗಿದೆ. ಪಪ್ಪಿ ಕಳೆದ ಹದಿನೈದು ದಿನಗಳಿಂದ ಇ.ಡಿ. ವಶದಲ್ಲಿ ವಿಚಾರಣೆ ಎದುರಿಸುತ್ತಿದ್ದಾರೆ. ಗಮನೀಯ ಅಂಶವೇನೆಂದರೆ, ಅವರ ಮನೆ, ಕಚೇರಿಗಳ ಮೇಲೆ ಮೂರನೇ ಬಾರಿಗೆ ಇ.ಡಿ. ದಾಳಿ ನಡೆದಿದ್ದು, ಸುಮಾರು 7,450 ಕೋಟಿ ರೂ. ಮೌಲ್ಯದ ಹಣ, ಆಸ್ತಿ ಪತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎನ್ನಲಾಗುತ್ತದೆ!

### ಇತ್ತ ಕುಸುಮಾ ಮನೆ ಮೇಲೂ ದಾಳಿ!

ಗೋವಾದಲ್ಲಿ, ಅಕ್ರಮ ಹಣ ವರ್ಗಾವಣೆ ಪ್ರಕರಣದ ಭಾಗವಾಗಿ ವಿರೇಂದ್ರ ಪಪ್ಪಿಗೆ ಸಂಬಂಧಿಸಿದ ಐದು ಕ್ಯಾಸಿನೊಗಳಾದ ಪಪ್ಪೀಸ್ ಕ್ಯಾಸಿನೊ ಗೋಲ್ಡ್, ಓಷನ್ ರಿವರ್ಸ್ ಕ್ಯಾಸಿನೊ, ಪಪ್ಪೀಸ್ ಕ್ಯಾಸಿನೊ ಪ್ರೈಡ್, ಓಷನ್ 7 ಕ್ಯಾಸಿನೊ ಮತ್ತು ಬಿಗ್ ಡ್ಯಾಡಿ ಕ್ಯಾಸಿನೊಗಳಲ್ಲಿ ಇಡಿ ಶೋಧ ನಡೆಸಿದೆ. ಆರೋಪಿ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಅವರು ಕಿಂಗ್ 567, ರಾಜಾ 567, ಪಪ್ಪೀಸ್ 003 ಮತ್ತು ರತ್ನಾ ಗೇಮಿಂಗ್ ನಂತಹ ಹಲವಾರು ಆನ್‌ಲೈನ್ ಬೆಟ್ಟಿಂಗ್ ಸೈಟ್‌ಗಳನ್ನು ನಡೆಸುತ್ತಿರುವುದು ಶೋಧ ಕಾರ್ಯಾಚರಣೆಯ ವೇಳೆ ಬಹಿರಂಗವಾಗಿದೆ!


ನಾಚಿಕೆಗೇಡು!

ಇದಲ್ಲದೆ, ಆರೋಪಿಯ ಸಹೋದರ ಕೆ.ಸಿ. ತಿಪ್ಪೇಸ್ವಾಮಿ ದುಬೈಯಿಂದ ಡೈಮಂಡ್ ಸಾಫ್ಟೆಕ್, ಟಿಆರ್ ಎಸ್ ಟೆಕ್ನಾಲಜೀಸ್, ಪ್ರೈಮ್ 9 ಟೆಕ್ನಾಲಜಿ ಎಂಬ ಮೂರು ವ್ಯಾಪಾರ ಘಟಕಗಳನ್ನು ನಿರ್ವಹಿಸುತ್ತಿದ್ದಾರೆ ಎಂದು ಇ.ಡಿ ಮೂಲಗಳು ತಿಳಿಸಿವೆ. ಈ ಘಟಕಗಳು ಕೆ.ಸಿ. ವೀರೇಂದ್ರ ಅವರ ಕಾಲ್ ಸೆಂಟರ್‌ಗಳು ಮತ್ತು ಗೇಮಿಂಗ್ ವ್ಯವಹಾರಕ್ಕೆ ಸಂಬಂಧಿಸಿವೆ ಎನ್ನಲಾಗಿದ್ದು, ಬೆಟ್ಟಿಂಗ್ ದಂಧೆಯ ಕರಾಳತೆ ಮತ್ತಷ್ಟು ವಿಸ್ತರಿಸಲಿದ್ದು, ಹೆಚ್ಚು ಕಮ್ಮಿ ಐದಾರು ತಿಂಗಳು ತನಿಖೆಯೇ ನಡೆಯಲಿದೆ ಎನ್ನಲಾಗಿದ್ದು, ಪಪ್ಪಿ ಕತೆ ಮುಗಿದೇ ಹೋಗಬಹುದಾ.... ಎಂಬ ಚರ್ಚೆಗಳು ನಡೆಯುತ್ತಿವೆ!

☞ 14

## ಹೈ ಕೋರ್ಟ್ ಮೊರೆ ಹೋದ ದೊಡ್ಡಣ್ಣನ ಮಗಳು ಚೈತ್ರಾ!

ಆನ್‌ಲೈನ್ ಮತ್ತು ಆಫ್‌ಲೈನ್ ಅಕ್ರಮ ಬೆಟ್ಟಿಂಗ್ ಆರೋಪದ ಮೇಲೆ ಚಿತ್ರದುರ್ಗದ ಶಾಸಕ ಕೆ.ಸಿ. ವೀರೇಂದ್ರ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ಬಂಧಿಸಿರುವುದು ಕಾನೂನುಬಾಹಿರ ಎಂದು ಘೋಷಿಸಿ, ಅವರನ್ನು ತಕ್ಷಣವೇ ಬಿಡುಗಡೆಗೊಳಿಸಬೇಕು ಎಂದು ಪಪ್ಪಿ ಪತ್ನಿ ಆರ್.ಡಿ. ಚೈತ್ರಾ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ! ವೀರೇಂದ್ರ ಅವರ ಪತ್ನಿ ಚೈತ್ರಾ ಹೈಕೋರ್ಟ್‌ಗೆ ತಕರಾರು ಅರ್ಜಿ ಸಲ್ಲಿಸಿದ್ದು, ಅರ್ಜಿಯಲ್ಲಿ ಬೆಂಗಳೂರು ವಲಯದ ಜಾರಿ ನಿರ್ದೇಶನಾಲಯದ ಸಹಾಯಕ ನಿರ್ದೇಶಕರನ್ನು ಪ್ರತಿವಾದಿ ಮಾಡಿದ್ದಾರೆ. ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ!

ಆನ್‌ಲೈನ್ ಹಾಗೂ ಆಫ್‌ಲೈನ್ ಅಕ್ರಮ ಗೇಮಿಂಗ್ ಪ್ರಕರಣ ಸಂಬಂಧ 2022ರ ಜು.6ರಂದು ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಈ ಎಫ್‌ಐಆರ್‌ನಲ್ಲಿ ಯಾರೊಬ್ಬರ ಹೆಸರು ಉಲ್ಲೇಖವಾಗಿರಲಿಲ್ಲ, ಈ ಎಫ್‌ಐಆರ್ ಆಧರಿಸಿ 2025ರ ಆ.21 ರಂದು ಇ.ಡಿ. ಇಸಿಐಆರ್ ದಾಖಲಿಸಿತ್ತು.



ಆ.23ರಂದು ಪ್ರಕರಣದಲ್ಲಿ ಮೊದಲನೇ ಆರೋಪಿಯಾಗಿ ಚಿತ್ರದುರ್ಗದ ಶಾಸಕರಾದ ತಮ್ಮ ಪತಿ ಕೆ.ಸಿ. ವೀರೇಂದ್ರ ಅವರನ್ನು ಬಂಧಿಸಿದೆ. ದುರುದ್ದೇಶಪೂರ್ವಕವಾಗಿ ಮತ್ತು ಟಾರ್ಗೆಟ್ ಮಾಡಿ ತಮ್ಮ ಪತಿಯನ್ನು ಇ.ಡಿ. ಬಂಧಿಸಿದೆ ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ! ಅಲ್ಲದೆ, 10-15 ವರ್ಷಗಳ ಹಿಂದೆ ದಾಖಲಾಗಿದ್ದ ಕ್ರಿಕೆಟ್ ಬೆಟ್ಟಿಂಗ್ ಮತ್ತು ಜೂಜಾಟ ಪ್ರಕರಣ ಆಧರಿಸಿ ಇದೀಗ ಇ.ಡಿ. ತನಿಖೆ ನಡೆಸುತ್ತಿದ್ದು ಆ ಪ್ರಕರಣ ಈಗಾಗಲೇ ಮುಕ್ತಾಯಗೊಂಡಿದ್ದು, ಯಾವುದೇ ಅನುಸೂಚಿಸಿ ಪ್ರಕರಣ ಇಲ್ಲದಿದ್ದರೂ ವೀರೇಂದ್ರ ಅವರನ್ನು ಬಂಧಿಸಲಾಗಿದೆ!

ತಮ್ಮ ಪತಿ ಚುನಾವಣೆಯ ವೇಳೆಯಲ್ಲಿ ತಮ್ಮ ಆಸ್ತಿ ವಿವರ ಸಲ್ಲಿಸಿದ್ದಾರೆ. ಲೋಕಾಯುಕ್ತರಿಗೂ ಕಾಲ ಕಾಲಕ್ಕೆ ಆಸ್ತಿ ವಿವರ ಸಲ್ಲಿಸಿದ್ದಾರೆ. ಈವತ್ತಿನ ಬಂಧನಕ್ಕೆ ಸೂಕ್ತ ಕಾರಣಗಳನ್ನು ಇ.ಡಿ. ನೀಡಿಲ್ಲ, ಇದು ಸಂವಿಧಾನದ ಪರಿಚ್ಛೇದ 19 ಮತ್ತು 21 ಅಡಿಯಲ್ಲಿ ದೊರೆತಿರುವ ಸ್ವಾತಂತ್ರ್ಯ ಮತ್ತು ಜೀವಿಸುವ ಹಕ್ಕಿನ ಉಲ್ಲಂಘನೆ! ಆದ್ದರಿಂದ ತಮ್ಮ ಪತಿ ವೀರೇಂದ್ರ ಅವರ ಬಂಧನವನ್ನು ಅಕ್ರಮ ಎಂದು ಘೋಷಿಸಬೇಕು. ತಕ್ಷಣ ಬಿಡುಗಡೆ ಮಾಡಲು ನಿರ್ದೇಶನ ನೀಡಬೇಕು ಎಂದು ಕೋರಿದ್ದಾರೆ! ☯



## ಬಾತ್‌ರೂಮ್ ಗೋಡೆಯಲ್ಲೂ ಸಿಕ್ಕಿತ್ತು!

ಈ ಪಪ್ಪಿ ಚಳ್ಳಕೆರೆ ತಾಲೂಕಿನ ಕೊಂಡ್ಲ ಹಳ್ಳಿ ಎಣ್ಣೆವ್ಯಾಪಾರಿ ಚನ್ನಬಸಪ್ಪನ ಮಗ. ಚಳ್ಳಕೆರೆ ಕಲಬೆರಕೆ ತೈಲಕ್ಕೆ ಕುಖ್ಯಾತಿ ಹೊಂದಿದ್ದ ತಾಲೂಕು. ಒಂದು ಕಾಲದಲ್ಲಿ ಅರಬ್‌ಕಂಟ್ರಿಯಷ್ಟೇ ಫೇಮಸ್ ಆಗಿತ್ತು! ಅಂಥ ವ್ಯಾಪಾರ ಮಾಡ್ತಿದ್ದ ಚನ್ನಬಸಪ್ಪ ಕೂಡ ನಷ್ಟ ಅನುಭವಿಸಿ ತನ್ನ ಫ್ಯಾಕ್ಟರಿ ಮುಚ್ಚಿದ್ದರಂತೆ! ಪಪ್ಪಿ ಆಗಿನ್ನೂ ಚಿಕ್ಕ ಹುಡುಗ. ಆಗ ಎಲ್ಲೆಲ್ಲೂ ವಿಡಿಯೋ ಪಾರ್ಲರ್ ಹಾವಳಿ. ಸಿಂಗಲ್ ನಂಬರ್ ಲಾಟರಿ ಕೂಡ ವಿಜೃಂಭಿಸುತ್ತಿತ್ತು.

ಪಪ್ಪಿ ಈ ಎಲ್ಲಾ ಕೆಲಸಕ್ಕೆ ಕೈ ಹಚ್ಚಿ ದುಡ್ಡು ಮಾಡಿದ ಅಂತ ಹಳಬರು ಈಗಲೂ ಮೆಲುಕು ಹಾಕ್ತಾರೆ. ಹಾಗೇ ಸ್ವಲ್ಪ ದುಡ್ಡು ಮಾಡಿದ ಪಪ್ಪಿ ಸೀದಾ ಗೋವಾಗೆ ತೆರಳಿ ಕ್ಯಾಸಿನೋ ಕಸುಬು ಶುರುಮಾಡಿ ಕೊಳ್ಳೆ ಹೊಡೆದ! ಆಮೇಲೆ ಬೆಟ್ಟಿಂಗ್ ದಂಧೆ!!

ಒಟ್ಟಾರೆ, ಯಾವ ಯಾವ ಕಸುಬಿನಿಂದ ಹಣದ ಮಳೆ ಸುರಿಯುತ್ತೊ... ಅದೆಲ್ಲವನ್ನು ಮಾಡಿದ್ದಾರೆ. ಸದ್ಯ, ವೇಶ್ಯಾ ದಂಧೆ ಮಾಡಿದ ಬಗ್ಗೆ ದೂರುಗಳಿಲ್ಲ! ಅಷ್ಟರ ಮಟ್ಟಿಗೆ ಹೆಣ್ಣು ಕೊಟ್ಟ ಮಾವ ನಮ್ಮ ನಿಮ್ಮೆಲ್ಲರ ಪ್ರೀತಿಯ ನಟ ದೊಡ್ಡಣ್ಣ ಅದೃಷ್ಟವಂತರು!

ದುಡ್ಡು ಮಾಡಿದ ಮೇಲೆ ರಾಜಾಶ್ರಯ ಬೇಕಲ್ಲ, ಪಪ್ಪಿ ಜೆಡಿಎಸ್ ಸೇರಿಕೊಂಡಿದ್ರು. 2018 ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸೋಲು! ಆ ಸಂದರ್ಭದಲ್ಲಿ ಪಪ್ಪಿ ಮನೆ ಮೇಲೆ ಸಿಬಿಐ ದಾಳಿ ನಡೆದು ಕೋಟ್ಯಾಂತರ ನಗದು ಚಿನ್ನಾ ಬಣ್ಣ ಪತ್ತೆಯಾಗಿತ್ತು. ಅಧಿಕಾರಿಗಳು ಬಾತ್‌ರೂಮ್‌ನಲ್ಲಿ ಗೋಡೆ ಬಡಿದು ಚೆಕ್ ಮಾಡಿದಾಗ, ಏನೋ ಸೌಂಡ್ ಆಗಿ ಹೊಡೆದು ನೋಡಿದರೆ, ಅಲ್ಲೊಂದು ಲಾಕರ್ ಇದ್ದು, ಅದರ ತುಂಬಾ ಐದು ಚಿಲ್ಲರೆ ಕೋಟಿ ಹಣ ಇತ್ತಂತೆ!

ಈ ಘಟನೆ ಅಂದಿಗೆ ಬ್ರೇಕಿಂಗ್ ನ್ಯೂಸ್ ಆಗಿತ್ತು. ಅಲ್ಲದೆ, ಪಪ್ಪಿ ಯನ್ನು ಜೆಡಿಎಸ್ ನಿಂದ ಕಿತ್ತೊಗೆಯಲಾಗಿತ್ತು! ಅನಂತರ ಪಪ್ಪಿ ಕಾಂಗ್ರೆಸ್‌ಗೆ ಜಂಪ್ ಆಗಿ 2023ರ ಚುನಾವಣೆಯಲ್ಲಿ ತನ್ನ ಹಣಬಲದಿಂದಲೇ ಗೆದ್ದು ಬೀಗಿದ... ವಿಧಾನಸೌಧಕ್ಕೆ ಕಾಲಿಟ್ಟ ಮೇಲಾದರೂ ಬದಲಾಗುತ್ತಾರೆ ಅಂದರೆ, ಕರ್ನಾಟಕ ಗೋವಾ ಶ್ರೀಲಂಕಾದಲ್ಲಿದ್ದ ತನ್ನ ದಂಧೆಯನ್ನು ಇದೀಗ ಸಿಕ್ಕಿಂಗೂ ವಿಸ್ತರಿಸಲು ಹೋಗಿ ಇ.ಡಿ. ಕೆಂಗಣ್ಣಿಗೆ ಬಿದ್ದು ತಗುಲಿಕೊಂಡಿದ್ದಾರೆ! ☯

## ದರ್ಶನ್ - ದಿಂಬು ಮತ್ತು ಕಾನೂನು....


ಮೊನ್ನೆ ಮೊನ್ನೆ ವರೆಗೂ ಬೆನ್ನು ಹುರಿಗೆ ಆಗಿರುವ ತೊಂದರೆ ಯಿಂದ ಲಕ್ವ ಹೊಡೆಯುತ್ತೆ ಎನ್ನುವ (ಅತಾರ್ಕಿಕ ಮತ್ತು ಅವೈಜ್ಞಾನಿಕ) ವಾದವನ್ನೂ ಮಂಡಿಸಿ, ಅದನ್ನೂ ಅರಗಿಸಿಕೊಂಡಿದ್ದ ನ್ಯಾಯವಾದಿಗಳ ವರಸೆಗಳನ್ನು ಪೂರ್ತಿ ರಾಜ್ಯವೇ ಗಮನಿಸಿತ್ತು. ಅದರಲ್ಲೂ ಪ್ರತಿ ಸಲ ಬ್ಯಾಗು ಹೊರುವಾಗಲು ಇದನ್ನು ಹೊರುವುದು ಎಂದೇ ಪತ್ರಿಕೆಗಳು, ಟಿವಿಗಳು ಬಾಯಿಗೆ ಬಂದಂತೆ ಹೇಗೆ ಹೊರುತ್ತಿದಾರೆ ನೋಡಿ ಎಂದೆಲ್ಲ ತೋರಿಸಿ ಒದರಿ ತಮ್ಮ ಋಣ ತೀರಿಸಿದ್ದವು. ಕಾರಣ, ಬ್ಯಾಗನ್ನು ಯಾರೂ ಹೊರುವುದಿಲ್ಲ ಕಣ್ರೀ.... ಹಿಡಿದುಕೊಳ್ಳುತ್ತಾರೆ. ಅವಾಗೆಲ್ಲ ಮಾಡಿದ ಬೆನ್ನು ನೋವಿನ ಆ ವಿಡಿಯೋ ಸಾರ್ವಜನಿಕವಾಗಿ ಎಲ್ಲೆಲ್ಲಿ ಕಾಣ ಸಿಗುತ್ತದೆಯೋ ಅಲ್ಲೆಲ್ಲ ದರ್ಶನ ನಿಂತು ನಿಂತು ಬೆನ್ನ ಕೆಳಗೆ ಗುದ್ದಿಕೊಳ್ಳುತ್ತಾ, ಹೋಗುತ್ತಿದ್ದುದೂ ಕಾಣಿಸುತ್ತಲೇ ಇತ್ತು. ಹಾಗೆ ಗುದ್ದಿಕೊಂಡವನಿಗೆ ಜಾಮೀನು ಸಿಕ್ಕಿದ್ದೇ ತಡ, 'ಡೆವಿಲ್' ಚಿತ್ರವನ್ನು ಪೂರ್ಣಗೊಳಿಸಿದರು.

ದೇಶ ವಿದೇಶ ಸುತ್ತಿದಾಯ್ತು. ಜೈಲಿನಲ್ಲಿದ್ದಾಗಲೂ ಕಾಫಿ ಸಿಗರೇಟು ಎಂದೆಲ್ಲ ಎಂಜಾಯ್ ಮಾಡುತ್ತಿದ್ದಾಗಿನ ಭಾವ ಭಂಗಿ ನೋಡಿದರೆ ಎಂಥವರಿಗೂ ನಮ್ಮಲ್ಲಿ ಕಾನೂನು ಮತ್ತು ನ್ಯಾಯಾಲಯವನ್ನು ಹಣವಿದ್ದರೆ ತಮ್ಮಿಚ್ಚೆಯಂತೆ ಬಳಸಿಕೊಳ್ಳಬಹುದೆಂದು ಹೆಚ್ಚು ಕಡಿಮೆ ಖಾತರಿಯಾಗೇ ಹೋಗಿತ್ತು. ಆಗಿನ ಆ ಬಾಡಿ ಲಾಂಗ್ವೇಜ್ ನೋಡಿದರೆ ಸಾಕಾಗುತ್ತೆ ಅನ್ನುತ್ತೆ, ಇದೆಲ್ಲ ಅರ್ಥವಾಗಲು! ಆದರೆ ಯಾವಾಗ ಸೆನ್ಸೆಷನಲ್ ನ್ಯೂಸ್ ಆಗುವಂತೆ ಸುಪ್ರಿಂ ಕೋರ್ಟು ಎಗಾದಿಗಾ ಉಗಿದು ಎಲ್ಲರನ್ನೂ ಮತ್ತೊಮ್ಮೆ ಒಳಕ್ಕೆ ತಳ್ಳಿ ಎನ್ನುತ್ತಿದ್ದಂತೆ ಅಲ್ಲಿವರೆಗೆ ಆರು ತಿಂಗಳು ತಣ್ಣಗೆ ಕೂತಿದ್ದ ತನುಮನಗಳೆಲ್ಲ ಒಮ್ಮೆಲೆ ದಿಡಗ್ಗನೇ ಎದ್ದು ಕುಂತವು. (ಆರು ತಿಂಗಳಲ್ಲಿ ಯಾಕೆ ಬೆನ್ನು ನೋವಿಗೆ ಚಿಕಿತ್ಸೆ ಪಡೆದಿಲ್ಲ? ಎಂದು ಯಾವ ಟೀವಿ, ಪತ್ರಿಕೆಯೂ ಪ್ರಶ್ನೆ ಮಾಡಲಿಲ್ಲ!) ಆರಾಮಾಗಿ ಶೂಟಿಂಗ್ ಮಾಡಿಕೊಂಡು ನಿಂತಿದ್ದ ದರ್ಶನ್‌ಗೆ ಯಾವಾಗ ಬೇಲ್ ರದ್ದಾಗಿ ಮತ್ತೆ ಜೈಲ್ ಪಾಲಾದರೋ... ಇದ್ದಕ್ಕಿದ್ದಂತೆ ಈಗ ಆಪರೇಶನ್ ಆದ ಕೈ ನೋವು ಎದ್ದು ಕೂತಿದೆ! ಜೈಲ್ ಒಳಗೆ ಸಿಬ್ಬಂದಿ ಸರಿಯಿಲ್ಲ, ಶೂಸ್ ಹಾಕೊಂಡೆ ಒಳಗೆ ಬರ್ತಾರೆ, ಊಟದ ತಟ್ಟೆ ಎಸಿತಾರೆ, ಒಳ್ಳೆ ಬೆಡ್‌ಶೀಟ್ ಕೊಟ್ಟಿಲ್ಲ, ದಿಂಬು ಮೊದಲೇ ಇಲ್ಲ... ಪ್ರತಿನಿತ್ಯ ಮಳೆ.... ಸಖತ್ ಚಳಿಯಾಗುತ್ತೆ... ಒಳ್ಳೆ ಬೆಡ್‌ಶೀಟ್ ಮತ್ತು ದಿಂಬು ಕೊಡಿಸಿ ಅಂತ ಆರೋಪಿ ಪರವಾಗಿ ವಕೀಲರು ಮಾನ್ಯ ನ್ಯಾಯಾಧೀಶರನ್ನ ವಿನಂತಿಸುತ್ತಾರೆ. ಹಾಗೆ ನೋಡಿದರೆ ಹತ್ತಾರು ವರ್ಷದಿಂದ ಲೆಕ್ಕ ತಪ್ಪಿ ಕಾಯಿಲೆ ಕಸಾಲೆಗೆ ಸಿಕ್ಕು ಹಡಾಲೆದ್ದು ಹೋದ ಎಷ್ಟು ಸಜಾ ಬಂಧಿಗಳು ಒಳಗಿಲ್ಲ, ಕೇಳಿದರೆ ಒಬ್ಬೊಬ್ಬನಿಗೂ ದಿಂಬು ಮಾತ್ರವಲ್ಲ ಒಬ್ಬರು ಸಹಾಯಕರನ್ನೇ ನೇಮಿಸಬೇಕಾದ ಸ್ಥಿತಿಗೆ ತಲುಪಿದವರೂ ಇರಬಹುದು. ಆದರೆ ಜೈಲು ಮತ್ತು ಕಾನೂನು ಎಂದ ಮೇಲೆ ಅವನು, ಇವನು ಎಲ್ಲರೂ ಒಂದೇ ಅಲ್ಲವೇ. ಆದರೆ ಆ ಬಂಧಿಗೆ ದುಡ್ಡು ದುಗ್ಗಾಣಿ, ಬಣ್ಣ ಬಣ್ಣದ ಕೂದಲು ಹಾರಿಸಿಕೊಂಡು ಪೋಲಿಸರನ್ನೇ ಬೈದು ಮುಂದಕ್ಕೆ ಹೋಗುವಷ್ಟು ಧಾರ್ಷ್ಟ್ಯದ ಗರ್ಲ್ ಫ್ರೆಂಡು ಇವಾವ ಅನುಕೂಲ ಮಸಾಲೆ ಲೈಫು ಇಲ್ಲ! ಅದೆಲ್ಲದಕ್ಕಿಂತ ಹಾಗೆ ಕಲರ್ ಕಲರ್ ಕಾಗೆ ಹಾರಿಸುವ ಬದುಕೂ ಅವರದ್ದಲ್ಲ, ಹೀಗಿದ್ದಾಗ ಅದ್ಯಾವ ವಕೀಲ ಹೀಗೆ ಕೊಂಕು ನೆಪದಲ್ಲಿ ಜಾಮೀನು ಅರ್ಜಿಗೆ ವಗಾಯಿಸಿಯಾನು?



ದುಡ್ಡು ಚೆಲ್ಲಬಲ್ಲ ತಾಖತ್ತು ಮತ್ತು ಹಿಕ್ಮತ್ತಿದ್ದರೆ ಇಲ್ಲೆ ಸ್ವರ್ಗ ಸೃಷ್ಟಿಸುವ ಈ ದಿನಮಾನದಲ್ಲಿ ಜೈಲಲ್ಲೂ ಅದೆಲ್ಲ ಕೊಡಲಿ ಎಂದು ಬಾಯ್ತೆಗೆಯುವ ಜನಕ್ಕೇನೂ ಕೊರತೆ ಇಲ್ಲ. ಇನ್ನು ಒಂದೇ ದಿನದಲ್ಲಿ ಸನ್ನಡತೆ ಆಧಾರದ ಮೇಲೆ ಜಾಮೀನು ಕೊಡಿ ಎಂದು ನಿಲ್ಲುವ ವಕೀಲರು ಅದೆಂಗೆ 24 ತಾಸಿನಲ್ಲಿ ಯಾವ ಮಾನದಂಡದ ಮೇಲೆ ಸನ್ನಡತೆ ಅಳೆದರೋ ನಾ ಕಾಣೆ!

ಅದೆಲ್ಲ ಏನೇ ಇರಲಿ, ಇದನ್ನೆಲ್ಲ ಜನರೂ ಗಮನಿಸುತ್ತಿದ್ದಾರೆ, ಏನೆಂದು ಕೊಳ್ಳಲಿಕ್ಕಿಲ್ಲ ಎನ್ನುವ ಸಣ್ಣ ಸೆನ್ಸ್ ಕೂಡಾ ಇಲ್ಲದೇ, ಹೇಗಾದರೂ ಕೊಲೆಯ ಆರೋಪಿಯನ್ನು ಹೊರಕ್ಕೆ ತಂದುಕೊಳ್ಳುವುದು ಮಾತ್ರ ಇವರದ್ದೆಲ್ಲ ಮೊದಲ ಮತ್ತು ಏಕೈಕ ಅಜೆಂಡಾ ಆಗಿದೆಯಲ್ಲ... ಇದೇ ಬೇಜಾರಿನ ಸಂಗತಿ. ಅದಕ್ಕಾಗೇ ಚಳಿ, ದಿಂಬು, ಕೈಗಾದ ಆಪರೇಶನ್ನು, (ಯಾಕೆ ಜೈಲಿನ ಡಾಕ್ಟರು ಏನು ಅದನ್ನೆಲ್ಲಾ ನೋಡಲ್ವಾ..? ಮೈಕೈಗೆ ಚಳಿಗೆ ಕವರ್ ಮಾಡಿಕೊಳ್ಳಲು ಹಾಸಿಗೆ ದಿಂಬು ಕೊಡುತ್ತಿಲ್ಲ ಎನ್ನುವ ದೂರಿಗೆ ಏನು ಹೇಳುವುದು? ಹಾಗೆ ಕೊಡದಿದ್ದರೆ ಜೈಲಾಧಿಕಾರಿಯೆ ಸಸ್ಪೆಂಡ್ ಆದಾನು...... ಅದೆಲ್ಲ ಎಲ್ಲರಿಗೂ ಸಿಗುವಂತೆ ನಟನಿಗೂ ರಾಜಕಾರಣಿಗೂ ಸಿಗುತ್ತದೆ. ಅದರ ಹೊರತಾಗಿ ಪೂರೈಸಿಕೊಳ್ಳಬಲ್ಲ ತಾಕತ್ತಿನವನು ಆ ನಟ! ಆದರೆ ಅಲ್ಲೂ ಅದೇ ಅಹಂ ಮತ್ತು ಹಣವಿದ್ದರೆ ಏನನ್ನೂ ಕೊಂಡುಕೊಳ್ಳುತ್ತೇನೆನ್ನುವ ಕೊಬ್ಬು ಅವನನ್ನು ಮುರಿದು ಮೂಲೆಗೆ ಕೂರಿಸುತ್ತಿದೆ!



ಅವನ ಹತ್ತಿರ ದುಡ್ಡಿದೆ ಎನುವ ಅಂಶವೇ ಇತರರು ಅವನಿಗೆ ಬೇಕಿದ್ದೆಲ್ಲ ಪೂರೈಸಲು ತಯಾರಾಗಿಬಿಡುತ್ತಿದ್ದಾರೆ. ಪುಣ್ಯಕ್ಕೆ ಕೆಲವೊಮ್ಮೆ ಸುಪ್ರಿಂ ಕೋರ್ಟಾದರೂ ಚಾಟಿ ಬೀಸಿ ಬದುಕು ನೇರ್ಪುಗೊಳಿಸುತ್ತಿದೆ. ಇಲ್ಲದಿದ್ದರೆ ಭಾರತದ ಬಹುತೇಕ ಆರೋಪಿಗಳ ಬದುಕು ಅಲ್ಲೆ ಬರಬಾದಾಗಿ ಹೋಗುತ್ತಿತ್ತೇನೋ. ಏನೇ ಎಂದರೂ ಕೊನೆಗೆ ದುಡ್ಡೆಷ್ಟು ಚೆಲ್ಲುತ್ತಿ ಎನುವ ಜಾಗಕ್ಕೇನೇ ತರ್ಕ ಬಂದು ನಿಲ್ಲುವಲ್ಲಿ ಪ್ರತಿಯೊಬನೂ ದುಡ್ಡಿಗೆ ಎಲ್ಲವನ್ನೂ ಅಳೆಯ ತೊಡಗಿದಾಗ, ಎಂಥವನಿಗೂ ದುಡ್ಡು ಮಾಡುವುದೇ ಅನಿವಾರ್ಯವಾಗುತ್ತದೆ ಅನ್ನಿಸುತ್ತದೆ! ಹಾಗಾದಾಗ ಸಮಾಜದಲ್ಲಿ ಕಾನೂನು ಮುರಿಯುವುದು ಕೊಂದೂ ದಕ್ಕಿಸಿಕೊಳ್ಳುತ್ತೇನೆನ್ನುವ ಅತಾರ್ಕಿಕ ಅಜೆಂಡಾಗಳೆ ಎದ್ದು ನಿಲ್ಲತೊಡಗುತ್ತವೆ. ಅದರಲ್ಲೂ ಬೆಂಗಳೂರು ಜಗತ್ತಿನ ಬೆಸ್ಟ್ ಕ್ರೈಮ್ ನಗರಿ ಎಂದಾಗಲೂ ಮತ್ತು ಕಾನೂನು ಮುರಿಯುವುದರಲ್ಲೂ ಮೂಲಭೂತ ವ್ಯವಸ್ಥೆಯೇ ಇಲ್ಲ ಎಂದು ಹೆಸರಾಗಲು ಹೆಚ್ಚು ಸಮಯ ಬೇಕಿಲ್ಲವೇನೋ! ಅಂದಹಾಗೆ, ದರ್ಶನ ಪ್ರೇಯಸಿ ಪವಿತ್ರ ಕೂಡ ಹೊಸದಾಗಿ ಬೇಲ್ ಗೆ ಅಪ್ಲಿಕೇಶನ್ ಹಾಕಿದ್ದಳು. ನಾನು ಸಿಂಗಲ್ ಮದರ್ ಇದ್ದೇನೆ, ಮಗಳಿಗೆ ಉಣ್ಣೆಸೋರು ನೋಡೋರು ಯಾರೂ ಇಲ್ಲ..... ಅಂತ ಕಾರಣ ನೀಡಿದ್ದಳು. ಕೋರ್ಟ್ ಅದನ್ನು ಮನ್ನಿಸದೆ ಬೇಲ್ ಅರ್ಜಿಯನ್ನ ರಿಜೆಕ್ಟ್ ಮಾಡಿದೆ! ಸೋ, ಬಾಸ್ ಬೋಸಿ ಎರಡೂ ಜೈಲಲ್ಲೇ ಇದ್ದಾವೆ! ಇದರ ಮಧ್ಯೆ ಇವರು ಬೇಲ್ ಗಿಟ್ಟಿಸಿಕೊಳ್ಳುವ ಮುನ್ನ ಯಾವ್ಯಾವ ಜೈಲಲ್ಲಿದ್ದರೋ ಅಲ್ಲಲ್ಲಿಗೆ ವಾಪಸ್ ಹಾಕಬೇಕು ಅಂತ ಪೊಲೀಸ್ ತನಿಖಾಧಿಕಾರಿಗಳು ಕೋರ್ಟ್‌ನಲ್ಲಿ ವಿನಂತಿಸಿದ್ದಾರೆ. ಆರೋಪಿಗಳ ಪರ ವಕೀಲರು ಬೇಡ ಸ್ವಾಮಿ ಇಲ್ಲೇ ಇದ್ರೆ ಒಳ್ಳೇದು, ಕೋರ್ಟ್ ವಿಚಾರಣೆಗೆ ಹತ್ರ ಆಗುತ್ತೆ, ಬಳ್ಳಾರಿಯಿಂದ ಬರೋಕೆ ದೂರ ಆಗುತ್ತೆ..... ಪಾಪ, ಅವರ ಹೆಂಡತಿ ಮಕ್ಕಳು ಅಷ್ಟು ದೂರ ಹೋಗಿ ನೋಡಿಕೊಂಡು ಬರೋಕೆ ಆಗುದಿಲ್ಲ.... ಎಂದೆಲ್ಲ ಗೋಗರೆಯುತ್ತಿದ್ದಾರೆ. ಸದ್ಯ, ಈ ಬಗೆಗಿನ ತೀರ್ಪು ಪೆಂಡಿಂಗ್ ನಲ್ಲಿದೆ.... ನಾಳೆ ಏನಾಗುತ್ತೋ? ಕ್ಷಮಿಸಿ, ತಲೆದಿಂಬು ವಿಚಾರಕ್ಕೆ ಇಷ್ಟೆಲ್ಲಾ ಹೇಳಬೇಕಾಯ್ತು!! ☯




# ಒಂದು ಹೆಣ್ಣು ಮುನ್ನೂರು ಗಂಡು!

ಚೀನಾದಲ್ಲಿ ಒಂದು ಸುಂದರವಾದ ಬೌದ್ಧ ಕಥೆಯಿದೆ. ಒಂದು ಪಟ್ಟಣದಲ್ಲಿ ಒಬ್ಬ ಸುಂದರ ಯುವತಿಯು ಇದ್ದಕ್ಕಿದ್ದಂತೆ ಕಾಣಿಸಿಕೊಂಡಳು. ಅವಳು ಎಲ್ಲಿಂದ ಬಂದಿದ್ದಾಳೆಂದು ಯಾರಿಗೂ ತಿಳಿದಿರಲಿಲ್ಲ; ಅವಳ ಸ್ಥಳವು ಸಂಪೂರ್ಣವಾಗಿ ತಿಳಿದಿಲ್ಲ, ಆದರೆ ಅವಳು ತುಂಬಾ ಸುಂದರವಾಗಿದ್ದಳು, ಎಷ್ಟು ಆಕರ್ಷಕವಾಗಿ ಸುಂದರವಾಗಿದ್ದಳು ಎಂದರೆ ಅವಳು ಎಲ್ಲಿಂದ ಬಂದಿದ್ದಾಳೆಂದು ಯಾರೂ ಯೋಚಿಸಲಿಲ್ಲ. ಜನರು ಒಟ್ಟುಗೂಡಿದರು, ಇಡೀ ಪಟ್ಟಣ ಒಟ್ಟುಗೂಡಿದರು – ಮತ್ತು ಎಲ್ಲಾ ಯುವಕರು, ಸುಮಾರು ಮುನ್ನೂರು ಯುವಕರು, ಆ ಮಹಿಳೆಯನ್ನು ಮದುವೆಯಾಗಲು ಬಯಸಿದ್ದರು. ಆ ಮಹಿಳೆ ಹೇಳಿದಳು, 'ನೋಡು, ನಾನು ಒಬ್ಬಳು ಮತ್ತು ನೀವು ಮುನ್ನೂರು. ನಾನು ಒಬ್ಬಳನ್ನು ಮಾತ್ರ ಮದುವೆಯಾಗಬಹುದು, ಆದ್ದರಿಂದ ನೀವು ಒಂದು ಕೆಲಸ ಮಾಡಿ. ನಾನು ನಾಳೆ ಮತ್ತೆ ಬರುತ್ತೇನೆ; ನಾನು ನಿಮಗೆ ಇಪ್ಪತ್ನಾಲ್ಕು ಗಂಟೆಗಳನ್ನು ನೀಡುತ್ತೇನೆ. ನಿಮ್ಮಲ್ಲಿ ಯಾರಾದರೂ ಬುದ್ಧನ ಕಮಲ ಸೂತ್ರವನ್ನು ಪುನರಾವರ್ತಿಸಲು ಸಾಧ್ಯವಾದರೆ, ನಾನು ಅವನನ್ನು ಮದುವೆಯಾಗುತ್ತೇನೆ. ಎಲ್ಲಾ ಯುವಕರು ತಮ್ಮ ಮನೆಗಳಿಗೆ ಓಡಿಹೋದರು; ಅವರು ತಿನ್ನಲಿಲ್ಲ, ಅವರು ಮಲಗಲಿಲ್ಲ, ಅವರು ರಾತ್ರಿಯಿಡೀ ಸೂತ್ರವನ್ನು ಪಠಿಸಿದರು, ಅದನ್ನು ಕಂಠಪಾಠ ಮಾಡಲು ಪ್ರಯತ್ನಿಸಿದರು. ಹತ್ತು ಜನರು ಯಶಸ್ವಿಯಾದರು. ಮರುದಿನ ಬೆಳಿಗ್ಗೆ ಆ ಮಹಿಳೆ ಬಂದಳು ಮತ್ತು ಆ ಹತ್ತು ಜನರು ಪಠಿಸಲು ಮುಂದಾದರು. ಆ ಮಹಿಳೆ ಆಲಿಸಿದಳು. ಅವರು ಯಶಸ್ವಿಯಾದರು. ಅವಳು ಹೇಳಿದಳು, 'ಸರಿ, ಆದರೆ ನಾನು ಒಬ್ಬಳು. ನಾನು ಹತ್ತು ಮದುವೆಯಾಗುವುದು ಹೇಗೆ? ನಾನು ನಿಮಗೆ ಇನ್ನೂ ಇಪ್ಪತ್ತನಾಲ್ಕು ಗಂಟೆಗಳನ್ನು ನೀಡುತ್ತೇನೆ.' ಕಮಲ ಸೂತ್ರದ ಅರ್ಥವನ್ನು ವಿವರಿಸುವವರನ್ನು ನಾನು ಮದುವೆಯಾಗುತ್ತೇನೆ. ಆದ್ದರಿಂದ ನೀವು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ – ಓದುವುದು ಸುಲಭದ ವಿಷಯ, ನೀವು ಏನನ್ನಾದರೂ ಯಾಂತ್ರಿಕವಾಗಿ ಪುನರಾವರ್ತಿಸುತ್ತಿದ್ದೀರಿ ಮತ್ತು ನಿಮಗೆ ಅದರ ಅರ್ಥ ಅರ್ಥವಾಗುತ್ತಿಲ್ಲ.'

ಸಮಯವಿರಲಿಲ್ಲ – ಅದು ಕೇವಲ ಒಂದು ರಾತ್ರಿ – ಮತ್ತು ಕಮಲ ಸೂತ್ರವು ಒಂದು ದೀರ್ಘ ಸೂತ್ರ. ಆದರೆ ನೀವು ಆಕರ್ಷಿತರಾದಾಗ ನೀವು ಏನು ಬೇಕಾದರೂ ಮಾಡಬಹುದು. ಅವರು ಹಿಂತಿರುಗಿ ಓಡಿಹೋದರು, ಅವರು ತುಂಬಾ ಪ್ರಯತ್ನಿಸಿದರು. ಮರುದಿನ ಮೂವರು ವ್ಯಕ್ತಿಗಳು ಬಂದರು. ಅವರು ಅರ್ಥವನ್ನು ಅರ್ಥಮಾಡಿಕೊಂಡಿದ್ದರು. ಮತ್ತು ಆ ಮಹಿಳೆ ಹೇಳಿದರು, 'ಆಗ ಸಮಸ್ಯೆ ಉಳಿಯಿತು. ಸಂಖ್ಯೆ ಕಡಿಮೆಯಾಗಿದೆ, ಆದರೆ ಸಮಸ್ಯೆ ಹಾಗೆಯೇ ಉಳಿಯಿತು. ಮುನ್ನೂರರಿಂದ ಮೂರಕ್ಕೆ ಒಂದು ದೊಡ್ಡ ಸುಧಾರಣೆ, ಆದರೆ ನಂತರ, ನಾನು ಮೂರು ವ್ಯಕ್ತಿಗಳನ್ನು ಮದುವೆಯಾಗಲು ಸಾಧ್ಯವಿಲ್ಲ, ನಾನು ಒಬ್ಬರನ್ನು ಮಾತ್ರ ಮದುವೆಯಾಗಬಹುದು. ಆದ್ದರಿಂದ, ಇನ್ನೂ ಇಪ್ಪತ್ನಾಲ್ಕು ಗಂಟೆಗಳು. ಅದನ್ನು ಅರ್ಥಮಾಡಿಕೊಂಡದ್ದನ್ನು ಮಾತ್ರವಲ್ಲದೆ ಅದನ್ನು ರುಚಿ ನೋಡಿದವರನ್ನೂ ನಾನು ಮದುವೆಯಾಗುತ್ತೇನೆ. ಆದ್ದರಿಂದ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಅದರ ಅರ್ಥವನ್ನು ಸವಿಯಲು ಪ್ರಯತ್ನಿಸಿ. 'ನೀವು ವಿವರಿಸುತ್ತಿದ್ದೀರಿ, ಆದರೆ ಈ ವಿವರಣೆಯು ಬೌದ್ಧಿಕವಾಗಿದೆ. ಇದು ಒಳ್ಳೆಯದು, ನಿನ್ನೆಗಿಂತ ಉತ್ತಮವಾಗಿದೆ, ನಿಮಗೆ ಸ್ವಲ್ಪ ತಿಳುವಳಿಕೆ ಇದೆ, ಆದರೆ ಅದು ಬೌದ್ಧಿಕವಾಗಿದೆ. ನಾನು ಸ್ವಲ್ಪ ಧ್ಯಾನಸ್ಥ ರುಚಿ, ಸ್ವಲ್ಪ ಸುಗಂಧವನ್ನು ನೋಡಲು ಬಯಸುತ್ತೇನೆ.' ಕಮಲವು ನಿಮ್ಮ ಸನ್ನಿಧಿಯನ್ನು ಪ್ರವೇಶಿಸಿದೆ ಎಂದು ನಾನು ನೋಡಲು ಬಯಸುತ್ತೇನೆ, ನೀವು ಕಮಲದ ಭಾಗವಾಗಿದ್ದೀರಿ. ನಾನು ಅದರ ಪರಿಮಳವನ್ನು ಅನುಭವಿಸಲು ಬಯಸುತ್ತೇನೆ. ಆದ್ದರಿಂದ ನಾಳೆ ನಾನು ಮತ್ತೆ ಬರುತ್ತೇನೆ.' ಒಬ್ಬ ವ್ಯಕ್ತಿ ಮಾತ್ರ ಬಂದನು, ಮತ್ತು ಅವನು ಖಂಡಿತವಾಗಿಯೂ ಯಶಸ್ವಿಯಾಗಿದ್ದನು. ಮಹಿಳೆ ಅವನನ್ನು ನಗರದ ಹೊರಗಿನ ತನ್ನ ಮನೆಗೆ ಕರೆದೊಯ್ದಳು. ಆ ವ್ಯಕ್ತಿ ಎಂದಿಗೂ ಮನೆಯನ್ನು ನೋಡಿರಲಿಲ್ಲ; ಅದು ತುಂಬಾ ಸುಂದರವಾಗಿತ್ತು, ಮತ್ತು ಮಹಿಳೆಯ ಪೋಷಕರು ಗೇಟ್ನಲ್ಲಿ ನಿಂತಿದ್ದರು.



ಅವರು ಯುವಕನನ್ನು ಸ್ವಾಗತಿಸಿ, 'ನಾವು ತುಂಬಾ ಸಂತೋಷವಾಗಿದ್ದೇವೆ' ಎಂದು ಹೇಳಿದರು. ಮಹಿಳೆ ಒಳಗೆ ಹೋದಳು ಮತ್ತು ಅವನು ಪೋಷಕರೊಂದಿಗೆ ಸ್ವಲ್ಪ ಚಿಟ್-ಚಾಟ್ ಮಾಡಿದನು. ನಂತರ ಪೋಷಕರು, 'ನೀನು ಹೋಗು. ಅವಳು ನಿಮಗಾಗಿ ಕಾಯುತ್ತಿರುತ್ತಾಳೆ. ಇದು ಅವಳ ಕೋಣೆ.' ಅವರು ಅವನಿಗೆ ತೋರಿಸಿದರು. ಅವನು ಹೋದನು, ಅವನು ಬಾಗಿಲು ತೆರೆದನು, ಆದರೆ ಅಲ್ಲಿ ಯಾರೂ ಇರಲಿಲ್ಲ, ಅದು ಖಾಲಿ ಕೋಣೆಯಾಗಿತ್ತು. ಆದರೆ ತೋಟವನ್ನು ಪ್ರವೇಶಿಸಲು ಒಂದು ಬಾಗಿಲು ಇತ್ತು. ಆದ್ದರಿಂದ ಅವನು ನೋಡಿದನು – ಬಹುಶಃ ಅವಳು ತೋಟದೊಳಗೆ ಹೋಗಿರಬಹುದು. ಹೌದು, ಅವಳು ಹೋಗಿರಬೇಕು, ಏಕೆಂದರೆ ದಾರಿಯಲ್ಲಿ ಹೆಜ್ಜೆಗುರುತುಗಳು ಇದ್ದವು. ಆದ್ದರಿಂದ ಅವನು ಹೆಜ್ಜೆಗುರುತುಗಳನ್ನು ಹಿಂಬಾಲಿಸಿದನು. ಅವನು ಸುಮಾರು ಒಂದು ಮೈಲಿ ನಡೆದನು. ಉದ್ಯಾನವನ ಕೊನೆಗೊಂಡಿತು ಮತ್ತು ಈಗ ಅವನು ಸುಂದರವಾದ ನದಿಯ ದಡದಲ್ಲಿ ನಿಂತಿದ್ದನು – ಆದರೆ ಆ ಮಹಿಳೆ ಅಲ್ಲಿ ಇರಲಿಲ್ಲ, ಹೆಜ್ಜೆಗುರುತುಗಳು ಸಹ ಕಣ್ಮರೆಯಾದವು. ಆ ಮಹಿಳೆಗೆ ಸೇರಿದ ಎರಡು ಬೂಟುಗಳು, ಚಿನ್ನದ ಬೂಟುಗಳು ಮಾತ್ರ ಇದ್ದವು.

ಈಗ ಅವನಿಗೆ ಗೊಂದಲವಾಯಿತು. ಏನಾಯಿತು? ಅವನು ಹಿಂತಿರುಗಿ ನೋಡಿದನು – ಉದ್ಯಾನವಿಲ್ಲ, ಮನೆ ಇಲ್ಲ, ಹೆತ್ತವರಿಲ್ಲ, ಏನೂ ಇಲ್ಲ, ಎಲ್ಲವೂ ಕಣ್ಮರೆಯಾಯಿತು. ಈ ಬೌದ್ಧ ಕಥೆಯು ಅವನನ್ನು ಕ್ರಮೇಣ ಮುಂದಕ್ಕೆ ಕರೆದೊಯ್ಯಲಾಯಿತು ಎಂದು ಹೇಳುತ್ತದೆ. ಆ ಮಹಿಳೆ ಗುರುವಾಗಿದ್ದಳು.

ಆ ಮಹಿಳೆ ಗುರುವಿನ ಸಂಕೇತ. ಅವಳು ಅವನನ್ನು ಕ್ರಮೇಣ ಮುಂದಕ್ಕೆ ಕರೆದೊಯ್ದಳು. ಮೊದಲು, ಸೂತ್ರವನ್ನು ಪಠಿಸಿ; ಎರಡನೆಯದಾಗಿ, ಬೌದ್ಧಿಕವಾಗಿ ಅರ್ಥಮಾಡಿಕೊಳ್ಳಿ; ಮೂರನೆಯದಾಗಿ, ನೀವು ಅದನ್ನು ಬದುಕಿದ್ದೀರಿ ಎಂಬ ಸಂಕೇತವನ್ನು ನೀಡಿ. ಇವು ಮೂರು ಹೆಜ್ಜೆಗಳು. ನಂತರ ಅವಳು ಅವನನ್ನು ಶೂನ್ಯಕ್ಕೆ ಕರೆದೊಯ್ದಳು. ಮೈ ಮೇಲಿನ ಬಣ್ಣ ಮನುಷ್ಯನ ನಿಜವಾದ ಸೌಂದರ್ಯವಲ್ಲ, ಎದೆಯೊಳಗೆ ಇರುವ ಪ್ರೀತಿ, ಕರುಣೆ, ನಂಬಿಕೆಯೇ ನಿಜವಾದ ಸೌಂದರ್ಯ. ☯

# ರ್‍ಯಾಗಿಂಗ್‌ಗೆ ಮನನೊಂದ ವಿದ್ಯಾರ್ಥಿನಿ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ!


ಅಂಜಲಿ


ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಆಚರಿಸಲಾಗುವ ದೀಕ್ಷಾವಿಧಿ ರ್‍ಯಾಗಿಂಗ್ ಎಂಬ ಪದವನ್ನು ಬಳಸಲಾಗುತ್ತದೆ. ಇದು ತುಂಬಾ ಭಾವನಾತ್ಮಕ ವಿಷಯ ಮತ್ತು ಭಯಾನಕ ಪದವಾಗಿದ್ದು ಅಥವಾ ಕಿರಿಯ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ಅವಮಾನ ಕಿರುಳವನ್ನು ಒಳಗೊಂಡಿರುತ್ತದೆ. ವಿದ್ಯಾರ್ಥಿಗಳು ಇದನ್ನು ಸಾಮಾಜಿಕ ಸಂಹವನದ ಸಾಧನವೆಂದು ಭಾವಿಸುತ್ತಾರೆ ಮತ್ತು ಹೀಗಾಗಿ ತಮ್ಮ ಹಿರಿಯ ವಿದ್ಯಾರ್ಥಿಗಳು ತಮ್ಮ ಕಿರಿಯ ವಿದ್ಯಾರ್ಥಿಗಳೊಂದಿಗಿನ ಒಡನಾಟವನ್ನು ಮುರಿಯಲು ಸಹಾಯ ಮಾಡುತ್ತಾರೆ. ಕಾಲೇಜುಗಳು, ಹಾಸ್ಟೆಲ್‌ಗಳು ಮತ್ತು ಕೆಲವೊಮ್ಮೆ ಪ್ರೌಢಶಾಲೆಗಳಲ್ಲಿಯೂ ರ್‍ಯಾಗಿಂಗ್ ರೂಪದಲ್ಲಿ ಕಿರಿಯ ವಿದ್ಯಾರ್ಥಿಗಳಿಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಕುಗ್ಗಿಸಿ ಅವರ ಮನಸ್ಥಿತಿಯನ್ನು ಹಾಳು ಮಾಡಿಕೊಳ್ಳುವ ಮಟ್ಟಿಗೆ ಹೊಗುತ್ತದೆ. ಅದೇ ರೀತಿ ಇಲ್ಲೊಂದು ಕಾಲೇಜಿನ ವಿದ್ಯಾರ್ಥಿನಿಗೆ ಆಕೆಯ ಸಹಪಾಠಿಗಳಿಂದ ಹಲವು ಬಾರಿ ರ್‍ಯಾಗಿಂಗ್ ಮಾಡಿರುತ್ತಾರೆ. ಆಗ ಆ ವಿದ್ಯಾರ್ಥಿನಿ ಮಾನಸಿಕವಾಗಿ ತನ್ನ ಸಹಪಾಠಿಗಳು ಕೊಟ್ಟ ಮಾನಸಿಕ ಕಿರುಕುಳದಿಂದ ಮನ ನೊಂದು ಅವರ ಹೆಸರುಗಳನ್ನು ಒಂದು ಡೆತ್‌ನೋಟ್‌ನಲ್ಲಿ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬಾಗಲಕೋಟೆ ಜಿಲ್ಲೆಯ ಗುಳೆದಗುಡ್ಡ ಪಟ್ಟಣದಲ್ಲಿ ಜರುಗಿರುವ ಬಗ್ಗೆ ಗುಳೆದಗುಡ್ಡ ಪೊಲೀಸ್ ಠಾಣೆಯಿಂದ ವರದಿಯಾಗಿದೆ.

ಬಾಗಲಕೋಟೆ ಜಿಲ್ಲೆಯ ಗುಳೆದಗುಡ್ಡದ ಮೂಲದ ವಿದ್ಯಾಥಿನಿ ಅಂಜಲಿ ಮುಂಡಾಸ (21) ನಗರದ ಪ್ರತಿಷ್ಠತ ಭಂಡಾರಿ ಕಾಲೇಜಿನಲ್ಲಿ ಬಿ.ಎ. ಅಂತಿಮ ವರ್ಷ ಪದವಿ ವ್ಯಾಸಂಗ ಮಾಡುತ್ತಿದ್ದಳು. ಈಗ ಕೆಲವು ದಿನಗಳ ಹಿಂದೆ ಮಾನಸಿಕವಾಗಿ ಊಟ ನಿದ್ದೆ ಸರಿಯಾಗಿ ಮಾಡದೇ ಏನು ಮಾಡುವುದು ಎಂಬ ಚಿಂತೆಯಲ್ಲಿ ಒಂದು ಭ್ರಮೆಯಲ್ಲಿರುತ್ತಿದ್ದಳು ಒಂದು ರೀತಿ ಮಾಡಿತ್ತು. ಸರಿಯಾಗಿ ಊಟ ನಿದ್ರೆ ಮಾಡದೇ ತನ್ನ ನೋವನ್ನು ಯಾರಿಗೂ ತಿಳಿಸದೇ ಮನದಲ್ಲೇ ಕೊರಗುತ್ತಿದ್ದಳು. ಮನೆಯಲ್ಲಿ ತಂದೆ ಇದರ ಬಗ್ಗೆ ವಿಚಾರಿಸಿದರೂ ಅವರಿಗೂ ಹೇಳದೆ ಸುಮ್ಮನಿರುತ್ತಿದ್ದಳಂತೆ. ಅದೊಂದು ದಿನ ಅವಳಿಗೆ ಏನು ತೊಚಿತ್ತೋ ಒಂದು ನಿರ್ಧಾರ ಮಾಡಿಯೇಬಿಟ್ಟಳು.

ಅಂಜಲಿ ಎಂದಿನಂತೆ ಕಾಲೇಜಿಗೆ ಹೋಗುವುದು, ಬರುವುದು ಸಾಮಾನ್ಯವಾಗಿದ್ದು, ಅಂದು ತಾನು ವ್ಯಾಸಂಗ ಮಾಡುತ್ತಿದ್ದ ಕಾಲೇಜಿನಲ್ಲಿ ಅಂಜಲಿಗೆ ತನ್ನ ಸಹಪಾಠಿಗಳು ರ್‍ಯಾಗಿಂಗ್ ಮಡಿದ್ದಾರೆ. ಇದರಿಂದ ತುಂಬಾ ಮಾನಸಿಕಳಾಗಿ ಮನೆಗೆ ಬಂದು ತನ್ನ ಮನೆಯ ಕೊಠಡಿಯಲ್ಲಿ ತನಗೆ ಆದ ನೋವನ್ನು ಒಂದು ನೋಟ್‌ಬುಕ್‌ನಲ್ಲಿ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ

### ಡೆತ್ ನೋಟ್‌ನಲ್ಲಿ ಏನಿದೆ?

ನನ್ನ ಸಾವಿಗೆ ಕಾರಣವಾದ ಈ ಮೂವರು ವ್ಯಕ್ತಿಗಳು ನನ್ನ ಬದುಕಿನಲ್ಲಿ ಪರಿಣಾಮವನ್ನು ಬೀರಿದ್ದಾರೆ. ಅವರುಗಳೆಂದರೆ ವರ್ಷಾ, ಪ್ರದೀಪ ಮತ್ತು ಇನ್ನಿತರ ಸ್ನೇಹಿತರು ನನ್ನ ಬಗ್ಗೆ ನನ್ನನ್ನು ಮಾನಸಿಕವಾಗಿ ಕುಗ್ಗಿಸಿದ್ದಾರೆ ಮತ್ತು ಅವರು ನನ್ನ ಬದುಕಿನ ಮಾರಕ ವ್ಯಕ್ತಿಗಳಾಗಿರುತ್ತಾರೆ. ಇವರನ್ನು ಸುಮ್ಮನೆ ಬಿಡಬಾರದು ಎಂದು ಡೆತ್ ನೋಟ್‌ನ್ನು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಈ ಸಂಭಂಧಪಟ್ಟಂತಹ ಮೂವರ ವಿರುದ್ಧ ಗುಳೆದಗುಡ್ಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.




ಅಂಜಲಿ ಬರೆದಿಟ್ಟ ಡೆತ್‌ನೋಟ್

–ಮಂಜುನಾಥ ಈಶ್ವರ ಕರೋಳಿ


ಎಸ್ಪಿ ಸಿದ್ಧಾರ್ಥ ಗೋಯಲ್


ಅ|| ಎಸ್ಪಿ ಪ್ರಸನ್ನ ದೇಸಾಯಿ



ಡಿವೈಎಸ್ಪಿ ಗಜಾನಂದ ಸುತಾರ


ಸಿಪಿಐ ಸುನಿಲ್ ಸವದಿ

# ಭಾರತದ ಮೇಲೆ ಸುಂಕದ ಬರೆ ಎಳೆದ ಟ್ರಂಪ್‌ಗೆ ಸೈಲೆಂಟ್ ಆಗಿಯೇ ಮಾಂಜಾ ಕೊಟ್ಟರು ಮೋದಿ!

**ಭಾರತ-ಚೀನಾ, ಭಾರತ-ರಷ್ಯಾ ದ್ವಿಪಕ್ಷೀಯ ಸಂಬಂಧ ಗಟ್ಟಿಯಾಗುತ್ತಿರುವುದನ್ನು ಕಂಡು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚಿಂತೆಗೀಡಾಗಿ ನಿದ್ದೆ ಕಳೆದುಕೊಂಡಿದ್ದಾರೆ! ಮಾತ್ರವಲ್ಲ, ಭಾರತ ರಷ್ಯಾದಿಂದ ತೈಲ ತರಿಸಿಕೊಳ್ಳುವುದನ್ನು ನಿಲ್ಲಿಸಿದರೆ ತಾನು ಸುಂಕ ಹಿಂತೆಗೆಯುತ್ತೇನೆ ಎಂದೆಲ್ಲ ಮಾತಾಡುತ್ತಿದ್ದಾರೆ! ಹೀಗಿರುವಾಗ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಈ ಸುಂಕ ಸಮರದಲ್ಲಿ ಭಾರತವನ್ನು ನೇರವಾಗಿ ಬೆಂಬಲಿಸಿ ಟ್ರಂಪ್‌ಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ! ವಸಾಹತುಶಾಹಿ ಯುಗ ಮುಗಿದಿದೆ ಎಂಬ ಸತ್ಯವನ್ನು ಅಮೆರಿಕ ಅರಿಯಬೇಕು ಎಂಬ ಪುಟಿನ್ ಹೇಳಿಕೆ, ಸುಂಕದ ನಶೆಯಲ್ಲಿ ತೇಲಾಡುತ್ತಿರುವ ಡೊನಾಲ್ಡ್ ಟ್ರಂಪ್‌ಗೆ ಕಪಾಳಮೋಕ್ಷ ಮಾಡಿದಂತಿದೆ!**

✍ ಮಹದೇವ್ ಕೆಂಪಯ್ಯ



ಇದೊಂದು ಅಪರೂಪದ ಬೆಳವಣಿಗೆ. ಭಾರತದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರು ಚೀನಾದ ಮೇಲಿನ ಹಳೆಯ ಮುನಿಸನ್ನು ಮರೆತು, ಚೀನಾ ಅಧ್ಯಕ್ಷ ಕ್ಸಿಜಿನ್ ಪಿಂಗ್ ಆಹ್ವಾನದ ಮೇರೆಗೆ ಅಲ್ಲಿಗೆ ತೆರಳಿ ಹಸ್ತ ಲಾಘವ ನೀಡಿ ಬಂದಿದ್ದಾರೆ! ಅವತ್ತು ಅಲ್ಲಿ ರಷ್ಯಾ ಅಧ್ಯಕ್ಷ ವ್ಲಾದಿಮರ್ ಪುಟಿನ್ ಕೂಡ ಇದ್ದರು ಎಂಬುದು ಭಾರತೀಯರ ಪಾಲಿಗೆ ಯುಗಾದಿ ಮತ್ತು ಯುಗಾದಿ ಪಾಡ್ಯ....!!

ವಿಶ್ವದ ದೊಡ್ಡಣ್ಣ ಎಂಬಂತೆ ಭೀಗುತ್ತಿದ್ದ ಅಮೇರಿಕ ಇತ್ತೀಚಿಗೆ ಭಾರತದ ಮೇಲೆ ವಕ್ರದೃಷ್ಟಿ ಬೀರುತ್ತಿರುವ ಈ ಸಂದರ್ಭದಲ್ಲಿ ಈ ಬೆಳವಣಿಗೆ ನಿಜಕ್ಕೂ ಖುಷಿ ನೀಡಿದೆ! ನಮ್ಮಲ್ಲಿ ಒಂದು ಗಾದೆ ಮಾತಿದೆ. ಯಾರೊಡನೆ ಜಗಳ ಮಾಡಿದ್ರೂ ಪರವಾಗಿಲ್ಲ, ನೆರೆಮನೆಯವರ ಜೊತೆ ಜಗಳವಾಡಿ ನಿಷ್ಠುರ ಕಟ್ಟಿಕೊಳ್ಳಬೇಡ ಅಂತ!

ನೆರವುನೆಯವರ ನಿಷ್ಠುರ ಕಟ್ಟಿಕೊಂಡು ನೆಮ್ಮದಿಯಾಗಿರೋಕೆ ಆಗುತ್ತಾ.... ಭಾರತ ಚೀನಾ ಪರಿಸ್ಥಿತಿ ಹೀಗೇ ಆಗಿತ್ತು. ಅಲ್ಲಿಗಡಿಯಲ್ಲಿ ಅವರ ಮತ್ತು ನಮ್ಮ ಸೈನಿಕರು ಹೊಡೆದಾಡಿಕೊಂಡಾಗ ತುಂಬಾ ಬೇಜಾರು ಆಗಿತ್ತು. ಮುಂಗೋಪಿ ಚೀನಾ ಅಂತೂ ಅತ್ತ ನೇಪಾಳ, ಇತ್ತ ಶ್ರೀಲಂಕ ಎಲ್ಲಾ ಕಡೆ ತನ್ನ ರಹಸ್ಯ ಸೇನಾ ನೆಲೆಗಳನ್ನು ಸ್ಥಾಪಿಸಿ ನೆಮ್ಮದಿ ಇಲ್ಲದಂತೆ ಮಾಡಿದ್ದು ಸುಳ್ಳಲ್ಲ.

ಹೀಗಿರುವಾಗ, ಭಾರತ ಚೀನಾ ಮತ್ತೆ ಒಂದಾಗಿದ್ದು ನಿಜಕ್ಕೂ ಖುಷಿ ಮತ್ತು ನೆಮ್ಮದಿ ತಂದಿದೆ. ಚೀನಾ ಇದೀಗ ಎರಡನೇ ಪ್ರಪಂಚ ಯುದ್ಧದ ನೆನಪಿಗೆ, ವಿಶ್ವದ ಕಿಲಾಡಿ ನಾಯಕರುಗಳನ್ನು ಆಹ್ವಾನಿಸಿ ಅದ್ದೂರಿ ಹಬ್ಬ ಆಚರಿಸುತ್ತಿದೆ.

ಇದೇ ಸಂದರ್ಭದಲ್ಲಿ ತಾನು ಹೊಂದಿರುವ ಯುದ್ಧಾಸ್ತ್ರಗಳ ಪರಿಚಯ ಬೇರೆ ಮಾಡುತ್ತಿದೆ! ಉತ್ತರ ಕೋರಿಯಾದ ನರ ರಾಕ್ಷಸ ಕಿಮ್ ಜಂಗ್ ಘನ ಉಪಸ್ಥಿತಿಯಲ್ಲೇ ಚೀನಾ ಇದೆಲ್ಲಾ ಮಾಡುತ್ತಿದೆ. ಜೊತೆಗೆ ರಷ್ಯಾ ಅಧ್ಯಕ್ಷ ಪುಟಿನ್!

ಒಂದಂತೂ ನಿಜ, ಇವರೆಲ್ಲ ಸೇರಿಕೊಂಡು ಅಮೇರಿಕಾ ಟ್ರಂಪ್ ಸೊಂಟ ಮುರಿಯಲು ನಿಂತುಬಿಟ್ಟಿದ್ದಾರೆ! ಇವರ ನಡುವೆ ನಮ್ಮ ಮೋದೀಜಿ ಸೈಲೆಂಟ್ ಆಗಿಯೇ ಟ್ರಂಪ್‌ಗೆ ಭೇದಿ ಮಾತ್ರೆ ಕೊಟ್ಟಿದ್ದಾರೆ! ರಷ್ಯಾ ಉಕ್ರೇನ್ ಸಮರ ಇನ್ನೂ ನಿಂತಿಲ್ಲ, ಅಮೇರಿಕವಂತೂ ಉಕ್ರೇನ್ ಬೆನ್ನಿಗೆ ನಿಂತಿದೆ. ಹೀಗಾಗಿ, ರಷ್ಯಾ ಭಾರತದ ದೋಸ್ತಿ ಬಯಸುವುದು ಸಹಜವೇ. ಸದ್ಯ ಚೀನಾದಲ್ಲಿರುವ ಅಧ್ಯಕ್ಷ ರಷ್ಯಾ ಪುಟಿನ್ ಅಮೇರಿಕ ವಿರುದ್ಧ ಓಪನ್ ಸ್ಟೇಜ್‌ನಲ್ಲೇ ಕೆಂಡ ಉಗುಳಿದ್ದಾರೆ. ಭಾರತದ ಸರಕುಗಳ ಮೇಲೆ ಶೇ. 50ರಷ್ಟು ಸುಂಕ ಹೇರಿಕೆ ಮಾಡುವ ಅಮೆರಿಕದ ನಿರ್ಧಾರವನ್ನು ತೀವ್ರವಾಗಿ ಖಂಡಿಸಿರುವ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್- ಜಗತ್ತಿನಲ್ಲಿ ವಸಾಹತುಶಾಹಿ ಯುಗ ಅಂತ್ಯಗೊಂಡಿದೆ ಎಂಬುದನ್ನು ಕೆಲವರು ಅರಿತುಕೊಳ್ಳಬೇಕು ಎಂದು ಡೊನಾಲ್ಡ್ ಟ್ರಂಪ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.



ಚೀನಾದ ರಾಜಧಾನಿ ಈಜಿಂಗ್‌ನ ಡಿಯಾಯುಟೈ ಸ್ಟೇಟ್ ಗೆಸ್ಟ್‌ಹೌಸ್‌ನಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ವ್ಲಾಡಿಮಿರ್ ಪುಟಿನ್, ಜಗತ್ತು ಭಾರತ ಮತ್ತು ಚೀನಾದಂತಹ ಆರ್ಥಿಕ ದೈತ್ಯರ ಉದಯವನ್ನು ಗುರುತಿಸಬೇಕು. ಜಾಗತಿಕ ರಾಜಕೀಯ ಮತ್ತು ವಾಣಿಜ್ಯ ಕ್ಷೇತ್ರವನ್ನು ಯಾವುದೇ ಒಂದು ನಿರ್ದಿಷ್ಟ ದೇಶ ನಿಯಂತ್ರಿಸಲು ಇದು ವಸಾಹತುಶಾಹಿ ಯುಗವಲ್ಲ ಎಂದು ಗುಡುಗಿದ್ದಾರೆ! ಅಂತಾರಾಷ್ಟ್ರೀಯ ಕಾನೂನಿನ ದೃಷ್ಟಿಕೋನದಿಂದ, ಪ್ರತಿಯೊಬ್ಬರೂ ಸಮಾನ ಹಕ್ಕುಗಳನ್ನು ಹೊಂದಿರಬೇಕು ಮತ್ತು ಒಂದೇ ರೀತಿಯ ಸ್ಥಾನದಲ್ಲಿರಬೇಕು. ಅಂತಾರರಾಷ್ಟ್ರೀಯ ಸಂಬಂಧಗಳಲ್ಲಿ ಸಮತೋಲನ ಅಗತ್ಯ ಎಂದು ರಷ್ಯಾ ಅಧ್ಯಕ್ಷ ಪುಟಿನ್ ಅಭಿಪ್ರಾಯ ಪಟ್ಟಿದ್ದಾರೆ.

ಭಾರತದ ಮೇಲೆ ಹೆಚ್ಚುವರಿ ಸುಂಕಗಳನ್ನು ವಿಧಿಸಿರುವ ಡೊನಾಲ್ಡ್ ಟ್ರಂಪ್ ಕ್ರಮವನ್ನು ಕಠಿಣವಾಗಿ

☞ 12

# ಭಾರತ 'ಕ್ವಾಡ್'ನಿಂದ ಹೊರಬಂದು ಚೀನಾ ಜೊತೆಗೆ ಉತ್ತಮಸಂಬಂಧ ಹೊಂದಬೇಕು! -ಅಮೆರಿಕಾ ಅರ್ಥಶಾಸ್ತ್ರಜ್ಞ ಜೆಫ್ರಿ ಸ್ಯಾಚ್ಸ್

ಜೆಫ್ರಿ ಸ್ಯಾಚ್ಸ್ ಅಮೆರಿಕಾದ ಅರ್ಥಶಾಸ್ತ್ರಜ್ಞ, ಶೈಕ್ಷಣಿಕ, ಸಾರ್ವಜನಿಕ ನೀತಿ ವಿಶ್ಲೇಷಕ ಮತ್ತು ಸಾಲ ಬಿಕ್ಕಟ್ಟು, ಅಧಿಕ ಹಣದುಬ್ಬರದಿಂದ ಸಾರ್ವಜನಿಕ ಆರೋಗ್ಯ, ಬಡತನ ಮತ್ತು ಹವಾಮಾನ ಬದಲಾವಣೆಯವರೆಗಿನ ಸಂಕೀರ್ಣ ಜಾಗತಿಕ ಸವಾಲುಗಳನ್ನು ನಿಭಾಯಿಸುವಲ್ಲಿ ಹೆಸರುವಾಸಿಯಾಗಿದ್ದಾರೆ.

ವಿಶ್ವಸಂಸ್ಥೆಯ ಮೂವರು ಪ್ರಧಾನ ಕಾರ್ಯದರ್ಶಿಗಳ ಮಾಜಿ ಸಲಹೆಗಾರರಾದ ಸ್ಯಾಚ್ಸ್, ಪ್ರಸ್ತುತ ಕೊಲಂಬಿಯಾ ವಿಶ್ವವಿದ್ಯಾಲಯದ ಸುಸ್ಥಿರ ಅಭಿವೃದ್ಧಿ ಕೇಂದ್ರದ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಮತ್ತು ನಿರ್ದೇಶಕರಾಗಿದ್ದಾರೆ. ಯುಎನ್ ಸುಸ್ಥಿರ ಅಭಿವೃದ್ಧಿ ಪರಿಹಾರ ಜಾಲದ ಅಧ್ಯಕ್ಷರೂ ಆಗಿದ್ದಾರೆ. ಪ್ರಭಾವಶಾಲಿ ಬುಕ್ ಕ್ಲಬ್‌ನ ನಿರೂಪಕರೂ ಆಗಿದ್ದಾರೆ. ಅಮೆರಿಕಾದ ವಿದೇಶಿ ಮತ್ತು ವ್ಯಾಪಾರ ನೀತಿಯ ಕುರಿತು ನಿರ್ಭೀತ ಟೀಕೆಗಳಿಗೂ ಹೆಸರುವಾಸಿಯಾಗಿದ್ದಾರೆ.

ಜೆಫ್ರಿ ಸ್ಯಾಚ್ಸ್ ಅವರೊಂದಿಗೆ ವಿಶ್ವದ ಖ್ಯಾತ ಸಂದರ್ಶಕ ಜಯಂತ್ ಜಾಕೋಬ್ ಸಂದರ್ಶನ ನಡೆಸಿದ್ದು, ಈ ಸಂದರ್ಶನದಲ್ಲಿ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಭಾರತ ವಿರೋಧಿ ಅಸಂವಿಧಾನಿಕ 'ಸುಂಕಾಸ್ತ್ರ' ಕುರಿತು ಮಾತನಾಡಿದ್ದಾರೆ. ಈ ವೇಳೆ ಭಾರತವು ಕ್ವಾಡ್‌ನಿಂದ ಹೊರಬಂದು ಚೀನಾದೊಂದಿಗಿನ ಸಂಬಂಧವನ್ನು ಗಟ್ಟಿಗೊಳಿಸುವಂತೆ ಅವರು ಒತ್ತಾಯಿಸಿದ್ದಾರೆ! ಡಾಲರ್ ಅಪನಗದೀಕರಣ ಈಗಾಗಲೇ ಶುರುವಾಗಿದೆ. ಒಂದು ದಶಕದೊಳಗೆ, ಜಾಗತಿಕ ವ್ಯಾಪಾರ ಮತ್ತು ಹಣಕಾಸಿನಲ್ಲಿ ಡಾಲರ್‌ನ ಪ್ರಾಬಲ್ಯ ತೀವ್ರವಾಗಿ ಕುಸಿಯುತ್ತದೆ ಎಂದು ಹೇಳಿದ್ದಾರೆ.

**ಡೊನಾಲ್ಡ್ ಟ್ರಂಪ್ ಅವರು ಭಾರತದ ವಿರುದ್ಧ 'ಸುಂಕಾಸ್ತ್ರ' ವನ್ನು ರಾಜಕೀಯ ಮತ್ತು ಆರ್ಥಿಕ ಅಸ್ತ್ರವಾಗಿ ಬಳಸುತ್ತಿದ್ದು, ಬಗ್ಗೆ ಏನು ಹೇಳುತ್ತೀರಿ? ಇದು ಮಿತ್ರ ರಾಷ್ಟ್ರಗಳ ನಡುವೆ ಸುಂಕ ಯುದ್ಧವನ್ನು ಹೆಚ್ಚಿಸಬಹುದೇ? ಜಗತ್ತಿಗೂ ಮತ್ತು ಭಾರತಕ್ಕೂ ಇದರ ಅರ್ಥವೇನು?**

ಟ್ರಂಪ್ ಅವರ ಸುಂಕಾಸ್ತ್ರ ಬಳಕೆ ಅಮೆರಿಕಾ ಸಂವಿಧಾನದ ವಿರುದ್ಧವಾಗಿದೆ (ಅಂಕ 1, ಸೆಕ್ಷನ್ 8 ರಡಿ ತೆರಿಗೆಳನ್ನು ನಿಗದಿಸುವ ಅಧಿಕಾರವು ಅಧ್ಯಕ್ಷನಿಗೆ ಅಲ್ಲ, ಕಾಂಗ್ರೆಸ್‌ಗೆ ಮಾತ್ರವಿದೆ). ಈ ತೆರಿಗಳು ಅಮೆರಿಕದ ನ್ಯಾಯಾಲಯಗಳಿಂದ ರದ್ದುಗೊಳಿಸಬಹುದಾಗಿವೆ. ಟ್ರಂಪ್ ಅವರ ತೆರಿಗೆ ನೀತಿ ಅಮೆರಿಕದ ಆರ್ಥಿಕತೆಯನ್ನು ತೀವ್ರವಾಗಿ ಹಾನಿಗೊಳಿಸುತ್ತದೆ ಏಕೆಂದರೆ ಇದು ಅಮೆರಿಕಾವನ್ನು ಸ್ಪರ್ಧಾತ್ಮಕತೆಯಿಂದ ದೂರ ಮಾಡುತ್ತದೆ ಮತ್ತು ಅಮೆರಿಕಾದ ರಫ್ತುಗಳಿಗೆ ತಡೆದಂತೆ ಕಾರ್ಯನಿರ್ವಹಿಸುತ್ತದೆ. ಇದುವರೆಗೆ, ಈ ನೀತಿ ಜಾಗತಿಕ ಬಹುಪಕ್ಷೀಯ ವ್ಯವಸ್ಥೆಯನ್ನು ಹಾನಿಗೊಳಿಸುತ್ತಿದ್ದು, ವಿಶ್ವ ವಾಣಿಜ್ಯ ಸಂಸ್ಥೆಯ ಮೂಲತತ್ವಗಳನ್ನು ದುರ್ಬಲಗೊಳಿಸುತ್ತಿದೆ. ಏಕೈಕ ಪರೋಕ್ಷ ಲಾಭವೆಂದರೆ, ಅಮೆರಿಕಾದಲ್ಲಿ ಕಾನೂನಿಲ್ಲದ, ನಂಬಬಹುದಾದದ್ದಲ್ಲದ, ಭ್ರಷ್ಟ ರಾಜಕೀಯ ವ್ಯವಸ್ಥೆ ಹೊಂದಿದೆ ಎಂಬುದನ್ನು ಟ್ರಂಪ್ ಅವರು ವಿಶ್ವಕ್ಕೆ ತೋರಿಸುತ್ತಿದ್ದಾರೆ.

**ಅಮೆರಿಕಾ ನಿರ್ಬಂಧಗಳನ್ನು ಹೆಚ್ಚಿಸುತ್ತಿದ್ದು, ಇದರಿಂದ ಭಾರತವು ಹೆಚ್ಚು ದುರ್ಬಲವಾಗುತ್ತಿದೆಯೇ? ವಿಶೇಷವಾಗಿ ರಷ್ಯಾ ಜೊತೆಗೆ ತೈಲ ಮತ್ತು ರಕ್ಷಣಾ ಸಂಬಂಧಗಳನ್ನು ಮುಂದುವರೆಸಿದರೆ ಅಥವಾ ಇರಾನ್ ಜೊತೆಗೆ ಸಂಬಂಧಗಳನ್ನು ಮುಂದುವರೆಸಿದರೆ ಹೆಚ್ಚು ದುರ್ಬಲವಾಗುತ್ತದೆಯೇ?**

ಇರಾನ್ ಹಾಗೂ ರಷ್ಯಾ ಎರಡೂ ದೇಶಗಳು ಭಾರತಕ್ಕೆ ಪ್ರಮುಖ ತಂತ್ರಜ್ಞಾನಿಕ ಸಹಭಾಗಿಗಳಾಗಿವೆ..ಭಾರತದ ಸುರಕ್ಷತೆ ಬ್ರಿಕ್ಸ್(BRICS) ಮತ್ತು ಯುಎನ್ ಚಾರ್ಟರ್ (UN Charter)ನಲ್ಲಿದೆ, ಅಮೆರಿಕಾದಲ್ಲಿ ಅಲ್ಲ, ಭಾರತವು ತನ್ನ ರಫ್ತು ಗಮ್ಯಸ್ಥಳಗಳನ್ನು ವಿಭಿನ್ನಗೊಳಿಸಬೇಕು,

ಬ್ರಿಕ್ಸ್ ಜೊತೆ ಡಾಲರ್ ಹೊರತುಪಡಿಸಿದ ಪಾವತಿ ವ್ಯವಸ್ಥೆಗಳಲ್ಲಿ ಕೆಲಸ ಮಾಡಬೇಕು, ಭದ್ರತೆ ದೃಷ್ಟಿಯಿಂದ ಭಾರತ QUADನಿಂದ ಹೊರಬರಬೇಕು. ಚೀನಾ ಜೊತೆಗೆ ಸಂಬಂಧವನ್ನು ಗಟ್ಟಿಗೊಳಿಸಬೇಕು.

**ಭಾರತ ಮತ್ತು ಚೀನಾ ನಡುವೆ ಗಡಿ ಭಿನ್ನತೆಗಳಿದ್ದರೂ ಕೂಡ ಬ್ರಿಕ್ಸ್ ಅಥವಾ ಎಸ್‌ಸಿಓ ಮುಂತಾದ ವೇದಿಕೆಗಳಲ್ಲಿ ದ್ವಿಪಕ್ಷೀಯವಾಗಿ ಆರ್ಥಿಕ ಅಥವಾ ಭೌಗೋಳಿಕ ರಾಜಕೀಯ ಹಾದಿಯನ್ನು ಕಂಡುಕೊಳ್ಳುವ ಮಾರ್ಗವಿದೆಯೆ?**

ಭಾರತ ಮತ್ತು ಚೀನಾ ವಿಶ್ವದಲ್ಲಿಯೇ ಅತೀ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರಗಳಾಗಿವೆ. ವಿಶ್ವದ ಸುಮಾರು ಶೇ.40ರಷ್ಟು ಜನಸಂಖ್ಯೆಯನ್ನು ಎರಡು ರಾಷ್ಟ್ರಗಳು ಹೊಂದಿವೆ. ಪಾಶ್ಚಿಮಾತ್ಯ ದ್ವಂದ್ವ ಮಾನದಂಡಗಳ ಪ್ರಕಾರ ಜಗತ್ತನ್ನು ನಡೆಸುವ ಪಾಶ್ಚಿಮಾತ್ಯ ಭ್ರಮೆಗಳನ್ನು ಕೊನೆಗೊಳಿಸುವಲ್ಲಿ ಎರಡೂ ರಾಷ್ಟ್ರಗಳು ಒಂದೇ ರೀತಿಯ ಆಸಕ್ತಿಯನ್ನು ಹೊಂದಿವೆ. ಹೀಗಾಗಿ ಭಾರತ ಮತ್ತು ಚೀನಾ ದೀರ್ಘಕಾಲದ ಗಡಿಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು. ಭಾರತ ವಿಶ್ವಸಂಸ್ಥೆ ಭದ್ರತಾ ಮಂಡಳಿಯ 6ನೇ ಶಾಶ್ವತ ಸದಸ್ಯ ರಾಷ್ಟ್ರವಾಗಲು ಚೀನಾ ಬಲವಾಗಿ ಬೆಂಬಲಿಸಬೇಕು. ಭಾರತ ವಿಶ್ವಸಂಸ್ಥೆಯ ಶಾಶ್ವತ ಸದಸ್ಯ ರಾಷ್ಟ್ರವಾದರೆ, ವಿಶ್ವಕ್ಕೆ ಅದರಲ್ಲೂ ಚೀನಾ ಅಪಾರ ಲಾಭವಾಗಲಿದೆ.

**ಟ್ರಂಪ್ ಆಗಾಗ್ಗೆ ಜಾಗತಿಕ ಬಹುಪಕ್ಷೀಯ ಗುಂಪುಗಳನ್ನು ಟೀಕಿಸುತ್ತಿರುತ್ತಾರೆ. ಇದರ ಬಗ್ಗೆ ಏನು ಹೇಳುತ್ತೀರಿ? ಇದು ಬ್ರಿಕ್ಸ್ ಬಗ್ಗೆ ಅವರಿಗಿರುವ ಭೀತಿಯೇ ಅಥವಾ ವಿರೋಧವು ಅಮೆರಿಕಾದ ಜಾಗತಿಕ ಪ್ರಭುತ್ವಕ್ಕೆ ನಿಜವಾದ ಬೆದರಿಕೆ ಎಂಬುದಾಗಿ ನ್ಯಾಯಸಮ್ಮತವೆ?**

ಹೌದು. ಬ್ರಿಕ್ಸ್ ಅಮೆರಿಕಾದ ಪ್ರಭುತ್ವಕ್ಕೆ ಎಚ್ಚರಿಕೆಯಾಗಿದೆ, ನಾವೀಗ ಪಶ್ಚಿಮದ ಪ್ರಭುತ್ವದ ಜಗತ್ತಿನಲ್ಲಿ ಬದುಕುತ್ತಿಲ್ಲ, ಅಮೆರಿಕಾದ ಆ ದಿನಗಳು ಮುಗಿದಿವೆ ಎಂದು ನಾವು ಅರ್ಥಮಾಡಿಕೊಳ್ಳಬೇಕು. ಬ್ರಿಕ್ಸ್ ಯುಎನ್ ಚಾರ್ಟರ್ ಅಡಿಯಲ್ಲಿ ಕಾನೂನು ಆಡಳಿತದ ಆಧಾರದ ಮೇಲೆ ಬಹುಪಕ್ಷೀಯ ಜಗತ್ತನ್ನು ನಿರ್ಮಿಸಲು ಪ್ರಮುಖವಾಗಿದೆ, ಬ್ರಿಟಿಷ್ ಅಥವಾ ಅಮೆರಿಕ ಸಾಮ್ರಾಜ್ಯಗಳ ಇಚ್ಛೆಗಳ ಮೇಲಲ್ಲ....

**ಮಧ್ಯಮಾವಧಿಯಲ್ಲಿ, ವಿಶೇಷವಾಗಿ ಬ್ರಿಕ್ಸ್ ರಾಷ್ಟ್ರಗಳು ಸಂಯುಕ್ತ ಕರೆನ್ಸಿ ರೂಪಿಸುವಲ್ಲಿ ಅಥವಾ ಸ್ಥಳೀಯ ಕರೆನ್ಸಿಗಳಲ್ಲಿ ವ್ಯಾಪಾರ ವಹಿವಾಟು ನಡೆಸುವಲ್ಲಿ ಹೆಚ್ಚುವರಿ ಪ್ರಯತ್ನಗಳನ್ನು ಕೈಗೊಂಡರೆ, ಡಾಲರ್ ಅಪನಗದೀಕರಣವಾಗಲಿದೆಯೇ?**

ಹೌದು, ಡಾಲರ್ ಅಪನಗದೀಕರಣವಾಗಲಿದೆ ಎಂದು ಹೇಳುವುದಲ್ಲ, ಈಗಾಗಲೇ ಅದು ಆರಂಭವಾಗಿದೆ. ಮುಂದಿನ

☞ 12

**11 ☞**

ಟೀಕಿಸಿರುವ ವ್ಲಾಡಿಮಿರ್ ಪುಟಿನ್, ಯಾವುದೇ ದೇಶ ಮತ್ತೊಂದು ದೇಶವನ್ನು ಶಿಕ್ಷಿಸುವ ಹಕ್ಕು ಹೊಂದಿಲ್ಲ. ಇಂತಹ ಅಸಂಬದ್ಧ ಸುಂಕಗಳು ರಾಜತಾಂತ್ರಿಕ ಸಂಬಂಧವನ್ನು ಕೆಡಿಸುವುದಲ್ಲದೇ, ವಾಣಿಜ್ಯ ಹಿತಾಸಕ್ತಿಗಳಿಗೂ ಧಕ್ಕೆ ತರುತ್ತದೆ. ಭಾರತ ಮತ್ತು ಚೀನಾದಂತಹ ದೊಡ್ಡ ದೇಶಗಳು, ವಿಶಿಷ್ಟ ರಾಜಕೀಯ ವ್ಯವಸ್ಥೆ ಮತ್ತು ದೇಶೀಯ ಕಾನೂನುಗಳನ್ನು ಹೊಂದಿವೆ ಎಂಬುದನ್ನು ಯಾರೂ ಮರೆಯಬಾರದು ಎಂದು ಎಚ್ಚರಿಸಿದ್ದಾರೆ.

**ಪಂಚಶೀಲ ಒಪ್ಪಂದಗಳ ಹಾದಿಯಲ್ಲಿ ಭಾರತ ಮತ್ತು ಚೀನಾ...**

ಭಾರತ ಮತ್ತು ಚೀನಾಗಳು ಪರಸ್ಪರ ಸಹಯೋಗಿಗಳೇ ಹೊರತು ಶತ್ರುಗಳಲ್ಲ ಎಂದು ಉಭಯ ನಾಯಕರೂ ಅಭಿಪ್ರಾಯ ಪಟ್ಟಿದ್ದು, ಪರಸ್ಪರರ ನಡುವೆ ಇರುವ ಭಿನ್ನಾಭಿಪ್ರಾಯಗಳು... ಚೀನಾದ ಟಿಯಾಂಜಿನ್‌ನಲ್ಲಿ ನಡೆಯುತ್ತಿರುವ ಶಾಂಘೈ ಸಹಕಾರ ಒಕ್ಕೂಟದ (ಎಸ್‌ಸಿಒ) ಸಭೆಗೂ ಮುನ್ನ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಆಗಸ್ಟ್ 31ರಂದು ಚೀನಾ ಅಧ್ಯಕ್ಷ ಕ್ಸಿಜಿನ್‌ಪಿಂಗ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.ಸಮಾಲೋಚನೆಯ ವೇಳೆ ಉಭಯ ನಾಯಕರು ಗಡಿ ವಿವಾದಗಳನ್ನು ಮೀರಿದ ದೃಷ್ಟಿಕೋನವನ್ನು ಹೊಂದುವ ಅವಶ್ಯಕತೆಗೆ ಒತ್ತು ನೀಡಿದ್ದು, ವಿವಿಧ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ನೀಡುತ್ತಾ ಕಾರ್ಯ ನಿರ್ವಹಿಸಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ.



ಅಕ್ಟೋಬರ್ 2024ರಲ್ಲಿ ಉಭಯ ನಾಯಕರು ಕಜಾನ್‌ನಲ್ಲಿ ಭೇಟಿಯಾಗಿದ್ದರು. ಆ ಭೇಟಿಯ ಬಳಿಕ ಪರಸ್ಪರ ದೇಶಗಳ ಸಂಬಂಧದಲ್ಲಿ ನಡೆದಿರುವ ಧನಾತ್ಮಕ ಪ್ರಗತಿಯನ್ನು ಇಬ್ಬರೂ ಸ್ವಾಗತಿಸಿದರು. ಭಾರತ ಮತ್ತು ಚೀನಾಗಳು ಪರಸ್ಪರ ಸಹಯೋಗಿಗಳೇ ಹೊರತು ಶತ್ರುಗಳಲ್ಲ ಎಂದು ಉಭಯ ನಾಯಕರೂ ಅಭಿಪ್ರಾಯ ಪಟ್ಟಿದ್ದು, ಪರಸ್ಪರರ ನಡುವೆ ಇರುವ ಭಿನ್ನಾಭಿಪ್ರಾಯಗಳು ಎಂದಿಗೂ ವಿವಾದದ ರೂಪ ತಳೆಯಬಾರದು ಎಂದು ಅಭಿಪ್ರಾಯ ಪಟ್ಟರು.

ಚೀನಾದ ಹೇಳಿಕೆಗಳು ಶಾಂತಿಯುತ ಸಹಬಾಳ್ವೆಗೆ ಐದು ತತ್ವಗಳನ್ನು (ಪಂಚಶೀಲ) ಉಲ್ಲೇಖಿಸಿದ್ದವು. 70 ವರ್ಷಗಳ ಹಿಂದೆ ಭಾರತ ಮತ್ತು ಚೀನಾದ ನಾಯಕರು ರೂಪಿಸಿದ್ದ ಪಂಚಶೀಲ ತತ್ವಗಳನ್ನು ಇಂದಿಗೂ ಗೌರವಿಸಿ, ಅವುಗಳನ್ನು ಸಮರ್ಥವಾಗಿ ಜಾರಿಗೊಳಿಸಬೇಕೆಂದು ಚೀನಾ ಹೇಳಿಕೆ ನೀಡಿದೆ.

**ಪಂಚಶೀಲದ ಪ್ರಮುಖ ನೀತಿಗಳೇನು?**

1947ರಲ್ಲಿ ಭಾರತ ಸ್ವತಂತ್ರಗೊಂಡು, ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾ ರೂಪುಗೊಂಡ ಬಳಿಕ, ಉಭಯ ದೇಶಗಳು ಪರಸ್ಪರ ವ್ಯವಹಾರಕ್ಕೆ ಕೆಲವು ನಿಯಮಗಳನ್ನು ರೂಪಿಸುವ ಕುರಿತು ಕಾರ್ಯಾಚರಣೆ ನಡೆಸಲಾರಂಭಿಸಿದವು.

ಎರಡೂ ದೇಶಗಳ ನಡುವೆ ಆಗ ಇದ್ದ ಪ್ರಮುಖ ವಿಚಾರವೆಂದರೆ, ಟಿಬೆಟ್‌ನ ಭವಿಷ್ಯವಾಗಿತ್ತು. ಎಪ್ರಿಲ್ 29, 1954ರಂದು, ಭಾರತ ಮತ್ತು ಚೀನಾಗಳು ಟಿಬೆಟ್ ಜೊತೆಗಿನ ವ್ಯಾಪಾರ ಮತ್ತು ಸಂಬಂಧದ ಕುರಿತು ಒಂದು ಒಪ್ಪಂದಕ್ಕೆ ಸಹಿ ಹಾಕಿದವು. ಇದು ಪಂಚಶೀಲ ಅಂದರೆ, ಶಾಂತಿಯುತ ಸಹಬಾಳ್ವೆಗಾಗಿ ಐದು ನೀತಿಗಳಿಗೆ ಹಾದಿ ಮಾಡಿಕೊಟ್ಟಿತು. ಉಭಯ ದೇಶಗಳು ಪರಸ್ಪರರ ಭೂ ಪ್ರದೇಶ ಮತ್ತು ಸ್ವಾತಂತ್ರ್ಯಕ್ಕೆ ಗೌರವ ನೀಡಬೇಕು. ಪರಸ್ಪರ ಭೂ ಪ್ರದೇಶಗಳ ಮೇಲೆ ನಿಯಂತ್ರಣ ಸಾಧಿಸಲು, ಅಥವಾ ಗಡಿಗಳನ್ನು ಬದಲಾಯಿಸಲು ಪ್ರಯತ್ನ ನಡೆಸಬಾರದು.

ಎರಡು ದೇಶಗಳ ಪೈಕಿ, ಯಾವುದೂ ಇನ್ನೊಂದರ ಮೇಲೆ ದಾಳಿ ಮಾಡುವುದಾಗಲಿ, ಬೆದರಿಸುವುದಾಗಲಿ ಮಾಡಬಾರದು. ಶಾಂತಿಯನ್ನು ಕಾಪಾಡಿ, ಸಾರ್ವಜನಿಕರು ಮತ್ತು ಸ್ಥಿರತೆಗೆ ತೊಂದರೆ ಉಂಟುಮಾಡುವಂತಹ



ಯುದ್ಧಗಳನ್ನು ತಪ್ಪಿಸಬೇಕು.

ಭಾರತ ಮತ್ತು ಚೀನಾಗಳು ತಮ್ಮ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳಬೇಕು. ಒಂದು ದೇಶದ ರಾಜಕೀಯ, ಸಂಸ್ಕೃತಿ ಅಥವಾ ಆಂತರಿಕ ನಿರ್ಧಾರಗಳಲ್ಲಿ ಇನ್ನೊಂದು ದೇಶ ಮಧ್ಯ ಪ್ರವೇಶ ಮಾಡಬಾರದು. ಭಾರತ ಮತ್ತು ಚೀನಾಗಳು ಸಮಾನ ಸಹಯೋಗಿಗಳು. ಎರಡೂ ದೇಶಗಳು ವ್ಯಾಪಾರ ಮತ್ತು ಅಭಿವೃದ್ಧಿ ಕ್ಷೇತ್ರಗಳಲ್ಲಿ ಜೊತೆಯಾಗಿ ಕಾರ್ಯ ನಿರ್ವಹಿಸಿ, ಪರಸ್ಪರ ಪ್ರಯೋಜನಗಳನ್ನು ಹಂಚಿಕೊಂಡು, ಅಭಿವೃದ್ಧಿಗೆ ನೆರವಾಗಬೇಕು.

**ಶಾಂತಿಯುತ ಸಹಬಾಳ್ವೆ**

ಪರಸ್ಪರ ಭಿನ್ನಾಭಿಪ್ರಾಯಗಳ ಹೊರತಾಗಿಯೂ, ಭಾರತ ಮತ್ತು ಚೀನಾಗಳು ಶಾಂತಿಯುತವಾಗಿ ಬಾಳಬೇಕು. ಪರಸ್ಪರರ ಕುರಿತು ಗೌರವದ ಭಾವನೆ ಹೊಂದಿ, ತಮಗೆ ಎದುರಾಗುವ ಯಾವುದೇ ಸಮಸ್ಯೆಯನ್ನು ಮಾತುಕತೆಗಳ ಮೂಲಕವೇ ಪರಿಹರಿಸಬೇಕೇ ಹೊರತು, ಕದನದ ಹಾದಿ ಹಿಡಿಯಬಾರದು.

ಬಹಳಷ್ಟು ಜನರು ಪಂಚಶೀಲದ ಪರಿಕಲ್ಪನೆ ನೀಡಿದ್ದು ಭಾರತದ ಪ್ರಧಾನಿ ಜವಾಹರಲಾಲ್ ನೆಹರೂ ಎಂದು ಅಭಿಪ್ರಾಯ ಪಟ್ಟರೆ, ಒಂದಷ್ಟು ಜನ ನೆಹರೂ ಸಹ ಇಂತಹ ಆಲೋಚನೆ ಹೊಂದಿದ್ದರೂ, ಪಂಚಶೀಲ ಮೂಲತಃ ಚೀನಾದ ಪ್ರೀಯಿಯರ್ ಆಗಿದ್ದ ಜೌ ಎನ್ ಲಾಯ್ ಅವರ ಪರಿಕಲ್ಪನೆ ಎಂದು ವಾದಿಸುತ್ತಾರೆ.

ಸೆಪ್ಟೆಂಬರ್ 1955ರಲ್ಲಿ, ಲೋಕಸಭೆಯಲ್ಲಿ ಮಾತನಾಡಿದ ಪ್ರಧಾನಿ ಜವಾಹರಲಾಲ್ ನೆಹರೂ ಭಾರತದ ನೀತಿ ಸ್ವತಂತ್ರವಾಗಿದ್ದು, ಯಾವುದೇ ಹೆಮ್ಮೆಯ ಆಧಾರದಲ್ಲಿ ರೂಪಿತವಾದುದಲ್ಲ ಎಂದು ವಿವರಿಸಿದ್ದರು. ಭಾರತ ಸದಾ ಎಲ್ಲ ದೇಶಗಳೊಡನೆ ಸ್ನೇಹ ಮತ್ತುಸದ್ಭಾವನೆಗಳನ್ನು



ಬಯಸುವ ದೇಶವಾಗಿದ್ದರೂ, ತನ್ನದೇ ಆದ ಸ್ವತಂತ್ರ ಪಥವನ್ನು ಸದಾ ಆರಿಸುತ್ತದೆ. ಇತರ ಆಯ್ಕೆಗಳಿಗೆ ಮುಕ್ತವಾಗಿದ್ದರೂ, ತನ್ನ ಆಯ್ಕೆಯನ್ನು ಆರಿಸುವ ಸ್ವಾತಂತ್ರ್ಯ ಪಂಚಶೀಲದ ನೈಜ ಆಶಯವಾಗಿದೆ.

ಅಂದಹಾಗೆ; ಮೋದೀಜಿ ಯಾವಾಗ ಚೀನಾ, ರಷ್ಯಾ ಪ್ರಧಾನಿಗಳ ಜೊತೆ ನಿಂತು ಕೈ ಕುಲುಕಿದರೋ, ಅದನ್ನು ನೋಡಿ ಟ್ರಂಪ್ ನಡುಗಿ ಹೋಗಿದ್ದಾರೆ! ಮೋದಿ ನನ್ನ ಶಾಶ್ವತ ಮಿತ್ರರು ಎಂದೆಲ್ಲಾ ಹೊಗಳುತ್ತಿದ್ದಾರೆ!! ಮೋದಿ ತುಟಿಯಂಚಲ್ಲೇ ನಗುತ್ತಾ ಸೈಲೆಂಟಾಗಿದ್ದಾರೆ!!! ☯

**11 ☞**

10 ವರ್ಷಗಳಲ್ಲಿ, ಅಂತರರಾಷ್ಟ್ರೀಯ ವ್ಯಾಪಾರ, ಪಾವತಿಗಳು, ವಹಿವಾಟು ಮತ್ತು ಹಣಕಾಸಿನಲ್ಲಿ ಡಾಲರ್ ಬಹಳ ಕಡಿಮೆ ಪಾತ್ರ ವಹಿಸಲಿದೆ. ಬ್ರಿಕ್ಸ್ ಈ ಪ್ರಕ್ರಿಯೆಯನ್ನು ವೇಗಗೊಳಿಸಬೇಕು. ಏಕೆಂದರೆ ಅಮೆರಿಕಾ ತನ್ನ ಡಾಲರ್ ಅನ್ನು ವಿದೇಶಾಂಗ ನೀತಿಯ ಆಯುಧವಾಗಿ ದುರುಪಯೋಗ ಮಾಡಿಕೊಂಡಿದೆ. ಇದು ಅಮೆರಿಕ ವಿದೇಶಾಂಗ ನೀತಿಯ ಗಂಭೀರ ತಪ್ಪಾಗಿದ್ದು, ಆ ತಪ್ಪು ಮುಂದುವರೆಯುತ್ತಲೇ ಇದೆ.



**21ನೇ ಶತಮಾನದಲ್ಲಿ ಅಮೆರಿಕ-ಭಾರತ ಸಂಬಂಧ ಅತ್ಯಂತ ನಿರ್ಣಾಯಕ ಎಂದು ಬಹಳಷ್ಟು ಹೇಳಲಾಗುತ್ತದೆ. ಟ್ರಂಪ್ ಆಡಳಿತದಲ್ಲಿ ಇದು ನಿಜವೆಂದು ನೀವು ನಂಬುತ್ತೀರಾ?**

ಇಲ್ಲ, ಚೀನಾ-ಭಾರತ-ಆಫ್ರಿಕನ್ ಒಕ್ಕೂಟದ ಸಂಬಂಧವು ಅತ್ಯಂತ ಪ್ರಮುಖ ಸಂಬಂಧವಾಗಿರುತ್ತದೆ. ನ್ಯಾಯಯುತ, ಸುಸ್ಥಿರ, ಎಲ್ಲರನ್ನೂ ಒಳಗೊಂಡ ಮತ್ತು ಸುರಕ್ಷಿತ ಜಗತ್ತನ್ನು ನಿರ್ಮಿಸಲು ಈ ಮೂರು ಪ್ರಬಲ ರಾಷ್ಟ್ರಗಳು ನಿಕಟವಾಗಿ ಸಹಕರಿಸಬೇಕಾಗಿದೆ. ವಿಶ್ವ ಜನಸಂಖ್ಯೆಯಲ್ಲಿ ಅಮೆರಿಕಾ ಪಾಲ ಕೇವಲ 4.1 ಪ್ರತಿಶತದಷ್ಟು ಮಾತ್ರ ಇದೆ. ಆರ್ಥಿಕತೆ ಕೊಡುಗೆ ಶೇ.14 ರಷ್ಟಿದೆ. ಭಾರತಕ್ಕೆ ಇತರೆ ರಾಷ್ಟ್ರಗಳಿರುವಂತೆ ಅಮೆರಿಕಾ ಕೂಡ ಪ್ರತಿಸ್ಪರ್ಧಿ ರಾಷ್ಟ್ರವಷ್ಟೇ. ಪ್ರಮುಖ ರಾಷ್ಟ್ರವಲ್ಲ.

**'ಚೀನಾ+1' ಅಥವಾ ಫ್ರೆಂಡ್-ಶೋರಿಂಗ್ ತಂತ್ರಜ್ಞಾನವು ಭಾರತವನ್ನು ಕೇಂದ್ರಗೊಂಡು ಸುಸ್ಥಿರ ಸರಬರಾಜು ನಿರ್ಮಿಸುವಲ್ಲಿ ಎಷ್ಟು ವಾಸ್ತವಿಕವಾಗಿದೆ, ವಿಶೇಷವಾಗಿ ಭಾರತದ ಮೂಲಸೌಕರ್ಯ ಮತ್ತು ನಿಯಂತ್ರಣದ ಅಡೆತಡೆಗಳನ್ನು ಗಮನದಲ್ಲಿಟ್ಟುಕೊಂಡಾಗ?**

ಅಮೇರಿಕಾ ಸರ್ಕಾರ ಭಾರತವನ್ನು ಚೀನಾದ ಬದಲಾಗಿ ಅಮೆರಿಕದ ಮೌಲ್ಯ ಸರಣಿಗಳಲ್ಲಿ ಇರಿಸಲು ಎಂದಿಗೂ ಅನುಮತಿಸುವುದಿಲ್ಲ. ಅಮೇರಿಕಾ ಬಹಿರಂಗವಾಗಿ ರಕ್ಷಣಾತ್ಮಕ ಧೋರಣೆ ತೆಗೆದುಕೊಂಡಿದೆ, ಭಾರತದ ರಫ್ತು ಅಮೇರಿಕಾಕ್ಕೆ ಹೆಚ್ಚಾದರೆ,ಚೀನಾದ ರಫ್ತುಗಳನ್ನು ನಿಲ್ಲಿಸಿದಂತೆ ಭಾರತದ ರಫ್ತನ್ನೂ ನಿಲ್ಲಿಸುತ್ತದೆ. ಇದಕ್ಕೆ ಅಮೆರಿಕಾ ಶೇ.50 ತೆರಿಗೆ ಹೇರಿರುವುದು ಪಾಠವೇ ಆಗಿದೆ.

**ಟ್ರಂಪ್ ಎರಡನೇ ಮಹಾಯುದ್ಧದ ನಂತರ ಟ್ರಂಪ್ ಅವರು, ಅಂತರರಾಷ್ಟ್ರೀಯ ಸುವ್ಯವಸ್ಥೆಯನ್ನು ಯಾವ ರೀತಿಯಲ್ಲಿ ದುರ್ಬಲಗೊಳಿಸುವುದನ್ನು ಮುಂದುವರಿಸಬಹುದು ಎಂದು ನೀವು ಭಾವಿಸುತ್ತೀರಿ? ಆ ಸುವ್ಯವಸ್ಥೆ ಈಗಾಗಲೇ ಕುಸಿಯುತ್ತಿದೆ ಎಂದು ನೀವು ಭಾವಿಸುತ್ತೀರಾ?**

ಯಾವುದೇ ಅಂತರರಾಷ್ಟ್ರೀಯ ಸುವ್ಯವಸ್ಥೆ ಇಲ್ಲ, ಅದು ಕೇವಲ ಅಮೆರಿಕಾದ ಕ್ಷುಲ್ಲಕ ಘೋಷಣೆಯಷ್ಟೇ. ಅಲ್ಲಿ ಅಮೆರಿಕಾ ಪ್ರಾಬಲ್ಯವು 800 ವಿದೇಶಿ ಮಿಲಿಟರಿ ನೆಲೆಗಳು, ಸಿಐಎ ನೇತೃತ್ವದ ಆಡಳಿತ-ಬದಲಾವಣೆ ಕಾರ್ಯಾಚರಣೆಗಳು, ಏಕಪಕ್ಷೀಯ ನಿರ್ಬಂಧಗಳು, ಡಾಲರ್‌ನ ಶಸ್ತ್ರೀಕರಣ, ಗಾಜಾದಲ್ಲಿ ನರಮೇಧದಲ್ಲಿ ಯುಎಸ್ ಭಾಗವಹಿಸುವಿಕೆ ಮತ್ತು ಅಧಿಕಾರ ದುರುಪಯೋಗಗಳನ್ನು ಆಧರಿಸಿದೆ. ಯುಎಸ್ ಶಕ್ತಿ ಕ್ಷೀಣಿಸುತ್ತಿದೆ. ನಾವು ಈಗಾಗಲೇ ಬಹುಧ್ರುವೀಯ ಜಗತ್ತನ್ನು ತಲುಪಿದ್ದೇವೆ, ಭಾರತ, ಚೀನಾ, ರಷ್ಯಾ ಮತ್ತು ಅಮೆರಿಕ ಎಲ್ಲವೂ ಮಹಾನ್ ಶಕ್ತಿ ರಾಷ್ಟ್ರಗಳಾಗಿವೆ. ಇದರ ಜೊತೆಗೆ ನಮಗೆ ಬೇಕಾಗಿರುವುದು ಹುಪಕ್ಷೀಯ ಜಗತ್ತು, ಇದು ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಖಾಯಂ ಸದಸ್ಯನಾಗಿ ಭಾರತದ ಪಾತ್ರ ಸೇರಿದಂತೆ ವಿಶ್ವಸಂಸ್ಥೆಯ ಪ್ರಮುಖ ಸುಧಾರಣೆಗಳೊಂದಿಗೆ ಕಾರ್ಯ ನಿರ್ವಹಿಸುತ್ತದೆ.

**ಟ್ರಂಪ್ ಆಡಳಿತದಲ್ಲಿ, ವಿಶೇಷವಾಗಿ ಚೀನಾದೊಂದಿಗೆ ಹೊಸ ವ್ಯಾಪಾರ ಯುದ್ಧಗಳ ಪ್ರಾರಂಭವು ಆಂತರಿಕ ವೆಚ್ಚಗಳನ್ನು ಪ್ರತಿಕೂಲ ಪರಿಣಾಮ ಬೀರುತ್ತದೆಯೆ?**

ಹೌದು, ಆದರೆ, ಈಗಲೇ ಅಲ್ಲ, ವ್ಯಾಪಾರ ಯುದ್ಧಗಳ ವೆಚ್ಚವು ಬಹುಶಃ 5-10 ವರ್ಷಗಳ ಅವಧಿಯಲ್ಲಿ ಅಮೆರಿಕದ ಆರ್ಥಿಕತೆಯನ್ನು ದುರ್ಬಲಗೊಳಿಸುತ್ತದೆ. ಜಾಗತಿಕ ಇಂಧನ ಪರಿವರ್ತನೆಯಲ್ಲಿ ಅಮೆರಿಕ ತನ್ನ ಪಾತ್ರವನ್ನು ತ್ಯಜಿಸುತ್ತಿದೆ, ನವೀಕರಿಸಬಹುದಾದ ಇಂಧನ ಮತ್ತು ವಿದ್ಯುತ್ ವಾಹನಗಳನ್ನು ಇದಕ್ಕೆ ಉದಾಹರಣೆಯಾಗಿ ನೋಡಬಹುದು.

**ಭಾರತವು ತನ್ನ ತಂತ್ರಾತ್ಮಕ ಸ್ವಾಯತ್ತತೆಯನ್ನು ಉಳಿಸಿಕೊಂಡು ಅಮೆರಿಕದೊಂದಿಗೆ ಆಳವಾದ ಸಂಬಂಧಗಳನ್ನು ಬೆಳೆಸಲು ಯತ್ನಿಸುತ್ತಿರುವ ಸಮಯದಲ್ಲಿ, ಟ್ರಂಪ್ ಅವರ ಅಮೆರಿಕಾ ಫಸ್ಟ್ ನಿಲುವು ನವದೆಹಲಿಗೆ ಈ ಸಮತೋಲನವನ್ನು ಸಾಧಿಸುವಲ್ಲಿ ಯಾವ ರೀತಿಯ ಸವಾಲು ಅಥವಾ ಅವಕಾಶವನ್ನು ನೀಡುತ್ತದೆ? ಪ್ರಧಾನಿ ಮೋದಿ ಮತ್ತು ಟ್ರಂಪ್ ನಡುವಿನ ಬಹುಚರ್ಚಿತ ವೈಯಕ್ತಿಕ ಸ್ನೇಹ ಅಥವಾ ಪರ್ಸನಲ್ ಕೆಮಿಸ್ಟ್ರಿ ಭಾರತಕ್ಕೆ ಬಹಳ ಪ್ರಯೋಜನವಾಗುತ್ತದೆಯೆಂದು ನೀವು ಭಾವಿಸುತ್ತೀರಾ?**

ಪರ್ಸನಲ್ ಕೆಮಿಸ್ಟ್ರಿಯಿಂದ ಯಾವುದೇ ಉಪಯೋಗವಿಲ್ಲ, ಅಮೆರಿಕದೊಂದಿಗೆ ಇರುವುದರಿಂದ ಭಾರತಕ್ಕೆ ಯಾವುದೇ ರೀತಿಯ ಲಾಭವಾಗುವುದಿಲ್ಲ, ಕ್ವಾಡ್‌ನಂತಹ ಮೈತ್ರಿ ರಾಜಕೀಯಗಳು ಭಾರತದ ಹಿತಾಸಕ್ತಿಗಳಿಗೆ ಹಾನಿಕಾರಕವಾಗಬಹುದು. ಚೀನಾವನ್ನು ನಿಗ್ರಹಿಸಲು ಅಮೆರಿಕಾದ ವ್ಯರ್ಥ ಮತ್ತು ಹಾನಿಕಾರಕ ಪ್ರಯತ್ನದಲ್ಲಿ ಅಮೆರಿಕಾ ಪರ ಇರದೆ, ರಷ್ಯಾ, ಅಮೆರಿಕ, ಚೀನಾ, ಆಫ್ರಿಕನ್ ಒಕ್ಕೂಟ ಮತ್ತು ಯುರೋಪಿಯನ್ ಒಕ್ಕೂಟ ಸೇರಿದಂತೆ ಎಲ್ಲಾ ಪ್ರಮುಖ ಶಕ್ತಿಗಳೊಂದಿಗೆ ಸಮಾನ ಹಾಗೂ ಸಮಪಾಲು ಸಂಬಂಧಗಳನ್ನು ಬೆಳೆಸುವುದನ್ನು ಭಾರತ ತನ್ನ ಗುರಿಯಾಗಿಸಿಕೊಳ್ಳಬೇಕು. ಅಮೆರಿಕಾ ತನ್ನ ಊಹಾತೀತ ಪ್ರಭುತ್ವವನ್ನು ಉಳಿಸಿಕೊಳ್ಳಲು ತಪ್ಪು ಪ್ರಯತ್ನ ಮಾಡುತ್ತಿದೆ. ಅದು ಭಾರತಕ್ಕೆ ಯಾವುದೇ ರೀತಿಯ ಲಾಭವಲ್ಲ, ಭಾರತವು ಅಮೆರಿಕಾದ ಗರ್ವ ಮತ್ತು ಭ್ರಮೆಯ ಆಟಕ್ಕೆ ಬಲಿಯಾಗಬಾರದು. ☯

## ಪಿಎಸ್ಐ ಅನಿಲಕುಮಾರ ಕುಂಬಾರ ಮತ್ತು ತಂಡದವರ ಯಶಸ್ವಿ ಕಾರ್ಯಾಚರಣೆ...

# 10 ಲಕ್ಷ ರೂ.ಗಳ ಕಿಮ್ಮತ್ತಿನ ವಿವಿಧ ಕಂಪನಿಯ 22 ಮೋಟಾರ್ ಬೈಕ್‌ಗಳನ್ನು ಕಳ್ಳತನ ಮಾಡಿ ತನ್ನ ಗ್ಯಾರೇಜ್‌ನಲ್ಲಿ ಮುಚ್ಚಿಟ್ಟಿದ ಕುಖ್ಯಾತ ಕಳ್ಳನ ಬಂಧನ



ಕುಖ್ಯಾತ ಮೋಟಾರ್ ಬೈಕ್ ಕಳ್ಳ ಸಿದ್ದಪ್ಪ ಯಲ್ಲಪ್ಪ ಉಪ್ಪಲದಿನ್ನಿ

**ಮೈ ಮುರಿದು, ನಡು ಬಗ್ಗಿಸಿ ದುಡಿದು ತಿನ್ನಲಾರದ ಮಹಾ ಹರಾಮಿ ಐನಾತಿಯೊಬ್ಬನು ಜನನಿಬಿಡ ಪ್ರದೇಶಗಳಲ್ಲಿ ಹ್ಯಾಂಡಲ್ ಲಾಕ್ ಮಾಡದೇ ನಿಲ್ಲಿಸಿದ್ದ ಮೋಟಾರ್ ಬೈಕ್‌ಗಳನ್ನೇ ಟಾರ್ಗೆಟ್ ಮಾಡಿ ಅತ್ಯಂತ ಉಪಾಯದಿಂದ ಸದ್ದಿಲ್ಲದೇ ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದನು. ಮೇಲಿಂದ ಮೇಲೆ ನಡೆಯುತ್ತಿದ್ದ ಮೋಟಾರ್ ಬೈಕ್ ಕಳ್ಳತನ ಪ್ರಕರಣಗಳನ್ನು ಚಾಲೆಂಜ್ ಆಗಿ ಸ್ವೀಕರಿಸಿದ ಚತುರ ಮತ್ತು ಧಾಡಸಿ ಪಿಎಸ್ಐ ಅನಿಲಕುಮಾರ ಕುಂಬಾರ ಮತ್ತು ಸಿಬ್ಬಂದಿಗಳು ಎಸ್ಪಿ ಸಿದ್ಧಾರ್ಥ ಗೋಯಲ್, ಹೆಚ್ಚುವರಿ ಎಸ್ಪಿ (ಅಪರಾಧ) ಮಹಾಂತೇಶ್ವರ ಜಿದ್ದಿ, ಡಿವೈಎಸ್ಪಿ ಎಸ್. ರೋಷನ್ ಜಮೀರ್ ನಿರ್ದೇಶನದಲ್ಲಿ ಸಿಪಿಐ ಎಂ.ಡಿ. ಮಡ್ಡಿ ಇವರ ನೇತೃತ್ವದಲ್ಲಿ ಕಾರ್ಯಾಚರಣೆಗೆ ಇಳಿದು ಖಚಿತ ಮಾಹಿತಿ ಆಧರಿಸಿ ಕುಖ್ಯಾತ ಕಳ್ಳನನ್ನು ಬಂಧಿಸಿ ಆತನ ಗ್ಯಾರೇಜಿನಲ್ಲಿದ್ದ 10 ಲಕ್ಷ ರೂ.ಗಳ ಮೌಲ್ಯದ 22 ವಿವಿಧ ಕಂಪನಿಯ ಮೋಟಾರ್ ಬೈಕ್‌ಗಳನ್ನು ಜಪ್ತಿ ಮಾಡಿಕೊಂಡ ಪ್ರಕರಣ ಬಾಗಲಕೋಟೆ ಜಿಲ್ಲೆಯ ಜಮಖಂಡಿ ನಗರ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**

ಬಾಗಲಕೋಟೆ ಜಿಲ್ಲೆಯ ಜಮಖಂಡಿ ಉಪವಿಭಾಗವಾಗಿದ್ದು, ಸುತ್ತಲಿನ ಪಟ್ಟಣ ಮತ್ತು ತಾಲ್ಲೂಕಿನ ಜೀವನಾಡಿಯಾಗಿರುವ ನಗರವೆನಿಸಿದೆ. ದಿನವಿಡಿ ಇಲ್ಲಿ ಜನಜಂಗುಳಿ ಸದಾ ಇರುತ್ತದೆ. ಅಂದಹಾಗೆ ಕಳೆದ ದಿನಾಂಕ 09-06-


ಎಸ್ಪಿ ಸಿದ್ಧಾರ್ಥ ಗೋಯಲ್


ಹೆಚ್ಚುವರಿ ಎಸ್ಪಿ ಮಹಾಂತೇಶ್ವರ ಜಿದ್ದಿ


ಡಿವೈಎಸ್ಪಿ ಎಸ್. ರೋಷನ್ ಜಮೀರ್

2025ರಂದು ಜಮಖಂಡಿಯ ಕೋಷ್ಟಿಗಲ್ಲಿಯ ನಿವಾಸಿಯಾಗಿರುವ ಅಪ್ಪಾಸಾಹೇಬ ಶಿವಮೂರ್ತಿ ಬಿರಾದಾರ ಎಂಬುವವರು ಕುಂಚನೂರ ಸರ್ಕಲ್ ಹತ್ತಿರ ಇರುವ ರೇಣುಕಾ ಬಾರ್ ಮುಂದೆ ತಮ್ಮ ಕಪ್ಪು ಬಣ್ಣದ ಹೀರೋ ಸ್ಪ್ಲೆಂಡರ್ ಪ್ಲಸ್ ಮೋಟಾರ್ ಬೈಕ್ ಕೆಎ-48 ಎಕ್ಸ್-2823ನೇದ್ದನ್ನು ನಿಲ್ಲಿಸಿದ್ದರು. ಅವರು ತಮ್ಮ ಕೆಲಸ ಮುಗಿಸಿ ಹೊರ ಬರುವುದರೊಳಗಾಗಿ ಅವರ ಮೋಟಾರ್ ಬೈಕ್‌ನ್ನು ಅದ್ಯಾರೋ ಕಳ್ಳರು ಸದ್ದಿಲ್ಲದಂತೆ

ಮನ್ನಾಪೂರ


ಮಹಾಹರಾಮಿ ಕಳ್ಳನಿಂದ ವಶಪಡಿಸಿಕೊಂಡ 22 ಮೋಟಾರ್ ಬೈಕ್‌ಗಳೊಂದಿಗೆ ಜಮಖಂಡಿ ನಗರ ಪೊಲೀಸರು

ಎಗರಿಸಿ ಬಿಟ್ಟಿದ್ದರು. ಗಾಬರಿಯಿಂದ ತನ್ನ ಮೋಟಾರ್ ಬೈಕ್ ಹುಡುಕಾಡಿದಾಗ ಅದು ಎಲ್ಲಿಯೂ ಕಾಣಲಿಲ್ಲ.

### ಪೊಲೀಸ್ ಠಾಣೆಗೆ ದೂರು...

ಮೋಟಾರ್ ಬೈಕ್ ಕಳೆದುಕೊಂಡು ಕಂಗಾಲಾಗಿದ್ದ ಅಪ್ಪಾಸಾಹೇಬ ಶಿವಮೂರ್ತಿ ಬಿರಾದಾರ ಇವರು ನೇರವಾಗಿ ಜಮಖಂಡಿ ನಗರ ಪೊಲೀಸ್ ಠಾಣೆಗೆ ಧಾವಿಸಿ ಬಂದನು. ಅಂದು ಕರ್ತವ್ಯದ ಮೇಲಿದ್ದ ಪಿಎಸ್ಐ (ಕಾ.ಸು) ಅನಿಲಕುಮಾರ ಕುಂಬಾರ ಅವರನ್ನು ಕಂಡು ಮೋಟಾರ್ ಬೈಕ್ ಕಳ್ಳತನವಾಗಿರುವ ಕುರಿತು ತಿಳಿಸಿದನು. ತಕ್ಷಣ ತಡಮಾಡದೇ ಕ್ರೈಂ ಪಿಎಸ್ಐ ನಾಗರಾಜ ಕಾಜಗಾರ ಅವರೊಂದಿಗೆ ಪಿಎಸ್ಐ (ಕಾ.ಸು) ಅನಿಲಕುಮಾರ ಕುಂಬಾರ ಅವರು ಸಮಾಲೋಚನೆ ನಡೆಸಿದರು. ಸಿಪಿಐ ಎಂ.ಡಿ. ಮಡ್ಡಿ, ಡಿವೈಎಸ್ಪಿ ಎಸ್. ರೋಷನ್ ಜಮೀರ್ ಅವರಿಗೆ ವಿಷಯ ತಿಳಿಸಿದರು. ಅವರ ನಿರ್ದೇಶನದಂತೆ ಪ್ರಕರಣವನ್ನು ಕ್ರೈಂ ನಂ. 58/2025, ಕಲಂ 303 (2) ಬಿಎನ್‌ಎಸ್ ಕಾಯ್ದೆಯಂತೆ ದಾಖಲಿಸಿಕೊಳ್ಳಲಾಯಿತು.

### ಕಳ್ಳತನಗಳ ಪತ್ತೆಗೆ ಸೂಚನೆ...

ಬಾಗಲಕೋಟೆ ಜಿಲ್ಲೆಯ ಎಸ್ಪಿ ಸಿದ್ಧಾರ್ಥ ಗೋಯಲ್, ಹೆಚ್ಚುವರಿ ಎಸ್ಪಿ (ಅಪರಾಧ) ಮಹಾಂತೇಶ್ವರ ಜಿದ್ದಿ ಅವರುಗಳು ಇತ್ತೀಚಿಗಷ್ಟೇ ಬಾಗಲಕೋಟೆ ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಯ ಪಿಎಸ್‌ಐಗಳು, ಸಿಪಿಐಗಳು, ಡಿವೈಎಸ್ಪಿಗಳ ಸಭೆ ಕರೆದಿದ್ದರು. ಸಭೆಯಲ್ಲಿ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಕಾಪಾಡಬೇಕು. ಕೊಲೆ, ಸುಲಿಗೆ, ದರೋಡೆ, ಕಳ್ಳತನ, ವಂಚನೆಗಳಂತಹ ಪ್ರಕರಣಗಳನ್ನು ಶೀಘ್ರಗತಿಯಲ್ಲಿ ಪತ್ತೆ ಮಾಡಬೇಕು. ಎಲ್ಲಾ ಪೊಲೀಸ್ ಠಾಣೆಗಳು ಜನಪರ ಮತ್ತು ಜನಸ್ನೇಹಿಯಾಗಬೇಕು ಎಂದು ಮಾರ್ಗದರ್ಶನ ಮಾಡಿದ್ದರು.

### ಅಲರ್ಟ್ ಆದ ಜಮಖಂಡಿ ಪೊಲೀಸರು...

ಜಮಖಂಡಿ ಉಪವಿಭಾಗದ ಡಿವೈಎಸ್ಪಿ ಎಸ್. ರೋಷನ್ ಜಮೀರ್ ಅವರು ಜಮಖಂಡಿ ನಗರ ಮತ್ತು ಗ್ರಾಮೀಣ ವ್ಯಾಪ್ತಿಯಲ್ಲಿ ಕಳೆದ ಸುಮಾರು ದಿನಗಳಿಂದ ನಡೆದಿದ್ದ ಮೋಟಾರ್ ಬೈಕ್ ಕಳ್ಳತನಗಳನ್ನು ಗಂಭೀರವಾಗಿ ಪರಿಗಣಿಸಿದ್ದರು. ಈ ಕುರಿತು ಜಮಖಂಡಿಯ ಸಿಪಿಐ ಎಂ.ಡಿ. ಮಡ್ಡಿ ಅವರೊಂದಿಗೆ ಸಮಾಲೋಚಿಸಿ ಶತಾಯ-ಗತಾಯ ಮೋಟಾರ್ ಬೈಕ್ ಕಳ್ಳರ ಪತ್ತೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಿ ಎಂದು ನಿರ್ದೇಶನ ನೀಡಿದರು. ಅದರಂತೆ ಸಿಪಿಐ ಎಂ.ಡಿ. ಮಡ್ಡಿ ಅವರು ಜಮಖಂಡಿ ನಗರ ಪೊಲೀಸ್ ಠಾಣೆಯ ಚತುರ ಮತ್ತು ಧಾಡಸಿ ಪಿಎಸ್ಐ ಅನಿಲಕುಮಾರ ಕುಂಬಾರ ಅವರನ್ನು ಕರೆಯಿಸಿ ಒಟ್ಟು ಮೋಟಾರ್ ಬೈಕ್ ಕಳ್ಳತನದ ಪ್ರಕರಣಗಳ ಮಾಹಿತಿ ಪಡೆದುಕೊಂಡರು.


### ವಿಶೇಷ ತನಿಖಾ ತಂಡ ರಚನೆ...

ಎಸ್ಪಿ ಸಿದ್ಧಾರ್ಥ ಗೋಯಲ್, ಹೆಚ್ಚುವರಿ ಎಸ್ಪಿ (ಅಪರಾಧ) ಮಹಾಂತೇಶ್ವರ ಜಿದ್ದಿ, ಡಿವೈಎಸ್ಪಿ ಎಸ್. ರೋಷನ್ ಜಮೀರ್ ಅವರ ನಿರ್ದೇಶನ ಪಡೆದುಕೊಂಡು ಸಿಪಿಐ ಮಡ್ಡಿ ತಮ್ಮ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವೊಂದನ್ನು ರಚಿಸಲು ನಿರ್ಧರಿಸಿದರು. ತಂಡದಲ್ಲಿ ಪಿಎಸ್ಐ (ಕಾ.ಸು) ಅನಿಲಕುಮಾರ ಕುಂಬಾರ, ಪಿಎಸ್ಐ (ಕ್ರೈಂ) ನಾಗರಾಜ ಕಾಜಗಾರ, ಸಿಬ್ಬಂದಿಗಳಾದ ಸಂಗಪ್ಪ ಕೋಟಿ, ಪರಶುರಾಮ ಘಾಟಗೆ, ಪ್ರಕಾಶ ಹೊಸಮನಿ ಮುತ್ತಪ್ಪ ಮಾಂಗ, ಮಲ್ಲಿಕಾರ್ಜುನ ತಂಬಾಕದ, ಸಿದ್ದು ಕಲಾಟೆ, ನಾಗರಾಜ ಬಿಸಲದಿನ್ನಿ, ಶಂಕರ ಆಸಂಗಿ, ಆಯ್. ಎಂ. ಪೆಂಡಾರಿ, ರಾಜಶೇಖರ ಮನಗೂಳಿ ಒಳಗೊಂಡಿದ್ದರು. ತಂಡದ ನೇತೃತ್ವ ವಹಿಸಿಕೊಂಡು ಸಿಪಿಐ ಎಂ.ಡಿ. ಮಡ್ಡಿ ಸೂಕ್ತ ನಿರ್ದೇಶನಗಳನ್ನು ನೀಡುತ್ತಲಿದ್ದರು.

### ಸಿಕ್ಕುಬಿದ್ದ ಕುಖ್ಯಾತ ಕಳ್ಳ...

ಇಲ್ಲಿ ವಿಶೇಷ ತನಿಖಾ ತಂಡದ ನಾಯಕತ್ವ ವಹಿಸಿಕೊಂಡ ಪಿಎಸ್ಐ (ಕಾ.ಸು) ಅನಿಲಕುಮಾರ ಕುಂಬಾರ ಅಪರಾಧ ಪರಿಶೋಧನೆಯಲ್ಲಿ ತುಂಬಾ ಚತು


ಸಿಪಿಐ ಎಂ.ಡಿ. ಮಡ್ಡಿ


ಪಿಎಸ್ಐ (ಕಾ.ಸು) ಅನಿಲಕುಮಾರ ಕುಂಬಾರ


ಪಿಎಸ್ಐ (ಕ್ರೈಂ) ನಾಗರಾಜ ಕಾಜಗಾರ

ರರು. ಈ ಹಿಂದೆ ಬೆಳಗಾವಿ ಜಿಲ್ಲೆ ನಿಪ್ಪಾಣಿ ಗ್ರಾಮೀಣ ಠಾಣೆಯಲ್ಲಿದ್ದಾಗ ಕುಖ್ಯಾತ ಮೋಟಾರ್ ಬೈಕ್ ಕಳ್ಳರನ್ನು ಪತ್ತೆಹಚ್ಚಿ ಬಂಧಿಸಿ 52 ಮೋಟಾರ್ ಬೈಕ್ ವಶಪಡಿಸಿಕೊಂಡಿದ್ದರು. ಇದಲ್ಲದೇ ಸುಮಾರು ಮನೆಗಳ್ಳತನದ ಆರೋಪಿಗಳನ್ನು ಪತ್ತೆಹಚ್ಚಿ ಅವರಿಂದ ಲಕ್ಷಾಂತರ ರೂ.ಗಳ ಬಂಗಾರ, ನಗನಾಣ್ಯಗಳನ್ನು ವಶಪಡಿಸಿಕೊಂಡು ಅತ್ಯುತ್ತಮವಾಗಿ ಕರ್ತವ್ಯ ನಿಭಾಯಿಸಿದ ಕೀರ್ತಿ ಅನಿಲಕುಮಾರ ಕುಂಬಾರ ಅವರದು. ಇಂತಹ ಚಾಣಾಕ್ಷ ಅಧಿಕಾರಿ ತಮ್ಮ ಅಧೀನದಲ್ಲಿರುವ ವಿಶೇಷ ತನಿಖಾ ತಂಡವನ್ನು ವ್ಯವಸ್ಥಿತ ಕಾರ್ಯಾಚರಣೆಗೆ ಇಳಿಸಿದರು.

ದಿನಾಂಕ 09-06-2025ರಂದು ದೂರು ನೀಡಿದ್ದ ಅಪ್ಪಾ ಸಾಹೇಬ ಶಿವಮೂರ್ತಿ ಬಿರಾದಾರನ ಹೇಳಿಕೆ ಆಧರಿಸಿ ವಿಶೇಷ ತನಿಖಾ ತಂಡ ಕಾರ್ಯಾಚರಣೆಗೆ ಇಳಿಯಿತು. ಪಿಎಸ್ಐ (ಕಾ.ಸು.) ಅನಿಲಕುಮಾರ ಕುಂಬಾರರು ವಿಸ್ತ್ರತವಾದ ವಿಶ್ವಸನೀಯ ಮಾಹಿತಿದಾರರ ಜಾಲವನ್ನೇ ಹೊಂದಿದ್ದಾರೆ. ಅಂದುಕೊಂಡಂತೆ 05-09-2025ರಂದು ಕುಖ್ಯಾತ ಮೋಟಾರ್ ಬೈಕ್ ಕಳ್ಳನ ಕುಂಡಲಿಯನ್ನು ಅಂಗೈಲಿ ಇರಿಸಿಕೊಂಡಿದ್ದರು. ಸದರಿ ಮಾಹಿತಿಯನ್ನು ಪಿಎಸ್ಐ (ಕಾ.ಸು) ಕುಂಬಾರ ಅವರಿಗೆ ತಿಳಿಸಿ ಜಮಖಂಡಿ ತಾಲ್ಲೂಕಿನ ಇನಾಂ ಹಂಚನಾಳ (ಆರ್.ಸಿ) ಗ್ರಾಮದ ಮೆಕ್ಯಾನಿಕಲ್ ಸಿದ್ದಪ್ಪ ಯಲ್ಲಪ್ಪ ಉಪ್ಪಲದಿನ್ನಿ ಎಂಬಾತನನ್ನು ವಶಕ್ಕೆ ತೆಗೆದುಕೊಂಡು ತನಿಖಾ ತಂಡ ಸಿಪಿಐ ಎಂ.ಡಿ. ಮಡ್ಡಿ, ಪಿಎಸ್ಐ (ಕಾ.ಸು) ಅನಿಲಕುಮಾರ ಮುಂದೆ ಹಾಜರುಪಡಿಸಿದರು. ವಿಚಾರಣೆ ಕಾಲಕ್ಕೆ ಕಾಗಕ್ಕ... ಗುಬ್ಬಕ್ಕ ಕಥೆ ಹೇಳಲು ನೋಡಿದ ಸುಳ್ಳುಬುರಕ ಸಿದ್ಯಾ ಪೊಲೀಸರ ಖೆಡ್ಡಾದಲ್ಲಿ ನಿಜವನ್ನು ಕಕ್ಕಿಬಿಟ್ಟನು.

### 22 ಮೋಟಾರ್ ಸೈಕಲ್ ಜಪ್ತಿ...

ಮೆಕ್ಯಾನಿಕಲ್ ಆಗಿದ್ದ ಐನಾತಿ ಸಿದ್ದಪ್ಪ ತನಗಿರುವ ಕೌಶಲ್ಯದಿಂದ ಹ್ಯಾಂಡಲ್ ಲಾಕ್ ಮಾಡಿರದ ಮೋಟಾರ್ ಬೈಕ್ ಗುರಿಯಾಗಿರಿಸಿ ಡೈರೆಕ್ಟ್ ಆಗಿ ಚಾಲು ಮಾಡಿಕೊಂಡು ಬಂದು ತನ್ನ ಗ್ಯಾರೇಜಿನಲ್ಲಿರಿಸಿದ್ದನು. ಆತನ ಗ್ಯಾರೇಜಿನಲ್ಲಿ ಜಮಖಂಡಿ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸಿಕ್ಕ ವಿವಿಧ ಕಂಪನಿಯ 22 ಮೋಟಾರ್ ಬೈಕ್‌ಗಳು ದೊರೆತಿದ್ದು, ಇವುಗಳ ಮೌಲ್ಯ 10 ಲಕ್ಷ ರೂ.ಗಳಾಗುತ್ತದೆ. ಪಿಯುಸಿ ಕಲಿತ ಕಳ್ಳ ಸಿದ್ಯಾ ಇದೀಗ ಜೈಲಿನ ಹವಾ ತಿನ್ನುತ್ತಿದ್ದಾನೆ.

### ಪೊಲೀಸರ ಕಾರ್ಯಕ್ಕೆ ಶ್ಲಾಘನೆ...

ಸಿಪಿಐ ಎಂ.ಡಿ. ಮಡ್ಡಿ ನೇತೃತ್ವದಲ್ಲಿ ಪಿಎಸ್‌ಐಗಳಾದ ಅನಿಲಕುಮಾರ ಕುಂಬಾರ, ನಾಗರಾಜ ಕಾಜಗಾರ ಮತ್ತು ತಂಡದವರು ನಡೆಸಿದ ಯಶಸ್ವಿ ಕಾರ್ಯಾಚರಣೆಯನ್ನು ಎಸ್ಪಿ ಸಿದ್ಧಾರ್ಥ ಗೋಯಲ್, ಹೆಚ್ಚುವರಿ ಎಸ್ಪಿ (ಅಪರಾಧ) ಮಹಾಂತೇಶ್ವರ ಜಿದ್ದಿ, ಡಿವೈಎಸ್ಪಿ ಎಸ್. ರೋಷನ್ ಜಮೀರ್ ಶ್ಲಾಘಿಸಿದ್ದಾರೆ. ಜೊತೆಗೆ ಎಸ್ಪಿ ಗೋಯಲ್ ಅವರು ಇಡೀ ತನಿಖಾ ತಂಡಕ್ಕೆ ನಗದು ಬಹುಮಾನ ಘೋಷಿಸಿದ್ದಾರೆ.


ಸಿಬ್ಬಂದಿಗಳಾದ ಮುತ್ತು ಮಾಂಗ, ಪಿ.ಹೆಚ್. ಘಾಟಗೆ, ಪ್ರಕಾಶ ಹೊಸಮನಿ, ಎಸ್.ಹೆಚ್. ಕೋಟಿ,

# ಲವರ್ ಅಂತ ನಂಬ್ಕೊಂಡು ಹೋದ್ರೆ ಮರ್ಡರ್ ಮಾಡಿದ್ನಲ್ಲಾ!



ವರ್ಷಿತಾ

**ಚಿತ್ರದುರ್ಗದ ಪ್ರಥಮ ಪದವಿ ಚೆಲುವೆ ವರ್ಷಿತಾಳನ್ನು ಕೆಳಗೋಟೆ ಹೈದ ಚೇತನ್ ವರ್ಷದಿಂದ ಪ್ರೀತಿಸುತ್ತಿದ್ದ. ಅವನಿಗೆ ಕ್ಯಾನ್ಸರ್ ಖಾಯಿಲೆ ತಗುಲಿದ್ದು ಇದೀಗ ಅಂತಿಮ ಹಂತದಲ್ಲಿ ಸಾವು ಬದುಕಿನೊಡನೆ ಸೆಣಸುತ್ತಿದ್ದಾನೆ. ಇಂಥಾ ಹುಡುಗ ಚೇತನ್‌ಗೆ ಅವನ ಪ್ರೇಯಸಿ ವರ್ಷಿತಾ ಕೈಕೊಟ್ಟು ಬೇರೊಬ್ಬನ ಜೊತೆ ಸುತ್ತಾಡುತ್ತಿದ್ದಳಂತೆ! ಇದರಿಂದ ಸಿಟ್ಟಿಗೆದ್ದ ಚೇತನ್, ಅವಳನ್ನು ಉಪಾಯವಾಗಿ ಗೋನೂರು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ರೇಪ್ ಮಾಡಿ, ಕುತ್ತಿಗೆ ಹಿಸುಕಿ ಉಸಿರುಗಟ್ಟಿಸಿ ಕೊಲೆ ಮಾಡಿ, ನಂತರ ಶವದ ಗುರ್ತು ಸಿಗದಿರಲೆಂದು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಸುಟ್ಟಿದ್ದಾನೆ! ಜೋರು ಮಳೆ ಬಂದ ಕಾರಣ, ಶವವು ಸಂಪೂರ್ಣವಾಗಿ ಸುಟ್ಟಿರದೆ ಮೃತಳ ಗುರ್ತು ಪತ್ತೆಯಾಗಿ, ಐನಾತಿ ಆಸಾಮಿ ಚೇತನ್ ಕೂಡ ಸಿಕ್ಕಿಬಿದ್ದಿದ್ದಾನೆ!!**



ಚೇತನ್

ಅವತ್ತು 19-08-2025. ಮೀನಾಕ್ಷಿ ಮತ್ತು ಕುನಾಲ್ ಪಂಡಿತ್ ದಂಪತಿಗಳು ತಮ್ಮ ಕಾರ್‌ನಲ್ಲಿ ಮೈಸೂರಿನಿಂದ ಹಂಪಿಗೆ ಪ್ರವಾಸ ಹೋಗುತ್ತಿದ್ದು, ಚಿತ್ರದುರ್ಗದ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಗೋನೂರು ಬಳಿ 'ಪ್ರಕೃತಿ ಕರೆ'ಗಾಗಿ ಕಾರ್ ನಿಲ್ಲಿಸಿ ಜಮೀನು ಒಂದಕ್ಕೆ ಹೋದಾಗ, ಅಲ್ಲೊಂದು ಶವ ನೋಡಿ ಚೀರಿಕೊಂಡಿದ್ದರು! ಅದು ಅರೆಬರೆ ಸುಟ್ಟ ಯುವತಿಯ ಶವವಾಗಿದ್ದು ಆ ವಿಕಾರತೆ ನೋಡಿ ಕಿರುಚಿಕೊಂಡು ಓಡಿ ಬಂದ ದಂಪತಿಗಳು, ಹತ್ತಿರದಲ್ಲೇ ಇದ್ದಂತಾ 'ಪಾಕಶಾಲಾ' ಹೋಟೆಲ್‌ನತ್ತ ಧಾವಿಸಿ ಹೋಟೆಲ್‌ನ ವ್ಯವಸ್ಥಾಪಕ ಅಶೋಕ್‌ಕುಮಾರ್‌ಗೆ ವಿಷಯ ತಿಳಿಸಿ ನೀರು ಕುಡಿದಿದ್ದರು! ಅಶೋಕ್ ಕೂಡಲೇ ಈ ಮಾಹಿತಿಯನ್ನು ಚಿತ್ರದುರ್ಗ ಗ್ರಾಮಾಂತರ ಪೊಲೀಸರಿಗೆ ಮುಟ್ಟಿಸಿದ್ದಾರೆ.

ಸಿಪಿಐ ಮುದ್ದುರಾಜ್ ತಮ್ಮ ಸಿಬ್ಬಂದಿ ಸಮೇತ ಘಟನಾ ಸ್ಥಳಕ್ಕೆ ಆಗಮಿಸಿ ನೋಡಿದಾಗ, ಆ ಹೊಲದಲ್ಲಿ ಯುವತಿಯ ಸುಟ್ಟ ಶವ ಅಂಗಾತ ಬಿದ್ದಿದ್ದು ನಿಜವಾಗಿದ್ದು, ಈ ಮಾಹಿತಿಯನ್ನು ತಮ್ಮ ಮೇಲಿನ ಅಧಿಕಾರಿಗಳಿಗೆ ತಿಳಿಸಿದ್ದಾರೆ. ನಂತರ ಎಸ್ಪಿ ರಂಜಿತ್‌ಕುಮಾರ್ ಭಂಡಾರು, ಡಿವೈಎಸ್ಪಿ ದಿನೇಶ್ ಅಲ್ಲಿಗೆ ಆಗಮಿಸಿ ಮಹಜರು ಕಾರ್ಯ ನಡೆಸಿ, ಮೃತಳ ತೋಳಿನ ಮೇಲಿದ್ದ ಹಚ್ಚೆಯ ಗುರ್ತು ನೋಡಿ, ಅಕ್ಕಪಕ್ಕದ ಪೊಲೀಸ್ ಠಾಣೆ

ಹಿರಿಯೂರು ರಫೀಕ್

ಗಳಿಗೆ ಮಾಹಿತಿ ನೀಡಿ ಶವದ ಪತ್ತೆ ಕಾರ್ಯದಲ್ಲಿ ತೊಡಗುವಂತೆ ಆದೇಶ ನೀಡಿ, ಶವವನ್ನು ಪಂಚನಾಮೆಗೆ ಸಾಗಿಸಿರುತ್ತಾರೆ.



ಎಸ್ಪಿ ರಂಜಿತ್‌ಕುಮಾರ್ ಭಂಡಾರು

**ಐಮಂಗಲದಲ್ಲಿ ಮಿಸ್ಸಿಂಗ್!**

ಅಷ್ಟರಲ್ಲಿ ಐಮಂಗಲ ಪೊಲೀಸ್ ಠಾಣೆಯಲ್ಲಿ ವರ್ಷಿತಾ ಎಂಬ 19ರ ಹರೆಯದ ಯುವತಿ ಕಾಣೆಯಾಗಿರುವುದಾಗಿ ದೂರು ದಾಖಲಾಗಿದ್ದ ಮಾಹಿತಿ ತಿಳಿಯುತ್ತದೆ. ಆಕೆ ಹಿರಿಯೂರು ತಾಲ್ಲೂಕಿನ ಕೋವೇರಹಟ್ಟಿ ಗ್ರಾಮದ ಜ್ಯೋತಿ ಮತ್ತು ತಿಪ್ಪೇಸ್ವಾಮಿ ದಂಪತಿಗಳ ಮಗಳು. ದುರ್ಗದ ಕಾಲೇಜಿನಲ್ಲಿ ಪ್ರಥಮ ಪದವಿ ವ್ಯಾಸಂಗ ಮಾಡುತ್ತಾ ವಿದ್ಯಾರ್ಥಿ ನಿಲಯದಲ್ಲಿ ನೆಲೆಸಿದ್ದಳು. ಆಗಸ್ಟ್ 14ರ ಸಾಯಂಕಾಲ ಹಾಸ್ಟೆಲ್‌ನಿಂದ ಹೊರಗಡೆ ಹೋಗಿದ್ದವಳು ಮತ್ತೆ ಹಿಂತಿರುಗಿರಲಿಲ್ಲ! ಈ ಸುದ್ದಿ ಅರಿತು ಭಯಭೀತರಾಗಿದ್ದ ವರ್ಷಿತಾಳ ತಂದೆತಾಯಿ ಐಮಂಗಲ ಠಾಣೆಯಲ್ಲಿ ಮಗಳು ಕಾಣೆಯಾಗಿರೋ ಬಗ್ಗೆ ಒಂದು ದೂರು ದಾಖಲಿಸಿ ಮಗಳ ಹುಡುಕಾಟದಲ್ಲಿ ಮುಳುಗಿದ್ದರು. ಹೀಗಿರುವಾಗಲೇ 18-08-2025ರಂದು ಗೋನೂರು ಬಳಿ ಅಪರಿಚಿತ ಯುವತಿಯ ಸುಟ್ಟ ಶವ ಬಿದ್ದಿರುವ ವಾರ್ತೆ ಕಿವಿಗಪ್ಪಳಿಸಿ, ಅವರು ಅಲ್ಲಿಗೆ ತೆರಳಿ ನೋಡಿದಾಗ... ಅದು ವರ್ಷಿತಾಳ ಶವವೇ ಆಗಿತ್ತು!



ವರ್ಷಿತಾಳ ಸುಟ್ಟುಕರಕಲಾಗಿರುವ ಮೃತದೇಹ

ಸುಟ್ಟುಕರಕಲಾಗಿದ್ದ ಮಗಳನ್ನು ನೋಡಿ ಆ ತಂದೆತಾಯಿ ಮುಗಿಲು ಮುಟ್ಟುವಂತೆ ರೋಧಿಸಿದ್ದರು. ಸಿಪಿಐ ಮುದ್ದುರಾಜ್ ಮತ್ತು ಸಿಬ್ಬಂದಿ ವರ್ಗ ಅವರಿಗೆ ಸಮಾಧಾನ ಮಾಡಿ, ಹಂತಕನ ಪತ್ತೆಗೆ ಇಳಿದರು. ವರ್ಷಿತಾಳ ಬ್ಯಾಕ್‌ಗ್ರೌಂಡ್ ಪರಿಶೀಲಿಸಿದಾಗ, ಆಕೆ ಕೆಳಗೋಡೆಯ ಚೇತನ್ ಎಂಬಾತನನ್ನು 'ಲವ್' ಮಾಡ್ತಿದ್ದ ಮಾಹಿತಿ ದೊರಕಿತ್ತು! ಮಾತ್ರವಲ್ಲ; ಅಂದು ವರ್ಷಿತಾಳನ್ನು ಹಾಸ್ಟೆಲ್‌ನಿಂದ ಕರೆದುಕೊಂಡು ಬಂದದ್ದು, ತುರುವನೂರು ರಸ್ತೆಯ ಪೆಟ್ರೋಲ್ ಬಂಕ್‌ನಲ್ಲಿ ಎರಡೆರಡು ಬಾರಿ ಪೆಟ್ರೋಲ್ ತಂದದ್ದೆಲ್ಲಾ ಅಲ್ಲಿನ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದ ಫುಟೇಜ್ ಕೂಡ ಸಿಕ್ಕಿತ್ತು!!

**ನಾನೇ ಮಾಡಿದ್ದು ಅಂದ...!**

ಸಿಪಿಐ ಮುದ್ದುರಾಜ್ ಕೂಡಲೇ ಅವನನ್ನು ಹುಡುಕಿ ಲಾಕ್ ಮಾಡಿಕೊಂಡಾಗ ಆಸಾಮಿ ಚೇತನ್, ಈ ಕೊಲೆಯನ್ನು ತಾನೇ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ! ಆರೋಪಿ ಚೇತನ್‌ಗೆ ಮಾರಣಾಂತಿಕ ಕ್ಯಾನ್ಸರ್ ಖಾಯಿಲೆ ಇದ್ದು, ಅದೀಗ ಮೂರನೇ (ಅಂತಿಮ) ಹಂತ ತಲುಪಿದೆಯಂತೆ! ಅವನಿಗೆ ಕ್ಯಾನ್ಸರ್ ಒದೆ ಎಂಬುದು ಗೊತ್ತಾದ ಬಳಿಕ ಲವರ್ ವರ್ಷಿತಾ ಅವನಿಗೆ ಕೈಕೊಟ್ಟು ಬೇರೊಬ್ಬನೊಡನೆ 'ಲವಿಡವಿ' ನಡೆಸುತ್ತಿದ್ದಳು ಎಂಬ ಸುದ್ದಿ ಹರಿದಾಡುತ್ತಿದ್ದೆ! ಚೇತನ್ ಇದೇ ಕೋಪದಿಂದ ಅವಳನ್ನು ಉಪಾಯವಾಗಿ ಹಾಸ್ಟೆಲ್‌ನಿಂದ ಹೊರಗಡೆ ಕರೆದುಕೊಂಡು ಬಂದು 'ಪಾಕಶಾಲಾ' ಹೋಟೆಲ್ ಸಮೀಪ, ಗೋನೂರು ರಸ್ತೆಯ ಹೊಲವೊಂದರಲ್ಲಿ ತಿಂದು ತೇಗಿ, ಉಸಿರುಗಟ್ಟಿಸಿ ಕೊಲೆಗೈದು, ಶವದ ಗುರ್ತು ಸಿಗದಿರಲೆಂದು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾನೆ!

ಜೋರು ಮಳೆಯ ಕಾರಣ ಶವವು ಅರ್ಧಂಬರ್ಧ ಸುಟ್ಟು ವಿಕಾರವಾಗಿ ಬಿದ್ದಿದ್ದು, ಪ್ರವಾಸಿಗರ ಕಣ್ಣಿಗೆ ಬಿದ್ದಿದೆ! ಮುಂದೆ ನಡೆದದ್ದೆಲ್ಲಾ ಈಗಾಗಲೇ ಬರೆದಿದ್ದೇನೆ. ಈ ಪ್ರಕರಣವು ಚಿತ್ರದುರ್ಗ ಗ್ರಾಮಾಂತರ ಠಾಣೆಯಲ್ಲಿ ದಾಖಲಾಗಿದ್ದು (ಕ್ರೈಂ ನಂ. 341, ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 2023 ಯು/ಎಸ್ 103(1) 238) ಸಿಪಿಐ ಮುದ್ದುರಾಜ್ ಅವರು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಜಿಲ್ಲಾ ಎಸ್ಪಿ ರಂಜಿತ್ ಕುಮಾರ್ ಭಂಡಾರು, ಡಿವೈಎಸ್ಪಿ ದಿನೇಶ್ ಮಾರ್ಗದರ್ಶನದಲ್ಲಿ ಆರೋಪಿಯ ವಿಚಾರಣೆ ನಡೆಯುತ್ತಿದೆ. ಈ ಪ್ರಕರಣದಲ್ಲಿ ಚೇತನ್ ಒಬ್ಬನೇ ಇದ್ದಾನಾ? ಅಥವಾ ಅವನ ಜೊತೆ ಇನ್ನಾರಾದರೂ ಇದ್ದಾರಾ? ಎಂಬುದರ ಬಗ್ಗೆ ವಿಚಾರಣೆ ಮುಗಿದ ನಂತರವಷ್ಟೇ ತಿಳಿಯಲಿದೆ...



# ದುರ್ಗದ ಶಾಸಕ ಪಪ್ಪಿ ಬೆಟ್ಟಿಂಗ್ ದಂಧೆ ಅಪ್ಪಿ...

9

ಚಿತ್ರದುರ್ಗದ ಶಾಸಕ ವೀರೇಂದ್ರ ಪಪ್ಪಿ ಅವರ ಮೇಲೆ ನಡೆಯುತ್ತಿರುವ ತನಿಖೆಯ ಮುಂದುವರೆದ ಭಾಗವಾಗಿ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕುಸುಮ ಹನುಮಂತರಾಯಪ್ಪ ಅವರ ಬೆಂಗಳೂರಿನ ನಿವಾಸದ ಮೇಲೆ ದಾಳಿ ನಡೆಸಿದ್ದಾರೆ. ಮುದ್ದಿನಪಾಳ್ಯ ರಸ್ತೆಯಲ್ಲಿರುವ ಅವರ ನಿವಾಸಕ್ಕೆ ಕಳೆದ ಶನಿವಾರ ಬೆಳ್ಳಂ ಬೆಳಗ್ಗೆ 4.30ರ ಸುಮಾರಿಗೆ ಇ.ಡಿ. ಅಧಿಕಾರಿಗಳು ಎರಡು ಇನ್ನೋವಾ ಕಾರುಗಳಲ್ಲಿ ಆಗಮಿಸಿದ್ದು, ಕೇಂದ್ರ ಭದ್ರತಾ ಪಡೆಯ ಸಹಯೋಗದೊಂದಿಗೆ ಪರಿಶೀಲನೆ ನಡೆಸಿದ್ದಾರೆ.

ಇ.ಡಿ. ಅಧಿಕಾರಿಗಳು ಶಾಸಕ ವೀರೇಂದ್ರ ಪಪ್ಪಿ ಅವರ ಮನೆ, ಕಚೇರಿಗಳು ಮತ್ತು ಕಂಪನಿಗಳ ಮೇಲೆ ಈಗಾಗಲೇ ದಾಳಿ ನಡೆಸಿದ್ದಾರೆ. ಬೆಂಗಳೂರು, ಚಳ್ಳಕೆರೆ, ಗೋವಾ ಮತ್ತು ಚಿತ್ರದುರ್ಗ ಸೇರಿದಂತೆ ಒಟ್ಟು 17 ಕಡೆಗಳಲ್ಲಿ ಈ ದಾಳಿ ನಡೆದಿದೆ. ಶಾಸಕ ವೀರೇಂದ್ರ ಪಪ್ಪಿ ಅವರು ತಮ್ಮ ವಿವಿಧ ಕಂಪನಿಗಳಾದ 'ರತ್ನ ಗೇಮಿಂಗ್ ಸಲ್ಯೂಷನ್ಸ್, ರತ್ನ ಗೋಲ್ಡ್ ಕಂಪನಿ, ರತ್ನ ಮಲ್ಟಿ ಸೋರ್ಸ್ ಕಂಪನಿ, ಪಪ್ಪಿ ಟೆಕ್ನಾಲಜೀಸ್ ಕಂಪನಿ, ಪಪ್ಪಿ ಟೂರ್ಸ್ ಟ್ರಾವೆಲ್ಸ್ ಮತ್ತು ಪಪ್ಪಿ ಬೇರ್ ಬಾಕ್ಸ್' ಮುಂತಾದ ಸಂಸ್ಥೆಗಳ ಮೂಲಕ ಅಕ್ರಮ ಹಣ ವರ್ಗಾವಣೆ (ಮನಿ ಲಾಂಡರಿಂಗ್) ನಡೆಸಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಚಿತ್ರದುರ್ಗ ಮತ್ತು ಚಳ್ಳಕೆರೆಯಲ್ಲಿ ಗೇಮಿಂಗ್ ಆ್ಯಪ್‌ಗಳಿಗೆ ಸಂಬಂಧಿಸಿದಂತೆ ದಾಖಲಾದ ದೂರುಗಳ ಆಧಾರದ ಮೇಲೆ ಇ.ಡಿ ಈ ತನಿಖೆಯನ್ನು ಕೈಗೊಂಡಿದೆ.



**ಕುಸುಮ ಕುಟುಂಬದೊಂದಿಗೆ ವೀರೇಂದ್ರ ಪಪ್ಪಿ ಸಂಬಂಧ**


ಶಾಸಕ ವೀರೇಂದ್ರ ಪಪ್ಪಿ ಅವರಿಗೆ ಹನುಮಂತರಾಯಪ್ಪ ಅವರ ಪುತ್ರ ಹಾಗೂ ಕುಸುಮ ಅವರ ಸಹೋದರ ಅನಿಲ್ ಅವರು ವ್ಯವಹಾರಿಕ ಪಾಲುದಾರರು ಎಂಬ ಮಾಹಿತಿ ಇ.ಡಿ. ಅಧಿಕಾರಿಗಳಿಗೆ ದೊರೆತಿದೆ. ಈ ಹಿನ್ನೆಲೆಯಲ್ಲಿ ಈ ದಾಳಿ ನಡೆದಿದೆ. ವೀರೇಂದ್ರ ಪಪ್ಪಿ ಅವರು ಚಿತ್ರದುರ್ಗದಲ್ಲಿ ಶಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದರೂ, ತಮ್ಮ ಎಲ್ಲಾ ವ್ಯವಹಾರಗಳನ್ನು ಬೆಂಗಳೂರಿನ ವಸಂತನಗರದಲ್ಲಿರುವ ತಮ್ಮ ಫ್ಲಾಟ್‌ನಿಂದಲೇ ನಿರ್ವಹಿಸುತ್ತಿದ್ದರು ಎಂದು ತಿಳಿದುಬಂದಿದೆ. ಈ ಫ್ಲಾಟ್‌ನಲ್ಲಿ ವ್ಯವಹಾರಕ್ಕೆ ಸಂಬಂಧಿಸಿದ ಕೆಲವು ದಾಖಲೆಗಳು ದೊರಕಿದ್ದು, ಅದರ ಮುಂದುವರಿದ ಭಾಗವಾಗಿ ಕುಸುಮ ಅವರ ಮನೆಯ ಮೇಲೆ ದಾಳಿ ಮಾಡಲಾಗಿದೆ. ಸದ್ಯ ಹನುಮಂತರಾಯಪ್ಪ ಅವರ ನಿವಾಸದಲ್ಲಿ ಪರಿಶೀಲನೆ ಮುಂದುವರಿದಿದೆ. ಈ ಘಟನೆಯು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ!


# ಏಳುಮಲೆಯ ಪ್ರೀತಿ ಪರಮ ಶ್ರೇಷ್ಠ!

'ಹರೀಶ ನಾನು ಮನೆಯವರೆಲ್ಲರನ್ನೂ ಬಿಟ್ಟು ಬರ್ತಾ ಇದೀನೋ..' ಹೀಗಂತಾಳೆ ನಾಯಕಿ. 'ಚಿನ್ನ ಉಸಿರು ಇರೋವರೆಗೆ ಅವರ ಯಾರ ನೆನಪೂ ಬರದಂಗೆ ನೋಡ್ಕೋತಿನಿ...' ಹೀಗೆ ಹೇಳ್ತಾನೆ ನಾಯಕ. ಅಲ್ಲಿಗೆ, ಇದೊಂದು ಲವ್ ಸ್ಟೋರಿ ಅಂತ ಬಿಡಿಸಿ ಹೇಳೋದು ಬೇಕಿಲ್ಲ. ಬರೀ ಲವ್ ಸ್ಟೋರಿ ಆಗಿದ್ದರೆ ಇಷ್ಟೊಂದು ಒತ್ತಿ ಹೇಳುವ ಅಗತ್ಯವಿಲ್ಲ, ಇದೊಂದು ಕಾಡುವ, ನೋಡುವ, ಮನ ಹಿಂಡುವ, ಪದೇ ಪದೇ ತಳಮಳಗೊಳಿಸುವ ಚಂದದ ಪ್ರೇಮಕಥೆ...

ಹೌದು, ಏಳುಮಲೆ ಸಿನಿಮಾ ಕಥೆಯಲ್ಲಿ ನೋಡಿಸಿಕೊಂಡು ಹೋಗುವ ತಾಕತ್ತು ಇದೆ. ಚಿತ್ರಕಥೆಯಲ್ಲಿ ಹಿಡಿತವಿದೆ. ನಿರೂಪಣೆಯಲ್ಲಿ ಹೊಸತನವಿದೆ. ಸೊಗಸಿದೆ. ಸೆಳೆತವಿದೆ. ಫೈನಲಿ,ಟ್ವಿಸ್ಟೂ ಇದೆ. ಅದೇ ರೀತಿ ಚಿತ್ರದ ಒತ್ತಡ ಅಲ್ಲಲ್ಲಿ ಕೊಂಚ ಟೆಸ್ಟೂ ಇದೆ. ಒಂದೇ ಮಾತಲ್ಲಿ ಹೇಳುವುದಾದರೆ, ಮತ್ತೊಂದು ಆರ್ಗ್ಯಾನಿಕ್ ಗೆಲುವಿನ ಸಿನಿಮಾ ಇದು.... ಸಿನಿಮಾದ ಸ್ಟ್ರೆಂಥೇ ಗಾಢವಾದ ಕಥೆ.

ಎಲ್ಲೂ ಗೊಂದಲಕ್ಕೀಡು ಮಾಡದ ಚಿತ್ರಕಥೆಯೇ ಚಿತ್ರದೊಳಗಿನ ಹೂರಣ. ಮೊದಲರ್ಧ ಸಲೀಸಾಗಿ ಸಾಗುವ ಚಿತ್ರದಲ್ಲಿ ಕುತೂಹಲವೇ ಹೆಚ್ಚು. ದ್ವಿತಿಯಾರ್ಧ ಆ ಕುತೂಹಲ ಮತ್ತಷ್ಟು ದುಪ್ಪಟ್ಟು. ನಿರ್ದೇಶಕರು (ಪುನೀತ್ ರಂಗಸ್ವಾಮಿ) ಎಲ್ಲರಿಗೂ ಸಲ್ಲುವ ಸಿನಿಮಾ ಮಾಡಿದ್ದಾರೆ. ಪ್ರೀತಿಯ ಕಥೆಯಲ್ಲಿ ಕಾಮನ್ ಎಲಿಮೆಂಟ್ಸ್ ಇರಬಹುದೇನೋ ಅಂದುಕೊಂಡರೆ ನಿಮ್ಮ ಊಹೆ ತಪ್ಪು. ಇಲ್ಲಿರುವ ಪ್ರೀತಿಯ ಕಥೆಯಲ್ಲಿ ಗಂಭೀರತೆ ಇದೆ, ತಲ್ಲಣವಿದೆ, ಭಾವುಕತೆ ಇದೆ, ಎದೆ ಝಲ್ ಅನಿಸೋ ಸನ್ನಿವೇಶಗಳಿವೆ, ಕಕ್ ಒದ್ದೆಯಾಗಿಸೋ ಮಾತುಗಳಿವೆ. ಆ ಕಾರಣಕ್ಕೆ ಸಿನಿಮಾ ರುಚಿಸುತ್ತಾ ಹೋಗುತ್ತೆ.







ಪ್ರೀತಿಯಲ್ಲಿ ನೋವಿದೆ, ನಲಿವಿದೆ ತಲ್ಲಣವಿದೆ, ಮೌನವಿದೆ, ಅವೆಲ್ಲದಕ್ಕೂ ತುಸು ಹೆಚ್ಚೇ ಕಾಡುವ ಅಂಶಗಳು ಇಲ್ಲಿ ಹೈಲೆಟ್ ಆಗಿವೆ. ಆ ಕಾರಣಕ್ಕೆ ಸಿನಿಮಾ ಇಷ್ಟವಾಗುತ್ತೆ. ಇಡೀ ಸಿನಿಮಾದಲ್ಲಿ ಆವರಿಸೋದು ಆ ಇಬ್ಬರ ನಿಷ್ಕಲ್ಮಷ ಪ್ರೀತಿ ಕಥೆ. ಎಲ್ಲಾ ಪ್ರೀತಿ ಕಥೆಯಲ್ಲಿ ಟ್ವಿಸ್ಟ್ ಕಾಮನ್. ಇಲ್ಲಿ ಎಲ್ಲವೂ ಬೆಸ್ಟ್ ಅನ್ನುವಂತಹ ಸಿನಿಮಾ ಕೊಡಲಾಗಿದೆ. ಇಷ್ಟೆಲ್ಲ ಹೇಳಿದ ಮೇಲೆ ಸ್ವಲ್ಪ ಕಥೆ ಹೇಳದಿದ್ರೆ ಹೇಗೆ...

ನಾಯಕ ಹರೀಶ (ರಾಣಾ) ಕರ್ನಾಟಕದ ಮೈಸೂರಿನ ಹುಡುಗ ಕ್ಯಾಬ್ ಡ್ರೈವರ್. ಅಪ್ಪ ಅಮ್ಮ ಇಲ್ಲದ ಅನಾಥ. ನಾಯಕಿ ರೇವತಿ (ಪ್ರಿಯಾಂಕ) ತಮಿಳುನಾಡಿನ ಶ್ರೀಮಂತ ಕುಟುಂಬದ ಹುಡುಗಿ. ಇಬ್ಬರ ಮಧ್ಯೆ ಅಗಾಧ ಪ್ರೀತಿ. ಆದರೆ, ಆ ರಾತ್ರಿ ಕಳೆದು ಬೆಳಗಾದರೆ ಅವಳ ಮದ್ವೆ. ಬಾಡಿಗೆಗಾಗಿ ಊಟಿಗೆ ಹೋಗಿದ್ದ ಅವನು ಮೈಸೂರಿಗೆ ಹೋಗಲೇಬೇಕು. ಅವಳು ಮದ್ವೆ ಬಿಟ್ಟು ತಮಿಳುನಾಡಿನಿಂದ ಮೈಸೂರಿಗೆ ಹೋಗಿ ಪ್ರಿಯಕರನನ್ನು ಭೇಟಿ ಮಾಡಬೇಕು. ಈ ಮಧ್ಯೆ, ಇಬ್ಬರ ಲೈಫಲ್ಲೂ ನಡೆಯಬಾರದ ಘಟನೆ ನಡೆಯುತ್ತೆ. ಅದೇ ಸಿನಿಮಾದ ಟ್ವಿಸ್ಟು!

ಇಡೀ ಕಥೆ ಒಂದು ರಾತ್ರಿಯಲ್ಲಿ ನಡೆಯುತ್ತೆ. ರಾತ್ರಿ ಕಳೆದು ಬೆಳಗಾಗುವ ಹೊತ್ತಿಗೆ ಅಲ್ಲಿ ಬೆಂಕಿ ಹೊತ್ತಿ ಉರಿಯುತ್ತೆ. ತಾನು ಮಾಡದ ತಪ್ಪಿಗೆ ಹೀರೋ ವ್ಯಥೆ ಪಡುವಂತಾಗುತ್ತೆ. ಪ್ರತೀ ದೃಶ್ಯದಲ್ಲೂ ಕಾಡುವ ಕಥೆಯೇ ಹೈಲೆಟ್. ನೋಡುಗರಿಗೂ ಮುಂದೇನಾಗುತ್ತೆ ಅನ್ನುವ ಕುತೂಹಲ. ಆ ಕುತೂಹಲ ಏನೆಂದು ತಿಳಿಯಬೇಕಿದ್ದರೆ ಏಳುಮಲೆ ಚಿತ್ರವನ್ನ ಮಿಸ್ ಮಾಡದೆ ನೋಡಲೇಬೇಕು.

ಮೊದಲೇ ಹೇಳಿದಂತೆ ಈ ಸಿನಿಮಾಗೆ ಚೂರು ಬೇಸರವಾಗದಂತೆ ನೋಡಿಸಿಕೊಂಡು ಹೋಗುವ ತಾಕತ್ತು ಇದೆ. ಚಿತ್ರದ ಕಥೆಯಲ್ಲಿ ಗೊಂದಲವಿಲ್ಲ. ಇಲ್ಲಿ ಮೂರ್ನಾಲ್ಕು ಆಯಾಮದಲ್ಲಿ ಕಥೆ ಸಾಗುತ್ತೆ. ಕ್ಲೈಮ್ಯಾಕ್ಸ್ ಅಂತೂ ಅಲ್ಟಿಮೇಟ್! ಇಲ್ಲಿ ಎಲ್ಲವನ್ನೂ ಅಷ್ಟೇ ಅಚ್ಚುಕಟ್ಟಾಗಿ ನಿರೂಪಿಸಲಾಗಿದೆ. ಕಥೆಯ ಡಿಮ್ಯಾಂಡ್ ಗಾಗಿ ಅಲ್ಲಲ್ಲಿ ತಮಿಳು ಮಿಶ್ರಿತ ಕನ್ನಡ ಭಾಷೆ ಇದೆಯಾದರೂ ಅದು ಅತ್ಯಗತ್ಯ... ಇಲ್ಲಿ ಪ್ರೀತಿಯ ಎಳೆ ಜೊತೆ ಕಾಡುಗಳ್ಳ ವೀರಪ್ಪನ್ ಕಥೆಯೂ ಇದೆ! ಆ ಕಾಲಘಟ್ಟದಲ್ಲಿ ನಡೆದ ನವಿರಾದ ಪ್ರೇಮ ಕಥೆಯಲ್ಲಿ ಮರುಕ ಹುಟ್ಟಿಸೋ ಯಾತನಮಯ ಪ್ರೇಮಿಗಳ ಚಿತ್ರಣ ನಿಜಕ್ಕೂ ತಲ್ಲಣಗೊಳಿಸುತ್ತೆ.

**ಏಕ್ ಲವ್ ಯಾ ಫೇಮ್**

ರಾಣಾ ಇಲ್ಲಿ ಮಾಗಿದ ನಟನೆ ಮೆರೆದಿದ್ದಾರೆ. ನಿಜ ಹೇಳಬೇಕೆಂದರೆ ಪಾತ್ರದಲ್ಲಿ ಜೀವಿಸಿದ್ದಾರೆ. ಅವರ ಬಾಡಿ ಲಾಂಗ್ವೇಜ್, ಡೈಲಾಗ್ ಡೆಲಿವರಿ, ಹಾವಭಾವ ಎಲ್ಲದರಲ್ಲೂ ಒಳ್ಳೆಯ ಮಾರ್ಕ್ಸ್ ಪಡೆದಿದ್ದಾರೆ. ಇಷ್ಟು ಬದ್ಧತೆ ಇದ್ದರೆ ಕನ್ನಡದಲ್ಲಿ ಗಟ್ಟಿಯಾಗಿ ನಿಲ್ಲುವುದು ಕಷ್ಟವೇನಲ್ಲ.

ಇನ್ನು ನಾಯಕಿ ಪ್ರಿಯಾಂಕ ಇಲ್ಲಿ ಮತ್ತೊಂದು ಪ್ಲಸ್. ಇಡೀ ಸಿನಿಮಾದ ಕೇಂದ್ರ ಬಿಂದು ಈಕೆ. ಮೊದಲ ಬಾಲ್‌ನಲ್ಲೇ ಸಿಕ್ಸರ್ ಬಾರಿಸಿದ್ದಾರೆ. ಮಹಾನಟಿ ಶೋ ವಿನ್ನರ್ ಆಗಿ ಬೆಳ್ಳಿತೆರೆ ಪ್ರವೇಶ ಮಾಡಿರುವ ಈ ಹುಡುಗಿಗೆ ಒಳ್ಳೆ ಭವಿಷ್ಯವಿದೆ.

ಇನ್ನು, ಕಿಶೋರ್ ಅಣ್ಣಂದು ಎಂದಿನಂತೆ ಖಡಕ್ ಪೊಲೀಸ್ ಅಧಿಕಾರಿ. ಹುಲಿಯಂತೆ ಘರ್ಜಿಸುತ್ತಾರೆ. ಮಹದೇವಪ್ಪನಾಗಿ ನಾಗಾಭರಣ ಅವರು ಗಮನ ಸೆಳೆಯುತ್ತಾರೆ. ಜಗಪತಿಬಾಬು, ಸರ್ದಾರ್ ಸತ್ಯ, ಜಗ್ಗಪ್ಪ ಇತರೆ ಕಲಾವಿದರು ಗಮನ ಸೆಳೆಯುತ್ತಾರೆ.

ಸಿನಿಮಾದ ಹೈಲೆಟ್ ಅಂದರೆ ಅದು ಅದ್ವೈತ ಗುರುಮೂರ್ತಿ ಅವರ ಕ್ಯಾಮರಾ ಕೈಚಳಕ. ಇಮಾನ್ ಅವರ ಸಂಗೀತದ ಎರಡು ಹಾಡು ಹಾಗು ಹಿನ್ನೆಲೆ ಸಂಗೀತ ಎಕ್ಸಲೆಂಟ್. ಕೆ.ಎಂ. ಪ್ರಕಾಶ್ ಅವರ ಸಂಕಲನ ಚಿತ್ರದ ವೇಗವನ್ನು ಮಾತ್ರವಲ್ಲ, ತೂಕವನ್ನೂ ಹೆಚ್ಚಿಸಿದೆ. ಒಟ್ಟಾರೆ, ಕನ್ನಡದಲ್ಲಿ ಕಾಡುವ ಸಿನಿಮಾಗಳ ಪಟ್ಟಿಗೆ ಇದು ಸೇರುತ್ತೆ! ಕನ್ನಡದಲ್ಲಿ ಬಂದ ಮರೆಯಲಾಗದ ಪ್ರೇಮಕಥೆಗಳ ಸಾಲಿಗೆ ಇದೂ ಸೇರ್ಪಡೆಯಾಗಲಿದೆ. ಪ್ರೀತಿ ಪರಮ ಶ್ರೇಷ್ಠ ಅನ್ನುವುದಕ್ಕೆ 'ಏಳುಮಲೆ' ಸಾಕ್ಷಿಯಾಗಿ ನಿಲ್ಲುತ್ತೆ!! ☯

# ರವಿಚಂದ್ರನ್ ಚಿತ್ರ ರಿಲೀಸ್ ಬೆಳಗಿನ ಆಟವೇ ಕ್ಯಾನ್ಸಲ್!

ಕ್ರೇಜಿ ಸ್ಟಾರ್ ರವಿಚಂದ್ರನ್ ಅವರ ಚಿತ್ರ ಜೀವನದಲ್ಲೇ ಇದು ಮೊದಲನೇ ದಾಖಲೆ! ಆಗಸ್ಟ್ 29ರಂದು ಶುಕ್ರವಾರ 'ಗೌರಿಶಂಕರ' ಚಿತ್ರಕ್ಕೆ ಪ್ರೇಕ್ಷಕರು ಬಾರದೆ ಮಾರ್ನಿಂಗ್ ಶೋ ರದ್ದಾಗಿದ್ದ ಸುದ್ದಿ ಕೇಳಿ ಒಂದು ಕ್ಷಣ ಮನಸ್ಸು ವಿಪ್ಪಲಗೊಂಡಿತು.

ಅದೇ 80- 90ರ ದಶಕದಲ್ಲಿ ರವಿಚಂದ್ರನ್ ಅಭಿನಯದ ಚಿತ್ರಗಳು ಬಿಡುಗಡೆ ಆದವೆಂದರೆ, ಮೊದಲ ದಿನ ಟಿಕೆಟ್ ಸಿಗುವುದೇ ಕಷ್ಟವಾಗಿತ್ತು. ನೂರಾರು ರೂ. ತೆತ್ತು ಬ್ಲ್ಯಾಕ್ ಟಿಕೆಟ್ ಖರೀದಿಸಿ ನೋಡಬೇಕಿತ್ತು. ಅದೇ ರವಿಚಂದ್ರನ್ ಅಭಿನಯದ ಚಿತ್ರಕ್ಕೆ ಮೊದಲ ದಿನವೇ ಪ್ರೇಕ್ಷಕರೇ ಇಲ್ಲದೆ ಚಿತ್ರ ಪ್ರದರ್ಶನವೇ ರದ್ದಾಗಿತ್ತು ಅಂದರೆ.....?!

ಹೌದು, ಇದು ಸತ್ಯ. ಮೂರು ವರ್ಷಗಳ ಹಿಂದೆ ಶೂಟಿಂಗ್ ಶುರು ಮಾಡಿ, ಕಳೆದ ಜೂನ್‌ನಲ್ಲಿ ಕುಂಬಳಕಾಯಿ ಹೊಡೆದಿದ್ದ ಚಿತ್ರ ಗೌರಿ ಶಂಕರ. 'ಮೈತ್ರಿ' ನಿರ್ಮಾಪಕ ವಜ್ರೇಶ್ವರಿ ಕುಮಾರ್ (ಎನ್.ಎಸ್. ರಾಜ್ ಕುಮಾರ್) ನಿರ್ಮಾಣದ ಈ ಸಿನಿಮಾ ಕಳೆದ ಆಗಸ್ಟ್ 29 ರಂದು ರಾಜ್ಯಾದ್ಯಂತ ಬಿಡುಗಡೆಯಾಗಿತ್ತು. ಬೆಂಗಳೂರಿನ ಸಪ್ನ ಮುಖ್ಯ ಚಿತ್ರಮಂದಿರ. ಅದೇಕೋ ಏನೋ, ಎನ್.ಎಸ್. ರಾಜ್‌ಕುಮಾರ್ ಈ ಚಿತ್ರದ ಪ್ರಚಾರವನ್ನೇ ಮಾಡಿರಲಿಲ್ಲ. ಪುನೀತ್ ರಾಜ್‌ಕುಮಾರ್ ಹೋದ ಬಳಿಕ ಸ್ತಬ್ದರಾಗಿ ಉಳಿದಿದ್ದಾರೆ! ಗೌರಿಶಂಕರ ಸಣ್ಣ ಬಜೆಟ್ ಸಿನಿಮಾ.





ಕೆಲವು ದಿನಗಳ ಹಿಂದೆ ಸಣ್ಣದಾಗಿ ಜಾಹಿರಾತು ಹಾಕಿಸಿ ಚಿತ್ರವನ್ನು ಬಿಡುಗಡೆ ಮಾಡಿದ್ದರು. ರವಿಚಂದ್ರನ್ ಅವರ ಅಭಿಮಾನಿಗಳಿಗೇ ಈ ಚಿತ್ರ ಬಿಡುಗಡೆ ಆಗುತ್ತಿರುವುದು ಗೊತ್ತಿರಲಿಲ್ಲ, ಇದರ ಫಲವಾಗಿ ಕಳೆದ ಶುಕ್ರವಾರ ಸಪ್ನ ಚಿತ್ರಮಂದಿರದ ಬೆಳಗಿನ ಪ್ರದರ್ಶನಕ್ಕೆ ಪ್ರೇಕ್ಷಕರೇ ಬಂದಿರಲಿಲ್ಲ, ಸೋ, ಪ್ರೇಕ್ಷಕರ ಕೊರತೆಯಿಂದಾಗಿ ಮಾರ್ನಿಂಗ್ ಶೋ ರದ್ದಾಗಿತ್ತು. ಬರೀ ಸಪ್ನ ಚಿತ್ರಮಂದಿರವಷ್ಟೇ ಅಲ್ಲ, ರಾಜ್ಯದ ಬೇರೆ ಬೇರೆ ಕಡೆಯೂ ಕೆಲವು ಚಿತ್ರಮಂದಿರಗಳಲ್ಲಿ ಚಿತ್ರದ ಪ್ರದರ್ಶನ ರದ್ದಾಗಿರುವ ಸುದ್ದಿಯಿದೆ! ಇಂಥ ಒಳ್ಳೆ ಹೆಸರಿದ್ದರೂ, ರವಿಚಂದ್ರನ್ ಹೀರೋ ಆಗಿದ್ದರೂ ಸಿನಿಮಾ ಬೋಣಿ ಆಗಿಲ್ಲ ಎಂದರೆ......?!!

☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 7.9.2025

# ಅಭಿಮಾನಿಗಳ ಸಮ್ಮುಖದಲ್ಲಿ ಸುದೀಪ್ ಬರ್ತ್‌ಡೇ ಗ್ರ್ಯಾಂಡ್...






ಸುದೀಪ್ ಅಷ್ಟು ಸುಲಭವಾಗಿ ಬೀದಿಗೆ ಬರುವವರಲ್ಲ. ಅಕಸ್ಮಾತ್ ಬಂದರೆ ಏನಾದರೂ ವಿಶೇಷ ಹೊತ್ತು ಬರುತ್ತಾರೆ. ಈ ಬಾರಿ ತಮ್ಮ ಅಭಿಮಾನಿಗಳ ಸಮ್ಮುಖದಲ್ಲಿ ತಮ್ಮ 52ನೇ ಹುಟ್ಟು ಹಬ್ಬ ಆಚರಿಸಿಕೊಂಡಿದ್ದಾರೆ. ಅಭಿಮಾನಿಗಳಿಗೆ ಯಾವುದಕ್ಕೂ ತೊಂದರೆ ಆಗಬಾರದು ಅಂತೇಳಿ ನೈಸ್ ರಸ್ತೆ ಬಳಿ 'ನಂದಿ ಲಿಂಕ್ ಗ್ರೌಂಡ್' ನಲ್ಲಿ ಬಲೇ ಗ್ರ್ಯಾಂಡ್ ಆಗಿಯೇ ಹಬ್ಬ ಆಚರಿಸಿದ್ದಾರೆ. ಅಂದು ತಮ್ಮ ಫ್ಯಾನ್ಸ್‌ಗೆ ಒಳ್ಳೆ ಪಾಠವನ್ನೇ ಭೋದಿಸಿದ್ದಾರೆ.

ಯಾರ ವಿಚಾರದಲ್ಲೂ ದುಡುಕಿ ಮಾತಾಡಬೇಡಿ... ಫ್ಯಾನ್ಸ್ ಪೇಜ್‌ನಲ್ಲಿ ಯಾರನ್ನೂ ಹೀಗಳೆಯದಿರಿ.... ಯಾವಾದ್ರೂ ತರ್ಲೆ ಕಾಮೆಂಟ್ ಮಾಡಿದ್ರು ತಲೆಕೆಡಿಸಿಕೊಳ್ಳದೆ ನಿಮ್ ಪಾಡಿಗೆ ನೀವಿರಿ... ಯಾರೋ ಏನೋ ಮಾಡ್ತಾರೆ ಅಂತ ನಾವು ಮಾಡೋದ್ ಬೇಡ... ನಮಗೆ ನಮ್ಮ ಸ್ನೇಹ ನಮ್ಮ ಸಿನಿಮಾ ಅಷ್ಟೇ ಮುಖ್ಯ... ಮುಂತಾದ ಹಿತನುಡಿ ಹೇಳಿದ್ದಾರೆ. ಅಲ್ಲದೆ, ತಮ್ಮ ಸುಪುತ್ರಿ ಸಾನ್ವಿಯನ್ನು ಕೊಂಡಾಡಿ, ಸೋದರಿ ಮಗ ಸಂಚಿತ್‌ನನ್ನು ತಮ್ಮ ಮಗ ಅಂತಲೇ ಪರಿಚಯಿಸಿ ಹರ್ಷಿಸಿದ್ದಾರೆ ಸುದೀಪ್.

ಅವತ್ತು ಸುದೀಪ್ ಅವರ ಹೊಸ ಸಿನಿಮಾ 'ಮಾರ್ಕ್' ಅನೌನ್ಸ್ ಆಗಿದ್ದು, ಟೀಸರ್ ಬಿಡುಗಡೆ ಆಗಿದ್ದು ಮತ್ತೊಂದು ವಿಶೇಷ. ಅಂದಹಾಗೆ, ಮಾರ್ಕ್ 'ಮ್ಯಾಕ್ಸ್' ಚಿತ್ರದ ಮುಂದುವರಿದ ಭಾಗವಂತೆ! ಮ್ಯಾಕ್ಸ್ ನಿರ್ದೇಶನ ಮಾಡಿದ್ದ ತಮಿಳಿನ ವಿಜಯ್ ಕಾರ್ತಕೇಯ ಅವರೇ ಡೈರೆಕ್ಟರ್!! ☯

# 'ಪೊಲೀಸ್ ಸ್ಟೋರಿ' ಕತೆಗಾರ ಎಸ್.ಎಸ್. ಡೇವಿಡ್ ನಿರ್ಗಮನ!

ಸ್ಯಾಂಡಲ್‌ವುಡ್‌ನಿಂದ ಇನ್ನೊಂದು ಪ್ರತಿಭೆ ನಿರ್ಗಮಿಸಿದೆ. 'ಪೊಲೀಸ್ ಸ್ಟೋರಿ', 'ಅಗ್ನಿ ಐಪಿಎಸ್', 'ಜೈಹಿಂದ್', 'ಪೊಲೀಸ್ ಸ್ಟೋರಿ -2', 'ಓಂ ನಮಃ ಶಿವಾಯ' ಮುಂತಾದ ಚಿತ್ರಗಳಿಗೆ ಕತೆ ಚಿತ್ರ ಕತೆ ಸಂಭಾಷಣೆ ಬರೆದಿದ್ದ ಎಸ್. ಎಸ್. ಡೇವಿಡ್ ಆಸ್ಪತ್ರೆಯೊಂದರಲ್ಲಿ ಅನಾಥರಂತೆ ಅಸು ನೀಗಿದ್ದಾರೆ. ಅವರಿಗೆ ಮದುವೆ ಆಗಿರಲಿಲ್ಲ. ಮಂಗಳೂರು ಮೂಲದಿಂದ ಬೆಂಗಳೂರು ಸಿಟಿಗೆ ಬಂದು, ಫುಟ್‌ಪಾತ್‌ನಲ್ಲಿ ಬಟ್ಟೆ ವ್ಯಾಪಾರ ಮಾಡಿ, ಹಸುಗಳ ಕಟ್ಟಿ ಹಾಲು ಮಾರಿ ಜೀವನ ಸಾಗಿಸುತ್ತಿದ್ದವರು ಎಸ್. ಎಸ್. ಡೇವಿಡ್.



ಅವರಿಗೆ ಸಿನಿಮಾ ಹುಚ್ಚು ಹತ್ತಿದ್ದೇ ರೋಚಕ ಎನ್ನುವ ಸ್ನೇಹಿತ ಥ್ರಿಲ್ಲರ್ ಮಂಜು, ಡೇವಿಡ್ ತಲೆಯೊಳಗಿದ್ದ ವಸ್ತುವಿಗೆ ಸಿನಿಮಾ ರೂಪ ಕೊಟ್ಟು ಒಳ್ಳೆಯ ಕ್ರಿಯಾಶೀಲ ಬರಹಗಾರನನ್ನಾಗಿ ಮಾಡಿದ್ದರು. ಮುಂದೆ ಅವರೇ ಸ್ವತಂತ್ರ ನಿರ್ದೇಶಕರಾಗಿ ಒಂದೆರಡು ಸಿನಿಮಾ ಮಾಡಿದರೂ ಅವು ಹೆಚ್ಚು ಪ್ರಸಿದ್ಧಿ ಪಡೆಯಲಿಲ್ಲ, ಅಷ್ಟರಲ್ಲಿ ಕಾಲ ಬದಲಾಗಿತ್ತು... ಹೊಸಬರ ಅಲೆಯಲ್ಲಿ ಹಳಬರು ಕೊಚ್ಚಿಕೊಂಡು ಹೋದರು. ಡೇವಿಡ್ ನೇಪತ್ಯಕ್ಕೆ ಸರಿದು ಹೋದವರು, ಮೊನ್ನೆ ಸತ್ತಾಗಲೇ ನೆನಪಿಗೆ ಬಂದದ್ದು! ಅಂದಹಾಗೆ, ಡೇವಿಡ್

ಅವರ ಅಂತ್ಯಕ್ರಿಯೆಯನ್ನು ಗೋರಿಪಾಳ್ಯದಲ್ಲಿ ಸ್ನೇಹಿತರ ಸಮ್ಮುಖದಲ್ಲಿ ನೆರವೇರಿಸಲಾಯಿತು. ಆರ್. ಆರ್. ನಗರದ ಸ್ಪರ್ಶ್ ಆಸ್ಪತ್ರೆಯಿಂದ ವಿಕ್ಟೋರಿಯಾ ಆಸ್ಪತ್ರೆಗೆ, ಅಲ್ಲಿಂದ ಚಿತಾಗಾರದವರೆಗೂ ಒಯ್ಯುದ್ದ ಶ್ರಮಿಸಿದವರು ಚಲನಚಿತ್ರದಲ್ಲಿ ಸಕ್ರಿಯವಾಗಿರುವ ಡೇವಿಡ್ ಅವರೊಂದಿಗೆ ಸ್ನೇಹಹ ಬಾಂಧವ್ಯದಿಂದ ಇದ್ದಂತಹ ಸತೀಶ್ ಬ್ರಹ್ಮವರ್ ಮತ್ತು ಮನೋಜ್.

ಚಿತ್ರರಂಗದ ಪ್ರಮುಖ ಸಂಸ್ಥೆಯಾದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾದ ನರಸಿಂಹಲು, ನಿರ್ಮಾಪಕರ ಸಂಘದ ಅಧ್ಯಕ್ಷರಾದ ಉಮೇಶ್ ಬಣಕಾರ್, ನಿರ್ದೇಶಕರ ಸಂಘದ ಅಧ್ಯಕ್ಷರಾದ ಎನ್.ಆರ್.ಕೆ. ವಿಶ್ವನಾಥ್. ಛಾಯಾಗ್ರಾಹಕ ಜೆ.ಜೆ. ಕೃಷ್ಣ, ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು, ನಿರ್ದೇಶಕರ ಸಂಘದ ಸದಸ್ಯರಾದ ಜಗದೀಶ್ ಕೊಪ್ಪ, ಮಂಜು ದೈವಜ್ಞ, ಮುಂತಾದವರು ಉಪಸ್ಥಿತರಿದ್ದು ಕ್ರಿಶ್ಚಿಯನ್ ಧರ್ಮದ ಸಂಪ್ರದಾಯದಂತೆ ಅಂತಿಮ ಕಾರ್ಯ ನೆರವೇರಿಸಿ ಅವರ ಆತ್ಮಕ್ಕೆ ಶಾಂತಿ ಕೋರಲಾಯಿತು. ☯

# 'ದೈವ' ಟೀಸರ್ರೇ ಬೆಂಕಿ!

ಇದೇ ನಮ್ಮೂರು. ಒಕ್ಕಲುತನ ನಮ್ಮ ಕುಲಕಸುಬು. ಹೆತ್ತ ತಾಯಿ ಜೀವ ಕೊಟ್ರೆ ಭೂಮಿ ತಾಯಿ ಜೀವನ ಕೊಡ್ತಾಳೆ! ಹೆತ್ತ ತಾಯಿ ಬೇರೆ ಅಲ್ಲ, ಭೂಮಿ ತಾಯಿ ಬೇರೆ ಅಲ್ಲ! ಬಡವರ ಭಯಾನೇ ಬಂಡವಾಳ ಮಾಡ್ಕೊಂಡು ದುಡಿಯೋರ ಬಾಯಿಗೆ ಮಣ್ಣಾಕ್ತಾ ದೌಲತ್ತಿನಲ್ಲಿ ಮೆರಿತಾ ಇರೋರು ಬೆಳೆ ಮಧ್ಯೆ ಕಳೆ ಇದ್ದಂಗೆ! ಬಡವರನ್ನ ತುಳಿದು ಬದುಕ್ತಿರೋ ಇಂಥವ್ರ ಮುಂದೆ ತಲೆ ಎತ್ತಿ ಬದುಕಬೇಕು ಅಂದ್ರೆ 'ಧೈರ್ಯ' ಅನ್ನೋ ಆಯುಧ ಹಿಡೀಬೇಕು. ಅಂಥ ಆಯುಧದಿಂದ ಕೊಯ್ದು ಬಿಸಾಕ್ ಬೇಕು. ಇಲ್ಲಿ ಎಲ್ಲಾ ಬದ್ಲಾಗ್‌ಬೇಕು. ಅದು ನನ್ನಿಂದ್ಲೇ ಬದ್ಲಾಗ್ಬೇಕು...




ಡಿಯರ್ ಫ್ರೆಂಡ್ಸ್, ಇವೇ ಮುಂತಾದ ಖದರ್ ಸಾಲುಗಳಿರೋ ಸಿನಿಮಾವೊಂದರ ಟೀಸರ್ ಮೊನ್ನೆ ಸೆಪ್ಟೆಂಬರ್ 5ರ 'ಟೀಚರ್ಸ್‌ಡೇ'ನಂದು ರಿಲೀಸ್ ಆಗಿದೆ. ಅದು 'ದೈವ' ಎಂಬ ಚಿತ್ರದ ಟೀಸರ್! ಎಂ.ಜೆ. ಎಂಬ ತರುಣ ನಾಯಕ ನಟನಾಗಿ, ನಿರ್ದೇಶಕನಾಗಿ ಚಿತ್ರಿಸಿರುವ ಚಿತ್ರವು ಇನ್ನಷ್ಟೇ ಬಿಡುಗಡೆಯಾಗಬೇಕಿದೆ. ಈ ಚಿತ್ರವನ್ನ ಅವರ ತಾಯಿ ಶ್ರೀಮತಿ ಜಯಮ್ಮ ಪದ್ಮರಾಜ್ 'ಕಲ್ಪವೃಕ್ಷ ಕ್ರಿಯೇಷನ್ಸ್' ಅಡಿ ನಿರ್ಮಿಸಿದ್ದಾರೆ. ಎಂ.ಜೆ. (ಮಂಜುನಾಥ್ ಜಯರಾಜ್) ಮೂಲತಃ ಪ್ರೊಫೆಸರ್. ಎಂಟೆಕ್ ಮಾಡಿಕೊಂಡು ಖಾಸಗಿ ಇಂಜಿನಿಯರ್ ಕಾಲೇಜಿನಲ್ಲಿ ಅರೆಕಾಲಿಕ ಲೆಕ್ಚರರ್ ಆಗಿದ್ದವರು. ಅವರಿಗೆ ಸಿನಿಮಾ ಲೋಕದಲ್ಲಿ ಏನಾದರೂ ಸಾಧಿಸಬೇಕೆಂಬ ಹಠ. ಈ ಹಿನ್ನಲೆ ಚೊಚ್ಚಲ ಪ್ರಯತ್ನವಾಗಿ 'ದೈವ' ಚಿತ್ರಿಸಿದ್ದಾರೆ. ಹಾಗಂತ ಇದು ದೇವರ ಸಿನಿಮಾ ಅಂದುಕೊಳ್ಳಬೇಡಿ. ಇದೊಂದು ಸಾಮಾಜಿಕ ಕಳಕಳಿಯುಳ್ಳ ಬಡವ-ಬಲ್ಲಿದರ-ಶಿಕ್ಷಣದ ಮಹತ್ವ ಕುರಿತ ಚಿತ್ರವಾಗಿದೆ! ☯

# ಸದ್ದಿಲ್ಲದೆ ಮದುವೆಗೆ ರೆಡಿಯಾದ ಚಿಕ್ಕಣ್ಣ!

ಕಾಮಿಡಿ ಶೋನಲ್ಲಿ ನಿರೂಪಣೆ ಮಾಡುತ್ತಲೇ ಜನಪ್ರಿಯಳು ಶ್ರೀಮಂತಳೂ ಆದ ಅನುಶ್ರೀ ಕಳೆದ ವಾರ ಮದುವೆಯಾದರು. ಈಗ ಅದೇ ಕಾಮಿಡಿ ಶೋನಲ್ಲಿ ಸ್ಪರ್ಧಿಯಾಗಿ ಗೆದ್ದು ಕನ್ನಡ ಚಲನ ಚಿತ್ರರಂಗದ ನಂಬರ್ ಒನ್ ಹಾಸ್ಯನಟರಾಗಿರುವ ಚಿಕ್ಕಣ್ಣ ಸದ್ದಿಲ್ಲದೆ ಮದುವೆ ತಯಾರಿ ಮಾಡಿಕೊಂಡಿದ್ದಾರೆ! ಹೌದು, ಆರಂಭದಲ್ಲಿ ಕಾಮಿಡಿ ಶೋಗಳಲ್ಲಿ ಭಾಗಿಯಾಗುತ್ತಿದ್ದ ನಟ ಚಿಕ್ಕಣ್ಣ, ಕಿರಾತಕ ಮತ್ತು ರಾಜಾಹುಲಿ ಚಿತ್ರದಲ್ಲಿ ಯಶ್ ಮಿತ್ರನ ಪಾತ್ರ ನಿರ್ವಹಿಸಿದ ಬಳಿಕ ಸ್ಟಾರ್ ಕಾಮಿಡಿಯನ್ ಆಗಿದ್ದಾರೆ. ಯಶ್ ಮಾತ್ರವಲ್ಲದೆ ಪುನೀತ್, ಸುದೀಪ್, ದರ್ಶನ್ ಮುಂತಾದ ಎಲ್ಲಾ ಸ್ಟಾರ್‌ಗಳ ಜೊತೆ ಮಿಂಚಿದ್ದಾರೆ.

ಚಿಕ್ಕಣ್ಣಗೆ ಈಗ 41 ವರ್ಷ ವಯಸ್ಸು, ಹಿಂದೊಮ್ಮೆ ಅನುಶ್ರೀ ಜೊತೆ ಲವಿ ಡವಿ ಇದೆ ಅಂತ ರೂಮರ್ ಹಬ್ಬಿತ್ತು! ಈಗ ಅದೆಲ್ಲ ಸುಳ್ಳು ಎಂಬಂತೆ ಅನುಶ್ರೀ ಬೇರೊಬ್ಬನ ವರಿಸಿದ್ದಾರೆ. ಚಿಕ್ಕು ಕೂಡ ಮಹದೇವಪುರದ ಚೆಲುವೆಯೊಬ್ಬಳನ್ನ ಮದುವೆಯಾಗುತ್ತಿದ್ದಾರೆ.

ಶ್ರೀರಂಗಪಟ್ಟಣ ತಾಲೂಕಿನ ಮಹದೇವಪುರ ಗ್ರಾಮ ಶೂಟಿಂಗ್ ಸ್ಪಾಟ್. ಬಹುಷಃ ಯಾವುದೋ ಚಿತ್ರದ ಶೂಟಿಂಗ್ ವೇಳೆ ಇಬ್ಬರಿಗೂ ಲವ್ ಆಗಿರಬಹುದು. ಹುಡುಗಿ ಹೆಸರು ಪಾವನಾ. ಈಕೆಯ ಜೊತೆ ಚಿಕ್ಕಣ್ಣನ ಮದುವೆ ಶೀಘ್ರದಲ್ಲೇ ನಡೆಯಲಿದೆ. ಈಗಾಗಲೇ ಎರಡು ಮನೆಯವರು ಹೂ ಮುಡಿಸುವ ಶಾಸ್ತ್ರ ನೇರವೇರಿಸಿಕೊಂಡಿದ್ದಾರೆ.

ನಿಶ್ಚಿತಾರ್ಥ ಮತ್ತು ಮದುವೆ ದಿನಾಂಕವನ್ನ ಮುಂದಿನ ವಾರ ನಿಗದಿ ಮಾಡಲಿದ್ದಾರಂತೆ. ಅಂದಹಾಗೆ, ಚಿಕ್ಕಣ್ಣ ದೊಡ್ಡ ಮನಸ್ಸು ಕದ್ದ ಚಲುವೆ ಪಾವನಾ, ಮಹದೇವಪುರದ ಕೆ.ಸಿ. ಗೌಡರ ಮಗಳು. ಮೈಸೂರಿನಲ್ಲಿ ಪಿಯುಸಿ ಹಾಗೂ ಉನ್ನತ ಶಿಕ್ಷಣ (ಮೆಕ್ಯಾನಿಕಲ್ ಇಂಜಿನಿಯರ್) ಪೂರೈಸಿದ್ದಾರೆ. ಗ್ರೀನ್ ಔರಾ ಟೆಕ್ನೋ ವೆಂಚರ್ಸ್ ಎಂಬ ಸಂಸ್ಥೆಯನ್ನು ಹುಟ್ಟು ಹಾಕಿರುವ ಪಾವನಾ ಉದ್ಯಮಿ ಕೂಡ ಹೌದು. ಪ್ರಾಣಿಗಳು, ಪ್ರಕೃತಿ ಅಂದರೆ ಪಾವನಾಗೆ ತುಂಬ ಇಷ್ಟ. ಇತ್ತೀಚಿಗೆ ಇನ್‌ಸ್ಟಾಗ್ರಾಮ್‌ನಲ್ಲಿ ಯಾರೋ ನನ್ನ ಹೃದಯ ಕದ್ದಿದ್ದಾರೆ ಎಂಬ ಟೈಟಲ್ ಅಡಿಯಲ್ಲಿ ಒಂದು ಪೋಸ್ಟ್ ಹಂಚಿಕೊಂಡಿದ್ದರು.

ಚಿಕ್ಕಣ್ಣ ಅವರು ಪಾವನಾರ ಕೈ ಹಿಡಿದುಕೊಂಡು ನಿಂತಿರುವ ಫೋಟೋ ಈಗ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ!



Vol. 41 No. 14 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com